24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 73 | ನವದೆಹಲಿ | ಬೆಲೆ ₹10 | ಸೆಪ್ಟಂಬರ್ 8 2026 ಮಂಗಳವಾರ

## ಪ್ರಜಾಸೇವೆ ಅಭಿಯಾನದಲ್ಲಿ ಇಲಾಖಾವಾರು ಅರ್ಜಿ ಸ್ವೀಕಾರ ಅಂಕಿ-ಅಂಶದ ವಿವರಗಳು

**ಪ್ರಜಾಸೇವೆ**

**ಅಹವಾಲು ನಿಮ್ಮದು**

**ಪರಿಹಾರ ನಮ್ಮದು**





**ಬಾಗಿಲಿಗೆ ಬಂತು ಸರ್ಕಾರ**

**ಸೇವೆಗೆ ಇರಲಿ ಸಹಕಾರ**

| ಕ್ರಮ ಸಂಖ್ಯೆ | ಇಲಾಖೆ | ನೋಂದಣಿಯಾದ ಒಟ್ಟು ದೂರುಗಳು | ನೋಂದಣಿಯಾದ ಒಟ್ಟು ಮನವಿಗಳು | ಒಟ್ಟು |
|---|---|---|---|---|
| 1 | ಕಂದಾಯ ಇಲಾಖೆ – Revenue Department | 8385 | 628 | 9013 |
| 2 | ವಸತಿ ಇಲಾಖೆ – Housing Department | 3341 | 738 | 4079 |
| 3 | ನಗರಾಭಿವೃದ್ಧಿ ಇಲಾಖೆ – Urban Development Department | 3836 | 83 | 3919 |
| 4 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – Rural Development and Panchayath Raj Department | 3167 | 327 | 3494 |
| 5 | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ – Food and Civil Supplies Department | 1344 | 79 | 1423 |
| 6 | ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಶೇಷ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ – Department of Women & Child Development, Empowerment of Persons with Disabilities & Senior Citizens | 794 | 32 | 826 |
| 7 | ಇಂಧನ ಇಲಾಖೆ – Energy Department | 482 | 7 | 489 |
| 8 | ಲೋಕೋಪಯೋಗಿ ಇಲಾಖೆ – Public Works Department | 320 | 18 | 338 |
| 9 | ಸಾರಿಗೆ ಇಲಾಖೆ – Transport Department | 266 | 38 | 304 |
| 10 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ – Department of School Education and Literacy | 139 | 20 | 159 |
| 11 | ಒಳಾಡಳಿತ ಇಲಾಖೆ – Home Department | 102 | 52 | 154 |
| 12 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ – Health and Family Welfare Department | 138 | 14 | 152 |
| 13 | ಕಾರ್ಮಿಕ ಇಲಾಖೆ – Labour Department | 134 | 6 | 140 |
| 14 | ಜಲಸಂಪನ್ಮೂಲ ಇಲಾಖೆ – Water Resources Department | 124 | 5 | 129 |
| 15 | ಸಣ್ಣ ನೀರಾವರಿ ಇಲಾಖೆ – Minor Irrigation Department | 123 | 5 | 128 |
| 16 | ಸಮಾಜ ಕಲ್ಯಾಣ ಇಲಾಖೆ – Department of Social Welfare | 104 | 15 | 119 |
| 17 | ಕೃಷಿ ಇಲಾಖೆ – Agriculture Department | 107 | 5 | 112 |
| 18 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ – Forest,Ecology and Environment Department | 69 | 18 | 87 |
| 19 | ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ – Animal Husbandary and Fisheries Department | 45 | 40 | 85 |
| 20 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲನೆ ಮತ್ತು ಜೀವನೋಪಾಯ ಇಲಾಖೆ – Skill Development, Entrepreneurship and Livelihood Department | 80 | 4 | 84 |
| 21 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ–ಆಡಳಿತ) ಇಲಾಖೆ – DPAR(E-Gov) | 71 | 2 | 73 |
| 22 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ – Backward Classes Welfare Department | 53 | 7 | 60 |
| 23 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ – Department of Personnel and Administrative Services (DPAR) | 9 | 49 | 58 |
| 24 | ಅಲ್ಪಸಂಖ್ಯಾತರ ಕಲ್ಯಾಣ, ಹಜ್ & ಔಕಾಫ್ (ವಕ್ಫ್) ಇಲಾಖೆ – Minorites Welfare Department | 46 | 5 | 51 |
| 25 | ಆರ್ಥಿಕ ಇಲಾಖೆ – Finance Department | 35 | 11 | 46 |
| 26 | ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ – Commerce and Industries Department | 30 | 5 | 35 |
| 27 | ಸಹಕಾರ ಇಲಾಖೆ – Department of Cooperation | 33 | 2 | 35 |
| 28 | ಉನ್ನತ ಶಿಕ್ಷಣ ಇಲಾಖೆ – Higher Education Department | 21 | 10 | 31 |
| 29 | ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ – Horticulture and Sericulture Department | 26 | 0 | 26 |
| 30 | ಪ್ರಜಾಸೇವಾ ಇಲಾಖೆ – Praja Seva Department | 14 | 11 | 25 |
| 31 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ – Scheduled Tribes Welfare Department | 23 | 2 | 25 |
| 32 | ಕಾನೂನು ಇಲಾಖೆ – Law Department | 16 | 2 | 18 |
| 33 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ – Youth Empowerment and Sports Department | 12 | 4 | 16 |
| 34 | ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ – Department of Infrastructure Development, Ports and Inland Water Transport | 8 | 6 | 14 |
| 35 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ – Kannada and Culture Department | 9 | 4 | 13 |
| 36 | ವೈದ್ಯಕೀಯ ಶಿಕ್ಷಣ ಇಲಾಖೆ – Medical Education Department | 5 | 3 | 8 |
| 37 | ಪ್ರವಾಸೋದ್ಯಮ ಇಲಾಖೆ – Tourism Department | 6 | 0 | 6 |
| 38 | ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ – Department of Electronics Information Technology Biotechnology and Science and Technology | 4 | 1 | 5 |
| 39 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ – Department of Parliamentary Affairs and Law(DPAL) | 2 | 0 | 2 |
| 40 | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ – Information and PR Department | 1 | 0 | 1 |
| | ಒಟ್ಟು | 23524 | 2258 | 25782 |

## ನಿತ್ಯ ಪಂಚಾಂಗ 8.09.2026 ಮಂಗಳವಾರ



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ ಶ್ರಾವಣ–ಬಾದ್ರಪದ ಮಾಸ**

ಶ್ರಾವಣ ಬಹುಳ, ದ್ವಾದಶಿ, ಪುಷ್ಯ ನಕ್ಷತ್ರ, ಪ್ರದೋಶ್, ಮಂಗಳೌರೀ ವ್ರತ, ಪರ್ಯೂಷಣ್ ಆರಂಭ (ಶ್ವೇತಾಂಬರ), ಹಾವೇರಿ ಗುತ್ತಲ ವೀರಭದ್ರ ಜಾತ್ರೆ, ಸಂತ ಮೇರಿ ಹಬ್ಬ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ನೈಸ್ ಯೋಜನೆ: ಸಿಎಂ ಡಿಕೆಶಿಗೆ ಮಾಜಿ ಪ್ರಧಾನಿ ದೇವೇಗೌಡರಿಂದ ಪತ್ರಾಸ್ತ್ರ

## ಭೂಮಿ ಕಳೆದುಕೊಂಡವರಿಗೆ ನಿವೇಶನ ಹಂಚಿಕೆ ಮಾಡುವ ಸಂಪುಟ ನಿರ್ಧಾರಕ್ಕೆ ವಿರೋಧ

**ಬೆಂಗಳೂರು, ಸೆ.7:** ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಸಂಸ್ಥೆಗೆ ಸಂಬಂಧಿಸಿದಂತೆ ರಾಜ್ಯ ಸಚಿವ ಸಂಪುಟ ಕೈಗೊಂಡಿರುವ ತೀರ್ಮಾನವನ್ನು ಕಟುವಾಗಿ ಖಂಡಿಸಿರುವ ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸುದೀರ್ಘ ಬಹಿರಂಗ ಪತ್ರ ಬರೆದು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ನ್ಯಾಯಾಲಯದ ಆದೇಶ ಉಲ್ಲಂಘನೆ ಆರೋಪ:** ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗೆ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ 1,453 ನಿವೇಶನಗಳನ್ನು ಹಂಚಿಕೆ ಮಾಡಲು ನೈಸ್ ಸಂಸ್ಥೆಗೆ ರಾಜ್ಯ ಸರ್ಕಾರಿ ಸಂಪುಟ ಸಭೆಯಲ್ಲಿ ಅನುಮತಿ ನೀಡಿರುವುದು ಕಾನೂನುಬಾಹಿರ ಎಂದು ದೇವೇಗೌಡರು ಪತ್ರದಲ್ಲಿ ದೂರಿದ್ದಾರೆ. ಸುಪ್ರೀಂ ಕೋರ್ಟ್ ಆದೇಶಗಳ ಆಶಯಕ್ಕೆ ವಿರುದ್ಧವಾಗಿ ಸಚಿವ ಸಂಪುಟ ನಿರ್ಧಾರ ತಳೆದಿದೆ ಎಂದು ಅವರು ಆಪಾದಿಸಿದ್ದಾರೆ.



**ಕಾಂಗ್ರೆಸ್ ಸರ್ಕಾರದ ಹಳೆಯ ನಿಲುವಿನ ನೆನಪು:** 2016ರಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿದ್ದಾಗ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಎರಡು ಪ್ರತ್ಯೇಕ ಪ್ರಮಾಣಪತ್ರಗಳನ್ನು ಪತ್ರದಲ್ಲಿ ನೆನಪಿಸಿರುವ ಗೌಡರು, "ಮೂಲ ಒಪ್ಪಂದದ ಪ್ರಕಾರ ರಸ್ತೆ ಇಂಟರ್‌ಚೇಂಜ್ ಜಾಗಗಳಲ್ಲಿ ವಸತಿ ನಿವೇಶನ ಅಥವಾ ಲೇಔಟ್‌ಗಳನ್ನು ರಚಿಸಲು ಅವಕಾಶವಿಲ್ಲ ಎಂದು ಅಂದು ನಿಮ್ಮ ಸರ್ಕಾರವೇ ನ್ಯಾಯಾಲಯಕ್ಕೆ ತಿಳಿಸಿತ್ತು. ಹೈಕೋರ್ಟ್ ವಿಭಾಗೀಯ ಪೀಠ ನೀಡಿದ್ದ ಆದೇಶವನ್ನು ಸಹ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿ ಜಯಗಳಿಸಿತ್ತು. ಈಗ ಅದೇ ಸರ್ಕಾರ ತನ್ನದೇ ಹಳೆಯ ನಿಲುವಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿ ರುವುದು ಸಾರ್ವಜನಿಕರನ್ನು ವಂಚಿಸುವ ತಂತ್ರ" ಎಂದು ಕಟುವಾಗಿ ವಾಗ್ದಾಳಿ ನಡೆಸಿದ್ದಾರೆ.

**ಸುಪ್ರೀಂ ಕೋರ್ಟ್ ತೀರ್ಪಿನ ಸ್ಪಷ್ಟನೆ:** ರಸ್ತೆ ಮತ್ತು ಮೂಲಸೌಕರ್ಯಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ರಿಯಲ್ ಎಸ್ಟೇಟ್ ಅಥವಾ ವಸತಿ ನಿವೇಶನಗಳನ್ನು ನಿರ್ಮಿಸುವುದು ಮೂಲ ಯೋಜನೆಗೆ ಮತ್ತು ತೀರ್ಪಿಗೆ ಮಾಡುವ ದ್ರೋಹ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡುವ ನೈಜ ಉದ್ದೇಶಕ್ಕೆ ವಿರುದ್ಧವಾಗಿ ಇಂತಹ ಲೇಔಟ್‌ಗಳ ರಚನೆಗೆ ಅನುಮತಿ ನೀಡುವುದು ಕಾನೂನಿನ ಉಲ್ಲಂಘನೆಯಾಗಿದೆ ಎಂದು ಪತ್ರದಲ್ಲಿ ಎಚ್ಚರಿಸಲಾಗಿದೆ.

ನೈಸ್ ಸಂಸ್ಥೆಯ ಅಕ್ರಮಗಳಿಗೆ ಸರ್ಕಾರವೇ ನೆರವಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿರುವ ಹೆಚ್.ಡಿ. ದೇವೇಗೌಡರು, ಕಬಳಿಕೆಯಾಗಿರುವ ಭೂಮಿ ಹಾಗೂ ಸಂಕೀರ್ಣ ಕಾನೂನು ಹೋರಾಟದ ಹಿನ್ನೆಲೆಯಲ್ಲಿ ಈ ನಿರ್ಧಾರವನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

# ಕೆಪಿಎಸ್‌ಸಿ ಹಗರಣದ ಬಗ್ಗೆ ಮೌನವೇಕೆ: ಬಿಜೆಪಿಗೆ ಸಚಿವ ಖರ್ಗೆ ತಿರುಗೇಟು

**ಬೆಂಗಳೂರು, ಸೆ.7:** ಕೆಪಿಎಸ್‌ಸಿ ಪರೀಕ್ಷಾ ಅಕ್ರಮ ಸಂಬಂಧ ತಮ್ಮ ರಾಜೀನಾಮೆಗೆ ಪಟ್ಟು ಹಿಡಿದಿರುವ ಬಿಜೆಪಿ ನಾಯಕರಿಗೆ ಸಚಿವ ಪ್ರಿಯಾಂಕ್ ಖರ್ಗೆ ಸಾಲು ಸಾಲು ಪ್ರಶ್ನೆಗಳನ್ನು ಕೇಳುವ ಮೂಲಕ ತಿರುಗೇಟು ನೀಡಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಅವರು, ತಮ್ಮ ರಾಜೀನಾಮೆಗೆ ಒತ್ತಾಯಿಸುತ್ತಿರುವ ಬಿಜೆಪಿ ನಾಯಕರಿಗೆ ಅದಕ್ಕೆ ಪೂರಕವಾಗಿ ನಿರ್ದಿಷ್ಟ ಮತ್ತು ಸೂಕ್ತ ಕಾರಣವೇ ಇಲ್ಲ ಹಾಗೂ ಗಲಾಟೆ ಮಾಡುವುದರಿಂದ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ ಬಿಜೆಪಿ



ನಾಯಕರ ಮೌನವನ್ನು ಪ್ರಿಯಾಂಕ್ ಖರ್ಗೆ ಕಟುವಾಗಿ ಪ್ರಶ್ನಿಸಿದ್ದಾರೆ.

ಕೆಪಿಎಸ್‌ಸಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಎನ್ನಲಾದ ಬಸವರಾಜ ಕನ್ನಾಳೆ ವಿಚಾರದಲ್ಲಿ ಬಿಜೆಪಿ ನಾಯಕರು ಯಾಕೆ ತುಟಿ ಬಿಚ್ಚುತ್ತಿಲ್ಲ. ಆತ ಅಧಿಕೃತ ಬಿಜೆಪಿ ಸಭೆಗಳಲ್ಲಿ ಭಾಗವಹಿಸುವುದು, ನಾಯಕರೊಂದಿಗೆ ವಿದೇಶಿ ಪ್ರವಾಸ ಮಾಡುವುದು ಮತ್ತು ಹಿರಿಯ ನಾಯಕರ ಆಶೀರ್ವಾದ ಪಡೆಯುವುದು ಬಹಿರಂಗವಾಗಿದೆ. ಅಲ್ಲದೆ, ಅವರ ಹುಟ್ಟುಹಬ್ಬದ ಆಚರಣೆಯಲ್ಲಿ ಭಾಗವಹಿಸಿ, ಅವರ ಉದ್ಯಮಗಳಿಗೆ ಚಾಲನೆ ನೀಡಿ ಅತ್ಯಂತ ಪ್ರೀತಿಯಿಂದ ಉಣಬಡಿಸಿದ ಬಿಜೆಪಿ ನಾಯಕರು, ಈಗ ಮೌನ ವಹಿಸಿ ನನ್ನ ರಾಜೀನಾಮೆ ಕೇಳುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದು ಲೇವಡಿ ಮಾಡಿದ್ದಾರೆ.

ಬಸವರಾಜ ಕನ್ನಾಳೆ ದೇಶ ಬಿಟ್ಟು ಓಡಿಹೋಗಲು ಯತ್ನಿಸಿದ ಆರೋಪ ಹಾಗೂ ಶಿವಶಂಕರಪ್ಪ ಸಾಹುಕಾರ ಎಂಬವರ ವಿಚಾರದಲ್ಲಿಯೂ ಬಿಜೆಪಿ ನಾಯಕರು ಮೌನ ತಾಳಿರುವುದೇಕೆ ಎಂದು ಖರ್ಗೆ ಪ್ರಶ್ನಿಸಿದ್ದಾರೆ. ಇಷ್ಟೇ ಅಲ್ಲದೆ, ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ಮಾಡಲು ಬಿಜೆಪಿ ನಾಯಕರು ಎಷ್ಟೆಷ್ಟು ಹಣ ವಸೂಲಿ ಮಾಡಿದ್ದಾರೆ ಎಂಬ ಪ್ರಮುಖ ಪ್ರಶ್ನೆಯನ್ನೂ ಅವರು ಎತ್ತಿದ್ದಾರೆ. ಕೆಪಿಎಸ್‌ಸಿ ಅಕ್ರಮದ ವಿರುದ್ಧ ನಿಜವಾದ ಹೊಣೆಗಾರಿಕೆ ಕೇಳಲು ಅಥವಾ ಈ ಅಕ್ರಮದ ಬಗ್ಗೆ ಧ್ವನಿ ಎತ್ತಲು ಎಷ್ಟು ಬಿಜೆಪಿ ನಾಯಕರು ಮುಂದಾಗಿದ್ದಾರೆ ಎಂದು ಕೇಳುವ ಮೂಲಕ ಪ್ರಿಯಾಂಕ್ ಖರ್ಗೆ ಬಿಜೆಪಿ ನಾಯಕರಿಗೆ ನೇರ ಸವಾಲು ಹಾಕಿದ್ದಾರೆ.

# ಅಹಿಂದಕ್ಕೆ ಎಲ್ಲರೂ ನಾಯಕರೇ: ಸಚಿವ ಸತೀಶ್ ಜಾರಕಿಹೊಳಿ

**ಬೆಂಗಳೂರು, ಸೆ.7:** ಹಿಂದುಳಿದ ಒಕ್ಕೂಟ ಸಮಾವೇಶಕ್ಕೆ ನಂಗೆ ಕರೆದಿಲ್ಲ ನಾನು ಹೋಗಿಲ್ಲ ಅಷ್ಟೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಆಹ್ವಾನ ಕೊಟ್ಟಿಲ್ಲ, ಇದರ ಬಗ್ಗೆ ನಾವೇನು ಹೇಳೋದು. ಅದು ನನಗೆ ಸಂಬಂಧಪಟ್ಟಿಲ್ಲ ನನಗೆ ಕೇಳಿದರೆ ಹೇಗೆ ಇಂದು ಮಾಧ್ಯಮದವರನ್ನೇ ಪ್ರಶ್ನಿಸಿದರು ಯಾಕೆ ಹೀಗೆ ಮಾಡಿದ್ರು ಅಂತ ಆಯೋಜಕರನ್ನ ಕೇಳಬೇಕಿತ್ತು. ಇದು ಎಷ್ಟರ ಮಟ್ಟಿಗೆ ಪರಿಣಾಮ ಆಗುತ್ತೆ ನೋಡೋಣ ಎಂದರು



ಅದಕ್ಕಾಗಿಯೇ ಒಂದು ಕಾರ್ಯತಂತ್ರ ರೂಪಿಸೋಣ. ಅಹಿಂದಕ್ಕೆ ಎಲ್ಲರೂ ನಾಯಕರೇ ನಾನು ಸಿದ್ದರಾಮಯ್ಯ, ಮಹದೇವಪ್ಪ ಎಲ್ಲರೂ ಇದ್ದಾರೆ. ನಾವು ಹಿಂದೆ ಹುಬ್ಬಳ್ಳಿಯಲ್ಲಿ ಮಾಡಿದ್ವಿ ಈಗ ಅವರು ಇಲ್ಲಿ ಮಾಡಿದ್ದಾರೆ ಅಷ್ಟೇ. ಅದೇಗೆ ಹೋಳಾಗಿ ಹೋಗುತ್ತದೆ. ಸಮಾಜದ ಪರವಾಗಿ ಯಾರೇ ಇದ್ದರೂ ಇದ್ರೆ ಅವರೂ ಲೀಡರ್ ನೇ ಜನ ಒಪ್ಪುವವರು ಅಹಿಂದ ಲೀಡರ್ ಆಗ್ತಾರೆ ಅಷ್ಟೇ ಎಂದು ಹೇಳಿದರು. ಪಿರಿಯಾಪಟ್ಟಣದಲ್ಲೂ ಮತ್ತೆ ಯತೀಂದ್ರ ಹೇಳಿದ್ದಾರೆ. ಯತೀಂದ್ರ ಅವರೂ ನನ್ನ ಪರ ಮತ್ತೆ ಮಾತನಾಡಿದ್ದಾರೆ. ನಾನು ಯಾರ ಮೇಲೂ ಸಿಟ್ಟು ಹೊರಗೆ ಹಾಕಲ್ಲ. ಅದರ ಅವಶ್ಯಕತೆ ನನಗಿಲ್ಲ. ನಾನು ಕೆಲಸ ಮಾಡುವವನು ಅಷ್ಟೆ. ಈ ಒಡಕು ಹೆಚ್ಚಾದ್ರೆ ಎಫೆಕ್ಟ್ ಆಗೇ ಆಗುತ್ತದೆ. ಈ ಒಡಕು ಹೆಚ್ಚು ಮಾಡುವ ಜನ ಇದ್ದಾರೆ ಇಲ್ಲ ಅಂತ ಹೇಳಲ್ಲ. ಬೇಕು ಅಂತನೇ ಒಡಕು ಮಾಡಲು ಕೆಲವರು ಇದ್ದಾರೆ ಎಂದರು ಪಕ್ಷ ಅಧಿಕಾರಕ್ಕೆ ಬರಬಾರದು ಅಂತ ಕೆಲವರು ಹೀಗೆ ಮಾಡ್ತಾ ಇದ್ದಾರೆ. ಅವರ ಉದ್ದೇಶ ಹಾಗೆ ಇದೆ ಎಂದು ತಿಳಿಸಿದರುಸತೀಶ್ ಜಾರಕಿಹೊಳಿ ಡಿಕೆಶಿ ಜೊತೆ ಬಾಂಧವ್ಯ ಅಷ್ಟೇನು ಇಲ್ಲ. ಅವರು ಮುಖ್ಯಮಂತ್ರಿ ಇದ್ದಾರೆ. ಹಾಗಾಗ ನಾವು ಹೋಗಬೇಕಾಗುತ್ತದೆ. ಇದನ್ನ ಬಾಂಧವ್ಯ ಅಂದ್ರೆ ಏನು ಹೇಳಬೇಕು ಎಂದರು. ನಮಗೆ ಎಲ್ಲಿಯೂ ಹಿನ್ನಡೆಯಾಗಿಲ್ಲ. ನಾವು ಮೊನ್ನೆ ಪರಿಶಿಷ್ಟ ಪಂಗಡದ ಸಮಾವೇಶ ಮಾಡಿದ್ದೆವು. ಸಿದ್ದರಾಮಯ್ಯನವರನ್ನ ಕರೆಯಲಿಲ್ಲ ಅಂದ್ರೆ ಹೇಗೆ ನಾವೇ ಸರಿಪಡಿಸಿಕೊಳ್ಳೋ ಕೆಲಸ ಮಾಡುತ್ತೇವೆ. ಆಗದಿದ್ದರೆ ಹೈಕಮಾಂಡ್ ಇದೆ ನೋಡುತ್ತದೆ ಎಂದು ಜಾರಕಿಹೊಳಿ ಹೇಳಿದರು.

# ಮಾಜಿ ಸಿಎಂ ಹೊಗಳುತ್ತಲೇ ಪರೋಕ್ಷವಾಗಿ ಅಸಮಾಧಾನ ಹೊರಹಾಕಿದ ಮಾಜಿ ಸಚಿವ ಎಚ್.ಸಿ.ಮಹದೇವಪ್ಪ

**ಬೆಂಗಳೂರು, ಸೆ.7:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಹಲವು ನಾಯಕರು ಇದೀಗ ಒಂದೊಂದಾಗಿ ಅಂತರ ಕಾಯ್ದುಕೊಳ್ಳುತ್ತಿರುವ ಬೆಳವಣಿಗೆ ಕಾಂಗ್ರೆಸ್ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಸಚಿವ ಸ್ಥಾನ ಸಿಕ್ಕವರು ಹಾಗೂ ಸಿಗದವರು ತಮ್ಮದೇ ಕಾರಣಗಳಿಗೆ ಅಸಮಾಧಾನ ವ್ಯಕ್ತಪಡಿಸುತ್ತಿರುವ ನಡುವೆಯೇ, ಮಾಜಿ ಸಚಿವ ಎಚ್.ಸಿ. ಮಹದೇವಪ್ಪ ಅವರ ಹೇಳಿಕೆಗಳು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿವೆ. ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಮಹದೇವಪ್ಪ ಅವರು ಸಿದ್ದರಾಮಯ್ಯ ಅವರನ್ನು ಹೊಗಳುತ್ತಲೇ ತಮ್ಮ ಅಸಮಾಧಾನವನ್ನು ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಅಹಿಂದ ಸಮಾವೇಶಕ್ಕೆ ಒಂದು ಕಾಲದಲ್ಲಿ ಸಿದ್ದರಾಮಯ್ಯ ಅವರ ಆಪ್ತರಾಗಿದ್ದ ಸತೀಶ್ ಜಾರಕಿಹೊಳಿ ಹಾಗೂ ಮಹದೇವಪ್ಪ ಅವರನ್ನು ಆಹ್ವಾನಿಸದಿರುವುದು ಚರ್ಚೆಗೆ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ



ಮಹದೇವಪ್ಪ, ಅಹಿಂದ ನಾಯಕತ್ವ ಸ್ವಯಂ ಘೋಷಣೆಯಿಂದ ಬರುವುದಿಲ್ಲ ಎಂದು ಪರೋಕ್ಷವಾಗಿ ಟಾಂಗ್ ನೀಡಿದರು.

ಹುಬ್ಬಳ್ಳಿಯಲ್ಲಿ ನಡೆದ ಅಹಿಂದ ಸಮಾವೇಶವನ್ನು ತಾನೊಬ್ಬನೇ ನಿಂತು ರೂಪಿಸಿದ್ದೆ. ಅಹಿಂದ ನಾಯಕತ್ವ ಎಂದರೆ ಕೇವಲ ಭಾಷಣ ಮಾಡಿ ಹೋಗುವುದಲ್ಲ. ಸಾಮಾಜಿಕ ನ್ಯಾಯ ಹಾಗೂ ಹಿಂದುಳಿದ ವರ್ಗಗಳ ಪರ ಬದ್ಧತೆಯಿಂದ ಕೆಲಸ ಮಾಡಬೇಕು. ಸಂಘಟನೆ ನಡೆಸಲು ಪ್ರಜಾಪ್ರಭುತ್ವದ ರೀತಿಯಲ್ಲಿ ನಿರ್ಣಯಗಳು ನಡೆಯಬೇಕು ಎಂದು ಹೇಳಿದರು.

ಅಹಿಂದ ನಾಯಕ ಯಾರು ಎಂಬುದು ಭಾಷಣದಿಂದ ನಿರ್ಧಾರವಾಗುವುದಿಲ್ಲ. ಸಭೆ ಸೇರಿ ನಿರ್ಣಯ ಮಾಡಿದ ಮಾತ್ರಕ್ಕೆ ನಾಯಕತ್ವ ಸಿಗುವುದಿಲ್ಲ. ಇದು ಪ್ರಜಾಪ್ರಭುತ್ವ; ಹಾಗೆಲ್ಲ ನಡೆಯುವುದಿಲ್ಲ ಎಂದು ಮಹದೇವಪ್ಪ ಹೇಳಿದರು.

ಕಾಂಗ್ರೆಸ್‌ನಲ್ಲಿ ಒಗ್ಗಟ್ಟಿದೆ. ನಾವೆಲ್ಲರೂ ಸರಿಯಾದ ಹಾದಿಯಲ್ಲಿದ್ದೇವೆ ಎಂದು ಹೇಳಿದ ಅವರು, ಅಹಿಂದ ಚಳವಳಿ ಒಬ್ಬರಿಂದ ಮಾತ್ರ ನಿರ್ಮಾಣವಾಗಿಲ್ಲ. ಹುಬ್ಬಳ್ಳಿಯಲ್ಲಿ ನಡೆದ ಮೊದಲ ಅಹಿಂದ ಸಮಾವೇಶದ ಸಂದರ್ಭದಲ್ಲಿ ತಾನೊಬ್ಬನೇ ಕುಳಿತು ಅದರ ರೂಪುರೇಷೆ ಸಿದ್ಧಪಡಿಸಿದ್ದೆ ಎಂದು ತಿಳಿಸಿದರು.

ಇತ್ತೀಚೆಗೆ ನಡೆದ ಅಹಿಂದ ಸಮಾವೇಶವನ್ನು ಕೇವಲ ಓಬಿಸಿ ಸಮಾವೇಶ ಎಂದು ಕರೆಯಬಾರದು. ಕೆಲವು ವರ್ಗಗಳನ್ನು ಹೊರಗಿಟ್ಟು ಸಮಾವೇಶ ನಡೆಸಲಾಗಿದೆ ಎಂಬ ಅಭಿಪ್ರಾಯ ಸರಿಯಲ್ಲ. ಅದು ಹಿಂದುಳಿದ ವರ್ಗಗಳ ಸಮಾವೇಶವಾಗಬೇಕು. ಕಾಂಗ್ರೆಸ್‌ನಿಂದ ಜೈ ಬಾಪು, ಜೈ ಭೀಮ್ ಕಾರ್ಯಕ್ರಮಗಳನ್ನೂ ನಡೆಸಿದ್ದೇವೆ ಎಂದು ಹೇಳಿದರು. ಸಿದ್ದರಾಮಯ್ಯ ಅವರನ್ನು ಭೇಟಿಯಾಗಿಲ್ಲ. ಅವರು ಇನ್ನು ಸಕ್ರಿಯ ರಾಜಕಾರಣದಲ್ಲಿ ಇರುವುದಿಲ್ಲ ಎಂದು ಏಕೆ ಹೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ ಎಂದರು. ಸಿದ್ದರಾಮಯ್ಯ ನನ್ನ ದೊಡ್ಡ ಅಣ್ಣನಂತೆ. ಇಷ್ಟು ವರ್ಷ ಅವರನ್ನು ಹಾಡಿ ಹೊಗಳಿ, ಈಗ ಬೇರೆ ಮಾತನಾಡಿದರೆ ಹೇಗೆ? ನಾನು ಅಂತಹ ಗುಂಪಿಗೆ ಸೇರಿದವನಲ್ಲ ಎಂದು ಸ್ಪಷ್ಟಪಡಿಸಿದರು.

### ಜೆಡಿಎಸ್ ಸೇರುವ ವದಂತಿಗೆ ತೆರೆ

**ಮಹದೇವಪ್ಪ ಅವರು ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿ ಕುರಿತು ತೀವ್ರವಾಗಿ ಪ್ರತಿಕ್ರಿಯಿಸಿದ ಅವರು, ತಾವು ಕಾಂಗ್ರೆಸ್ ಸಂಘಟನೆಯಲ್ಲೇ ಸಕ್ರಿಯವಾಗಿರುವುದಾಗಿ ಹೇಳಿದರು. ನಾನು ಕಾಂಗ್ರೆಸ್ ಸಂಘಟನೆ ಮಾಡುತ್ತಿದ್ದೇನೆ. ಜೆಡಿಎಸ್‌ಗೆ ಸೇರುತ್ತೇನೆ ಎಂದು ನಾನೇನಾದರೂ ಹೇಳಿದ್ದೇನೆಯೇ, ಅನಗತ್ಯವಾಗಿ ದಾರಿತಪ್ಪಿಸುವ ಪ್ರಯತ್ನ ಮಾಡಬಾರದು ಎಂದು ಹೇಳಿದರು. ಈ ಮೂಲಕ ಕಾಂಗ್ರೆಸ್‌ನಲ್ಲೇ ತಮ್ಮ ರಾಜಕೀಯ ಚಟುವಟಿಕೆಗಳನ್ನು ಮುಂದುವರಿಸುವುದಾಗಿ ಮಹದೇವಪ್ಪ ಸ್ಪಷ್ಟ ಸಂದೇಶ ನೀಡಿದ್ದಾರೆ.**

# ಶಾಲಾ ಮಕ್ಕಳಿಗೆ ವಿತರಿಸುವ ಶೂ–ಸಾಕ್ಸ್ ಯೋಜನೆಯಲ್ಲೂ ಕಮೀಷನ್: ಆರೋಪ

**ಬೆಂಗಳೂರು, ಸೆ.7:** ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ವಿತರಿಸುವ ಶೂ–ಸಾಕ್ಸ್‌ಗಳ ಯೋಜನೆಯಲ್ಲೂ ಶೇ.40 ಕಮೀಷನ್ ಹೊಡೆದು ಮಕ್ಕಳಿಗೆ ಕಳಪೆ ಸಾಮಗ್ರಿಗಳನ್ನು ಪೂರೈಸಿರುವುದು ರಾಜ್ಯದ ಭ್ರಷ್ಟ ಕಾಂಗ್ರೆಸ್ ಸರ್ಕಾರದ ನಿರ್ಲಜ್ಜತನಕ್ಕೆ ಮತ್ತೊಂದು ಉದಾಹರಣೆಯಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.

ಕಳಪೆ ಗುಣಮಟ್ಟದ್ದು ಎಂಬ ಆರೋಪದ ಬೆನ್ನಲ್ಲೇ ರಾಜ್ಯ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್. ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ಗುತ್ತಿಗೆದಾರರ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಧೈರ್ಯವಿದೆಯೇ, ಧಾರವಾಡ, ರಾಯಚೂರು, ತುಮಕೂರು, ಬಳ್ಳಾರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸರ್ಕಾರ ವಿತರಿಸಿದ ಶೂಗಳ ಅಡಿಭಾಗ (ಸೋಲ್) ಕಿತ್ತುಹೋಗಿವೆ, ಹೊಲಿಗೆಗಳು ಬಿಟ್ಟುಕೊಂಡಿವೆ. ಒಂದು ವಾರವೂ ಬಾಳಿಕೆ ಬಾರದ ಇಂತಹ ಕಳಪೆ ಬೂಟುಗಳನ್ನು ವಿತರಿಸಿ ಮಕ್ಕಳ ಭಾವನೆಗಳ ಜೊತೆ ಆಟವಾಡುತ್ತಿದ್ದೀರಾ, ಮತ್ತೆ ಪೋಷಕರೇ ಕೈಯಿಂದ ಹಣ ಹಾಕಿ ಖರೀದಿಸಬೇಕಾದರೆ ಈ ಯೋಜನೆಯ ನೈಜ ಉದ್ದೇಶವೇನು, ಪೂರೈಕೆದಾರರ ಜೊತೆ ಶಾಮೀಲಾಗಿ, ಯಾವುದೇ ಗುಣಮಟ್ಟದ ಪರಿಶೀಲನೆ ನಡೆಸದೆ ಕಳಪೆ ಶೂಗಳನ್ನು ಶಾಲೆಗಳಿಗೆ ಸರಬರಾಜು ಮಾಡಿದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಧೈರ್ಯವಿದೆಯೇ ಎಂದು ಅಶೋಕ್ ಪ್ರಶ್ನಿಸಿದ್ದಾರೆ.

ಅಧಿಕಾರದ ಅಮಲಿನಲ್ಲಿ ತೇಲುತ್ತಿರುವ



ಮುಖ್ಯಮಂತ್ರಿಗಳೇ, ಸರ್ಕಾರಿ ಶಾಲೆಗಳ ಬಡ ಮಕ್ಕಳ ಪಾದರಕ್ಷೆಯಲ್ಲೂ ಕಮಿಷನ್ ಹೊಡೆಯುವ ದರಿದ್ರ ಸ್ಥಿತಿಗೆ ನಿಮ್ಮ ಸರ್ಕಾರ ತಲುಪಿರುವುದು ತೀರಾ ನಾಚಿಕೆಗೇಡು. ಕೂಡಲೇ ಈ ಕಳಪೆ ಶೂ ಪೂರೈಸಿದ ಗುತ್ತಿಗೆದಾರರನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿ, ತನಿಖೆ ನಡೆಸಿ, ಬಡ ಮಕ್ಕಳಿಗೆ ತಕ್ಷಣವೇ ಅತ್ಯುತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್ ವಿತರಿಸಬೇಕು ಎಂದವರು ಆಗ್ರಹಿಸಿದ್ದಾರೆ. ಕಾವೇರಿ 6ನೇ ಹಂತದ ಹೆಸರಿನಲ್ಲಿ 7,000 ಕೋಟಿ ಹೊಸ ಲೂಟಿಗೆ ರಾಜ್ಯ ಸರ್ಕಾರ ಸಿದ್ಧತೆ ನಡೆಸಿದ್ದು, ಸೋರಿಕೆ ಮತ್ತು ಅಕ್ರಮ ಸಂಪರ್ಕ ತಡೆಯುವಲ್ಲಿ ಸರ್ಕಾರ ವಿಫಲವಾಗಿದೆ. ಹಳೆಯ ಜಾಲ ಸರಿಪಡಿಸದೆ 7,000 ಕೋಟಿ ಹೊಸ ಯೋಜನೆ ಏಕೆ. ಜನರಿಗೆ ನೀರಿನ ಸಮಸ್ಯೆಯಾದರೆ, ಸರ್ಕಾರಕ್ಕೆ ಕಮಿಷನ್ ಚಿಂತೆಯಾಗಿದೆ. ಮೊದಲು ಸೋರಿಕೆ ತಡೆಯಿರಿ, ಬಳಿಕ ಹೊಸ ಯೋಜನೆ ಮಾಡಿ ಎಂದವರು ಕಿಡಿಕಾರಿದ್ದಾರೆ.

# ಪಾದಯಾತ್ರೆ ರಾಜ್ಯ ಸರ್ಕಾರದ ವಿರುದ್ಧದ ಜನಾಕ್ರೋಶವಾಗಿದೆ: ಭರತ್ ಬೊಮ್ಮಾಯಿ

**ಶಿಗ್ಗಾವಿ:** ಭಾರತೀಯ ಜನತಾ ಪಾರ್ಟಿಯ ವತಿಯಿಂದ ರಾಜ್ಯದ ಭ್ರಷ್ಟ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಮತ್ತು ರೈತ ವಿರೋಧಿ ಧೋರಣೆಯ ವಿರುದ್ಧ ಏರ್ಪಡಿಸಿದ ಬಳ್ಳಾರಿ ಚಲೋ ಪಾದಯಾತ್ರೆಯಲ್ಲಿ ಶಿಗ್ಗಾಂವ ಸವಣೂರ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಯುವಮುಖಂಡ ಭರತ ಬೊಮ್ಮಾಯಿರವರು ಭಾಗವಹಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಗಂಗಾವತಿಯಿಂದ ಕಂಪ್ಲಿವರೆಗೆ ನಡೆದ ಪಾದಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸಾಥ್ ನೀಡಿದ ಬಿಜೆಪಿ ಯುವ ಮುಖಂಡ ಭರತ್ ಬೊಮ್ಮಾಯಿ, ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು ವಾಲ್ಮೀಕಿ ನಿಗಮದ ಹಣ ನುಂಗಿ ಎಸ್ಟಿ ಸಮುದಾಯಕ್ಕೆ ದ್ರೋಹ ಮಾಡಿದೆ.



ರಾಜ್ಯದಲ್ಲಿ ತೀವ್ರ ಬರ ಉಂಟಾಗಿದ್ದು, ಇನ್ನೂ ಎಪ್ಪತ್ತೈದು ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಿ ತಕ್ಷಣ ಬರ ಪರಿಹಾರ ಹಣ ಬಿಡುಗಡೆ ಮಾಡಿ ರೈತರ ನೆರವಿಗೆ ಬರಬೇಕು ಎಂದು ಆಗ್ರಹಿಸಿದ್ದಾರೆ.

ಬಳ್ಳಾರಿ ಚಲೊ ಪಾದಯಾತ್ರೆಯಲ್ಲಿ ಪ್ರತಿದಿನ ರೈತರು, ಮಹಿಳೆರು, ಕೂಲಿ ಕಾರ್ಮಿಕರು ಸ್ವಯಂ ಪ್ರೇರಿತವಾಗಿ ಭಾಗವಹಿಸುತ್ತಿರುವುದು ರಾಜ್ಯ ಸರ್ಕಾರದ ವಿರುದ್ಧ ಜನರಿಗಿರುವ ಆಕ್ರೋಶವನ್ನು ತೋರಿಸುತ್ತದೆ. ಬಿಜೆಪಿಯ ಈ ಪಾದಯಾತ್ರೆ ರಾಜ್ಯ ಸರ್ಕಾರಕ್ಕೆ ನಡುಕ ಹುಟ್ಟಿಸಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಈ ಸಂಧರ್ಭದಲ್ಲಿ ಭಾರತೀಯ ಜನತಾ ಪಾರ್ಟಿಯ ರಾಜ್ಯಾಧ್ಯಕ್ಷರಾದ ಬಿ.ವೈ ವಿಜಯೇಂದ್ರ, ರಾಜ್ಯ ಯುವ ಮೋರ್ಚಾ ಅಧ್ಯಕ್ಷರಾದ ಧೀರಜ್ ಮುನಿರಾಜು ಸೇರಿದಂತೆ ಪಕ್ಷದ ಪ್ರಮುಖರು ಹಾಜರಿದ್ದರು

# ಸಿಇಓಗಳಿಗೆ ಗ್ರಾಮಭೇಟಿ ಕಡ್ಡಾಯ: ಸಚಿವ ಈಶ್ವರ ಖಂಡ್ರೆ

**ಬೆಂಗಳೂರು, ಸೆ.7:** ರಾಜ್ಯದ ಎಲ್ಲ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಓ) ವಾರದಲ್ಲಿ ಕನಿಷ್ಠ 2 ದಿನ 4–5 ಗ್ರಾಮಗಳಿಗಾದರೂ ದಿಢೀರ್ ಭೇಟಿ ನೀಡಿ ಖುದ್ದು ಪರಿಶೀಲಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ. ಈ ಸಂಬಂಧ ಇಲಾಖೆಯ ಕಾರ್ಯದರ್ಶಿಯವರಿಗೆ ಲಿಖಿತ ಸೂಚನೆ ನೀಡಿರುವ ಅವರು, ಸಿಇಓಗಳು ಗ್ರಾಮ ಪಂಚಾಯತಿಗಳಿಗೆ ಪೂರ್ವ ಸೂಚನೆ ನೀಡದೆ ಭೇಟಿ ನೀಡಿ, ಹಾಜರಾತಿ, ಪಿಡಿಓ ಮತ್ತು ತಾಲೂಕು ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯವೈಖರಿ ಪರಾಮರ್ಶಿಸುವುದರ ಜೊತೆಗೆ, ಜನರ ಅಹವಾಲು ಆಲಿಸಿ ಸ್ಥಳದಲ್ಲೇ ಕೆಲವು ಸಮಸ್ಯೆಗಳನ್ನಾದರೂ ಪರಿಹರಿಸಬೇಕು ಎಂದು ತಿಳಿಸಿದ್ದಾರೆ.



ರಾಜ್ಯದ 31 ಜಿಲ್ಲೆಗಳಲ್ಲಿ 5900ಕ್ಕೂ ಅಧಿಕ ಗ್ರಾಮ ಪಂಚಾಯತಿಗಳಿದ್ದು, 57,879 ವಸತಿ ಪ್ರದೇಶಗಳಿವೆ. ರಾಜ್ಯದ ಒಟ್ಟು ಜನಸಂಖ್ಯೆ 6 ಕೋಟಿ 13 ಲಕ್ಷ ಇದ್ದು, ಈ ಪೈಕಿ 26,589 ಹಳ್ಳಿಗಳಲ್ಲಿ 4 ಕೋಟಿ 45 ಲಕ್ಷ ಜನರು ವಾಸುತ್ತಿದ್ದಾರೆ. ಅಂದರೆ ರಾಜ್ಯದ ಮುಕ್ಕಾಲು ಭಾಗ ಜನಸಂಖ್ಯೆ ಇರುವುದೇ ಗ್ರಾಮೀಣ ಪ್ರದೇಶಗಳಲ್ಲಿ ಹೀಗಾಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಗ್ರಾಮಾಭಿವೃದ್ಧಿಗೆ ಗಮನ ಹರಿಸಬೇಕು ಎಂದರು. ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು, ಉತ್ತಮ ರಸ್ತೆ, ನೈರ್ಮಲ್ಯ, ವಿ ಬಿಜಿ ರಾಮ್ ಜಿ ಅಡಿ ಸ್ಥಳದಲ್ಲೇ ಉದ್ಯೋಗ ನೀಡುವ ಬಗ್ಗೆ ಹೆಚ್ಚಿನ ಗಮನ ಹರಿಸಿದರೆ ಗ್ರಾಮಗಳಿಂದ ಜನರು ನಗರಕ್ಕೆ ವಲಸೆ ಹೋಗುವುದು ತಪ್ಪಲಿದ್ದು, ಇದು ನಗರಗಳ ಮೇಲಿನ ಒತ್ತಡವನ್ನೂ ತಗ್ಗಿಸುತ್ತದೆ, ಜೊತೆಗೆ ಗ್ರಾಮಗಳ ಅಭಿವೃದ್ಧಿಯೂ ಆಗುತ್ತದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಜಲಜೀವನ ಮಿಷನ್, ವಿ ಬಿಜಿ ರಾಮ್ ಜಿ, ಪ್ರಧಾನಮಂತ್ರಿ ವಸತಿ ಯೋಜನೆ (ಗ್ರಾಮೀಣ) ಮತ್ತು ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ, ಮುಖ್ಯಮಂತ್ರಿಗಳ ರಸ್ತೆ ಯೋಜನೆ ಇತ್ಯಾದಿಗಳ ಸಮರ್ಪಕ ಅನುಷ್ಠಾನ ಆಗುತ್ತಿದೆಯೇ, ಕೆರೆಗಳ ಒತ್ತುವರಿ ತೆರವು ಆಗುತ್ತಿದೆಯೇ ಹಾಗೂ ಪಂಚಾಯತಿ ವ್ಯಾಪ್ತಿಯಲ್ಲಿ ಸ್ವಚ್ಛತೆ ಮತ್ತು ಒಣ ಹಾಗೂ ಹಸಿ ತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿದೆಯೇ ಎಂಬುದನ್ನು ಸಿಇಓಗಳು ನಿಯಮಿತವಾಗಿ ಪರಿಶೀಲಿಸಿದರೆ ಆಗ ಕಾಮಗಾರಿಗಳು ಚುರುಕಾಗಲಿವೆ ಎಂದು ಈಶ್ವರ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

# ಟ್ರಾಮಾ ಕೇರ್ ಸೇವೆ: 45 ಕೋಟಿ ಅನುದಾನ ಬಿಡುಗಡೆಗೆ ಆದೇಶ

**ಬೆಂಗಳೂರು, ಸೆ.7:** ಬಜೆಟ್‌ನಲ್ಲಿ ಘೋಷಿಸಿದ್ದಂತೆ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಮಗ್ರ ಆಘಾತ ಆರೈಕೆ (Trauma Care) ಸೇವೆಗಳನ್ನು ಒದಗಿಸಲು ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರ ಚಿಕಿತ್ಸಾ ಕೊಠಡಿ ಮತ್ತು ಐಸಿಯುಗಳಿಗೆ ವೈದ್ಯಕೀಯ ಉಪಕರಣಗಳು ಮತ್ತು ಸಾಧನಗಳನ್ನು ಹಂತ ಹಂತವಾಗಿ ಪೂರೈಸುವ ಮೂಲಕ ಮೇಲ್ದರ್ಜೆಗೇರಿಸಲು ರೂ. 45.00 ಕೋಟಿಗಳ ಅನುದಾನ ಒದಗಿಸಲು ಸರ್ಕಾರ ಆದೇಶಿಸಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2026–27ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಅಗತ್ಯವಿರುವ ಉಪಕರಣಗಳ ಖರೀದಿಗೆ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ.

ನಾಲ್ಕನೇ ಹಂತದ ಆಘಾತ ಚಿಕಿತ್ಸಾ ಸೇವೆಗಳನ್ನು ಒದಗಿಸಲು 108 ಆರೋಗ್ಯ ಕವಚ ಯೋಜನೆಯಡಿಯಲ್ಲಿನ ಹಳೆಯ ಅಂಬ್ಯುಲೆನ್ಸ್‌ಗಳನ್ನು ಬದಲಿಸಲು ಪ್ರತಿ ವಾಹನಕ್ಕೆ ರೂ.31 ಲಕ್ಷಗಳಂತೆ 100 ಮೂಲಭೂತ ಜೀವ ರಕ್ಷಕ (Basic Lite Support) ಆಂಬ್ಯುಲೆನ್ಸ್‌ಗಳ ಖರೀದಿಗೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಅನುದಾನದಡಿ 31 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಎರಡನೇ ಹಂತದ ಆಘಾತ ಆರೈಕೆ ಸೇವೆಗಳನ್ನು ಒದಗಿಸಲು ಮೈಸೂರು, ದಾವಣಗೆರೆ ಹಾಗೂ ಬೆಂಗಳೂರಿನ ಸರ್ ಸಿ.ವಿ. ರಾಮನ್ ನಗರ ಆಸ್ಪತ್ರೆಗಳಿಗೆ ತಲಾ ರೂ. 6 ಕೋಟಿ ರೂ.ನಂತೆ ಒಟ್ಟು ಮೂರು 64– ಸ್ಲೈಸ್ ಸಿ.ಟಿ. ಸ್ಕ್ಯಾನ್ ಯಂತ್ರಗಳನ್ನು ಹಾಗೂ ಹಾಸನ ಜಿಲ್ಲೆಯ ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ 2.50 ಕೋಟಿ ರೂ. ವೆಚ್ಚದಲ್ಲಿ ಒಂದು 32 ಸ್ಲೈಸ್ ಸಿ.ಟಿ. ಸ್ಕ್ಯಾನ್ ಯಂತ್ರಗಳನ್ನು ಹಣ ಒದಗಿಸಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅನುದಾನದಡಿ ಅಂದಾಜು 11,50 ಕೋಟಿ ರೂ. 11,50,00,000/–ಗಳು (ರೂಪಾಯಿ ಹನ್ನೊಂದು ಕೋಟಿ ಐವತ್ತು ಲಕ್ಷಗಳು) ಹಾಗೂ ಎಮರ್ಜೆನ್ಸಿ ಕೋವಿಡ್ ರೆಸ್ಪಾನ್ಸ್ ಪ್ರಾಜೆಕ್ಟ್ ಅಡಿ 10 ಕೋಟಿ ರೂ. ಅನುದಾನ ನೀಡಲಾಗಿದೆ. ಪ್ರತಿ ಘಟಕಕ್ಕೆ ರೂ.19.00 ಲಕ್ಷಗಳಂತೆ ಐಸಿಎಂಆರ್ ಮತ್ತು ಬಯೋಗ್ನ್ಯಾನ್ ರಿಸರ್ಚ್ ಅಭಿವೃದ್ಧಿಪಡಿಸಿರುವ 13 ಪೋರ್ಟಬಲ್, ಕೈಯಲ್ಲಿ ಹಿಡಿದು ಬಳಸಬಹುದಾದ, ದೇಹವನ್ನು lead (portable, handheld and non-invasive) 2 ಸಾಧನಗಳನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅನುದಾನದಡಿ 2.5 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲು ಆದೇಶ ನೀಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

# ಐಪಿಎಸ್ ಅಧಿಕಾರಿಗಳ ವರ್ಗಾವಣೆ

**ಬೆಂಗಳೂರು,ಸೆ.7:** ರಾಜ್ಯ ಪೊಲೀಸ್ ಇಲಾಖೆಯಲ್ಲಿ ಆಡಳಿತಾತ್ಮಕ ಬದಲಾವಣೆ ಮಾಡಿರುವ ರಾಜ್ಯ ಸರ್ಕಾರ, ನಾಲ್ವರು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಹೊಸ ಹುದ್ದೆಗಳಿಗೆ ನೇಮಿಸಿದೆ. ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.ವರ್ಗಾವಣೆಗಳು ತಕ್ಷಣದಿಂದ ಜಾರಿಗೆ ಬರಲಿದ್ದು, ಮುಂದಿನ ಆದೇಶದವರೆಗೆ ಅನ್ವಯವಾಗಲಿವೆ.ಬೆಂಗಳೂರು ಸಿಐಡಿಯಲ್ಲಿ ಪೊಲೀಸ್ ಅಧೀಕ್ಷಕರಾಗಿ (ಎಸ್‌ಪಿ) ಕಾರ್ಯನಿರ್ವಹಿಸುತ್ತಿದ್ದ ಸ್ಯಾಮ್ ವರ್ಗೀಸ್ ಅವರನ್ನು ಮಂಗಳೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪಪೊಲೀಸ್ ಆಯುಕ್ತರಾಗಿ (ಡಿಸಿಪಿ) ವರ್ಗಾಯಿಸಲಾಗಿದೆ. ಬೆಂಗಳೂರು ನಗರ ನೈರುತ್ಯ ವಿಭಾಗದ ಡಿಸಿಪಿಯಾಗಿದ್ದ ಅನಿತಾ ಭೀಮಪ್ಪ ಹದ್ದಣ್ಣನವರ್ ಅವರನ್ನು ಸಿಐಡಿ ಪೊಲೀಸ್ ಅಧೀಕ್ಷಕರಾಗಿ ನೇಮಿಸಲಾಗಿದೆ. ಅವರ ಸ್ಥಾನಕ್ಕೆ ಇದುವರೆಗೆ ಸ್ಥಳ ನಿಯೋಜನೆಗಾಗಿ ಕಾಯುತ್ತಿದ್ದ ಕೆ. ಲಕ್ಷ್ಮೀ ಗಣೇಶ್ ಅವರನ್ನು ನೈಋತ್ಯ ವಿಭಾಗದ ಡಿಸಿಪಿಯಾಗಿ ನೇಮಿಸಲಾಗಿದೆ.ಇದೇ ವೇಳೆ ಸ್ಥಳ ನಿಯೋಜನೆಗಾಗಿ ಕಾಯುತ್ತಿದ್ದ ಡಾ. ರಾಮ್ ಎಲ್. ಅರಸಿದ್ಧಿ ಅವರಿಗೆ ಬೆಂಗಳೂರು ನಗರ ಗುಪ್ತಚರ ವಿಭಾಗದ ಡಿಸಿಪಿ ಹುದ್ದೆ ನೀಡಲಾಗಿದೆ. ವರ್ಗಾವಣೆಯಾದ ಐಪಿಎಸ್ ಅಧಿಕಾರಿಗಳ ವಿವರ–ಅಧಿಕಾರಿ ಹಿಂದಿನ ಹುದ್ದೆ ಹೊಸ ಹುದ್ದೆ ಅನಿತಾ ಭೀಮಪ್ಪ ಹದ್ದಣ್ಣನವರ್ ಡಿಸಿಪಿ, ನೈಋತ್ಯ ವಿಭಾಗ, ಬೆಂಗಳೂರು ಎಸ್‌ಪಿ, ಸಿಐಡಿ, ಬೆಂಗಳೂರು ಸ್ಯಾಮ್ ವರ್ಗೀಸ್ ಎಸ್‌ಪಿ, ಸಿಐಡಿ, ಬೆಂಗಳೂರು ಡಿಸಿಪಿ, ಕಾನೂನು ಮತ್ತು ಸುವ್ಯವಸ್ಥೆ, ಮಂಗಳೂರು ನಗರ ಕೆ. ಲಕ್ಷ್ಮೀ ಗಣೇಶ್ ಸ್ಥಳ ನಿಯೋಜನೆಯ ನಿರೀಕ್ಷೆಯಲ್ಲಿದ್ದರು ಡಿಸಿಪಿ, ನೈಋತ್ಯ ವಿಭಾಗ, ಬೆಂಗಳೂರು ಡಾ. ರಾಮ್ ಎಲ್. ಅರಸಿದ್ಧಿ ಸ್ಥಳ ನಿಯೋಜನೆಯ ನಿರೀಕ್ಷೆಯಲ್ಲಿದ್ದರು ಡಿಸಿಪಿ, ಗುಪ್ತಚರ ವಿಭಾಗ, ಬೆಂಗಳೂರು ನಗರ

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಸಮಾಲೋಚನಾ ಸಮಿತಿ ಸಭೆ: ಗಲ್ಫ್–ಪಶ್ಚಿಮ ಏಷ್ಯಾ ಜೊತೆಗಿನ ನಿಕಟ ಸಂಬಂಧ ಕುರಿತು ಜೈಶಂಕರ್ ಚರ್ಚೆ

**ನವದೆಹಲಿ, ಸೆ. 7:** ಸೋಮವಾರ ನವದೆಹಲಿಯಲ್ಲಿ ನಡೆದ ಸಮಾಲೋಚನಾ ಸಮಿತಿ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಕೊಲ್ಲಿ ಮತ್ತು ಪಶ್ಚಿಮ ಏಷ್ಯಾ/ಉತ್ತರ ಆಫ್ರಿಕಾ ಪ್ರದೇಶದೊಂದಿಗಿನ ಭಾರತದ ನಿಕಟ ಸಂಬಂಧಗಳನ್ನು ಎತ್ತಿ ತೋರಿಸಿದರು.

ಸೋಮವಾರ ನವದೆಹಲಿಯಲ್ಲಿ ಪಶ್ಚಿಮ ಏಷ್ಯಾದೊಂದಿಗಿನ ಭಾರತದ ಸಂಬಂಧಗಳ ಕುರಿತು ಸಮಾಲೋಚನಾ ಸಮಿತಿ ಸಭೆಯನ್ನು ನಡೆಸಿದರು. ವ್ಯಾಪಾರ, ಹೂಡಿಕೆಗಳು, ಇಂಧನ, ಸಮುದ್ರ ಮತ್ತು ಜನರಿಂದ ಜನರಿಗೆ ಸಂಪರ್ಕ ಕ್ಷೇತ್ರಗಳಲ್ಲಿ ನಮ್ಮ ದೀರ್ಘಕಾಲದ ಪಾಲುದಾರಿಕೆ ಮತ್ತು ಸಹಕಾರ ಸೇರಿದಂತೆ ಗಲ್ಫ್ ಮತ್ತು ಪಶ್ಚಿಮ ಏಷ್ಯಾ/ಉತ್ತರ ಆಫ್ರಿಕಾ ಪ್ರದೇಶದೊಂದಿಗಿನ ಭಾರತದ ನಿಕಟ ಸಂಬಂಧಗಳನ್ನು ಎತ್ತಿ ತೋರಿಸಿದರು, ಎಂದು ಇಎಎಂ ಜೈಶಂಕರ್ ಎಕ್ಸ್‌ನಲ್ಲಿ ಹೇಳಿದರು.

10 ದಶಲಕ್ಷ ಭಾರತೀಯರ ಕಲ್ಯಾಣಕ್ಕಾಗಿ ನಮ್ಮ ಪ್ರಯತ್ನಗಳನ್ನು ಹಾಗೂ ಇಂಧನ ಮತ್ತು ರಸಗೊಬ್ಬರ ಭದ್ರತೆಯನ್ನು ಖಾತ್ರಿಪಡಿಸಿಕೊಳ್ಳುವುದನ್ನು ಮತ್ತು ಈ ಪ್ರದೇಶದಲ್ಲಿ ನಡೆಯುತ್ತಿರುವ ಸಂಘರ್ಷದ ನಡುವೆ ನಮ್ಮ ವ್ಯಾಪಾರ ಮತ್ತು ಸಂಪರ್ಕವನ್ನು ಮುಂದುವರಿಸುವುದನ್ನು ಸಹ ಒತ್ತಿ ಹೇಳಿದರು ಎಂದು ಅವರು ಹೇಳಿದರು.

ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ (ಎಂಓಎಸ್) ಪಬಿತ್ರ ಮಾರ್ಗರಿಟಾ, ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಮತ್ತು ಇತರ ಹಲವಾರು ಗಣ್ಯರು ಸಭೆಯಲ್ಲಿ ಉಪಸ್ಥಿತರಿದ್ದರು. ಜುಲೈನಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಸಂಘರ್ಷದ ನಡುವೆ ಭಾರತದ ಸನ್ನದ್ಧತೆಯನ್ನು ಪರಿಶೀಲಿಸಲು



ಭದ್ರತೆ ಕುರಿತ ಸಂಪುಟ ಸಮಿತಿಯ ನಾಲ್ಕನೇ ವಿಶೇಷ ಸಭೆ ನಡೆಯಿತು. ಇಂಧನ ಪೂರೈಕೆ, ರಸಗೊಬ್ಬರ ಲಭ್ಯತೆ ಮತ್ತು ನಾಗರಿಕರು ಮತ್ತು ನಾವಿಕರ ಸುರಕ್ಷತೆಯ ಮೇಲೆ ಕೇಂದ್ರೀಕರಿಸಲಾಯಿತು.

ಪ್ರಧಾನಮಂತ್ರಿ ಕಚೇರಿಯ ಹೇಳಿಕೆಯ ಪ್ರಕಾರ, ಸಂಪುಟ ಕಾರ್ಯದರ್ಶಿ ಅಅಖಗೆ ಭೌಗೋಳಿಕ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿವರಿಸಿದರು ಮತ್ತು LNG, LPG ಮತ್ತು ರಸಗೊಬ್ಬರಗಳು ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಸಮರ್ಪಕ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಂಡ ಕ್ರಮಗಳನ್ನು ವಿವರಿಸಿದರು. LPGಗಾಗಿ ಖರೀದಿ ಮೂಲಗಳನ್ನು ವೈವಿಧ್ಯಗೊಳಿಸಲಾಗಿದೆ ಮತ್ತು ಸಂಸ್ಕರಣಾಗಾರಗಳು 100 ಪ್ರತಿಶತಕ್ಕಿಂತ ಹೆಚ್ಚಿನ ಬಳಕೆಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ, ಇದು ಪೆಟ್ರೋಲ್, ಡೀಸೆಲ್ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ನಿರಂತರ ಉತ್ಪಾದನೆಯನ್ನು ಖಚಿತಪಡಿಸುತ್ತದೆ ಎಂದು ಅವರು ಹೇಳಿದರು.

ಪೈಪ್ಡ್ ನ್ಯಾಚುರಲ್ ಗ್ಯಾಸ್ ಸಂಪರ್ಕಗಳನ್ನು ವಿಸ್ತರಿಸುವ ಉಪಕ್ರಮಗಳನ್ನು ಸಹ ಸಭೆ ಪರಿಶೀಲಿಸಿತು, ಇದು ಗಣನೀಯ ಹೆಚ್ಚಳವನ್ನು ಕಂಡಿದೆ. ಮುಂಬರುವ ರಬಿ ಋತುವಿಗೆ ರಸಗೊಬ್ಬರಗಳ ಅಗತ್ಯಗಳನ್ನು ನಿರ್ಣಯಿಸಲಾಯಿತು, ಪರ್ಯಾಯ ಮೂಲಗಳೊಂದಿಗೆ ಚರ್ಚಿಸಲಾಯಿತು. ರಸಗೊಬ್ಬರಗಳ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಪ್ರಧಾನಿ ಮೋದಿ ನಿರ್ದೇಶಿಸಿದರು.

ಸಂಘರ್ಷ ವಲಯಗಳಲ್ಲಿ ದೇಶೀಯ ಮತ್ತು ವಿದೇಶಿ ಧ್ವಜ ಹೊಂದಿರುವ ಹಡಗುಗಳಲ್ಲಿ ಸೇವೆ ಸಲ್ಲಿಸುವ ನಾವಿಕರ ಪರಿಸ್ಥಿತಿಯ ಬಗ್ಗೆ ಚರ್ಚಿಸಲಾಯಿತು. ನಾವಿಕರು ಮತ್ತು ಅವರ ಕುಟುಂಬಗಳಿಗೆ ಸಕಾಲಿಕ ಮಾಹಿತಿ, ತುರ್ತು ನೆರವು ಮತ್ತು ಸಮಾಲೋಚನೆಯನ್ನು ಒದಗಿಸಲು ಕಾರ್ಯವಿಧಾನವನ್ನು ಸ್ಥಾಪಿಸಲು ಪ್ರಧಾನಿ ಮೋದಿ ಸೂಚನೆ ನೀಡಿದರು.

# ಬ್ರಿಕ್ಸ್ ಹಣಕಾಸು ದಾಖಲೆ ಫಲಿತಾಂಶ ಪರಿಶೀಲಿಸಿದ ಸಚಿವೆ ಸೀತಾರಾಮನ್

**ನವದೆಹಲಿ, ಸೆ.7:** ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಬ್ರಿಕ್ಸ್ ಹಣಕಾಸು ದಾಖಲೆಯ ಪ್ರಮುಖ ಫಲಿತಾಂಶಗಳನ್ನು ಪರಿಶೀಲಿಸಿದ್ದು, ಸೆಪ್ಟೆಂಬರ್ 9–10 ರಂದು ಮುಂಬೈನಲ್ಲಿ ನಡೆಯಲಿರುವ ಬ್ರಿಕ್ಸ್ ಹಣಕಾಸು ಮಂತ್ರಿಗಳು ಮತ್ತು ಕೇಂದ್ರ ಬ್ಯಾಂಕ್ ಗವರ್ನರ್‌ಗಳ ಅಂತಿಮ ಸಭೆಗೆ ಸಿದ್ಧತೆಗಳು ನಡೆಯುತ್ತಿವೆ. ಮುಂಬೈ ಸಭೆಯು ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಹಣಕಾಸು ಮಂತ್ರಿಗಳು ಮತ್ತು ಕೇಂದ್ರ ಬ್ಯಾಂಕ್ ಗವರ್ನರ್‌ಗಳನ್ನು ಒಟ್ಟುಗೂಡಿಸುತ್ತದೆ ಮತ್ತು ಬ್ರಿಕ್ಸ್ ನಾಯಕರ ಶೃಂಗಸಭೆಗೆ ಕೆಲವೇ ದಿನಗಳ ಮೊದಲು



ಇದು ನಡೆಯುತ್ತದೆ. "ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ" ಎಂಬ ಭಾರತದ ಬ್ರಿಕ್ಸ್ ಅಧ್ಯಕ್ಷತೆಯ ವಿಷಯದ ಅಡಿಯಲ್ಲಿ ಹಣಕಾಸು ದಾಖಲೆಯನ್ನು ಮುಂದುವರಿಸಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ. ಸೆ.12–13 ರಂದು ಭಾರತ ನವದೆಹಲಿಯಲ್ಲಿ ಆಯೋಜಿಸಲಿರುವ 18 ನೇ ಬ್ರಿಕ್ಸ್ ಶೃಂಗಸಭೆಗೆ ಮುನ್ನ ಮುಂಬೈ ಸಭೆಯು ಅಂತಿಮ ಉನ್ನತ ಮಟ್ಟದ ಸಭೆಗಳಲ್ಲಿ ಒಂದಾಗಿದೆ. 2026 ರ ಬ್ರಿಕ್ಸ್ ಅಧ್ಯಕ್ಷತೆಯನ್ನು ಭಾರತ ಹೊಂದಿರುವ ಕಾರಣ ನಾಯಕರ ಶೃಂಗಸಭೆಯು ರಾಷ್ಟ್ರ ರಾಜಧಾನಿಯ ಭಾರತ್ ಮಂಟಪದಲ್ಲಿ ನಡೆಯಲಿದೆ.

# ನಮ್ಮ ಬದುಕಿನಲ್ಲಿ ದೇಶದ ಪಾತ್ರ ಮರೆಯದಿರಿ: ಪೇಜಾವರ ಶ್ರೀ

## ದೀನದಯಾಳು ಉಪಾಧ್ಯಾಯ ಕಾಲೇಜಿನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ

**ನವದೆಹಲಿ, ಸೆ. 7:** ನಮ್ಮ ಬದುಕು ರೂಪುಗೊಳ್ಳುವಲ್ಲಿ ದೇಶ ಮತ್ತು ಸಮಾಜದ ಪಾತ್ರ ಮಹತ್ವದ್ದಾಗಿದ್ದು, ಯುವಜನತೆ ಇದನ್ನು ಎಂದಿಗೂ ಮರೆಯಬಾರದು ಎಂದು ಪೇಜಾವರ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಹೇಳಿದರು. ನವದೆಹಲಿಯ ದೀನದಯಾಳು ಉಪಾಧ್ಯಾಯ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉಪನಿಷತ್ತುಗಳು ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿದೇವೋ ಭವ ಎಂದು ಸಾರಿವೆ. ತಮ್ಮ ಗುರುಗಳಾದ ಶ್ರೀ ವಿಶ್ವೇಶತೀರ್ಥರು ಇದಕ್ಕೆ ?ರಾಷ್ಟ್ರದೇವೋ ಭವ ಎಂಬ ಸಂದೇಶವನ್ನೂ ಸೇರಿಸಿದ್ದರು ಎಂದು ಹೇಳಿದರು. ಮನುಷ್ಯರು ಸಮಾಜಜೀವಿಗಳಾಗಿದ್ದು, ನಾವು ಬದುಕುತ್ತಿರುವ ನೆಲ, ಸಮಾಜ ಹಾಗೂ ದೇಶದಿಂದ ಅನೇಕ ಪ್ರಯೋಜನಗಳನ್ನು ಪಡೆಯುತ್ತೇವೆ. ನೀರು, ಗಾಳಿ, ಆಕಾಶದಿಂದ ಹಿಡಿದು ಸರ್ಕಾರ ಒದಗಿಸುವ ರಸ್ತೆ, ವಿದ್ಯುತ್, ಪಡಿತರ ಸೇರಿದಂತೆ ಹಲವು ಸೌಲಭ್ಯಗಳನ್ನು ಬಳಸಿಕೊಂಡೇ ನಮ್ಮ ಬದುಕು ಸಾಗುತ್ತದೆ. ಹೀಗಾಗಿ ಯುವ ಪೀಳಿಗೆ ತಮ್ಮ ಜೀವನದಲ್ಲಿ ದೇಶದ ಪಾತ್ರವನ್ನು ಮರೆಯಬಾರದು ಎಂದರು.

ಒಳ್ಳೆಯ ವಿದ್ಯೆ ಪಡೆದು, ಯುಕ್ತವಾದ ಉದ್ಯೋಗದಲ್ಲಿ ತೊಡಗಿಕೊಂಡು, ಉತ್ತಮ ಸಂಸ್ಕಾರಗಳನ್ನು ಬೆಳೆಸಿಕೊಂಡು ಶ್ರೇಷ್ಠ ನಾಗರಿಕರಾಗಿ ಬದುಕುವುದೇ ಸಮಾಜ ಮತ್ತು ದೇಶಕ್ಕೆ ಸಲ್ಲಿಸುವ ದೊಡ್ಡ ಸೇವೆ ಎಂದು ಅವರು ಹೇಳಿದರು. ಹಕ್ಕುಗಳ ಜತೆಗೆ ಕರ್ತವ್ಯಕ್ಕೂ ಆದ್ಯತೆ. ವಿದ್ಯಾರ್ಥಿಗಳು ತಮ್ಮ ಮೂಲಭೂತ ಹಕ್ಕುಗಳ ಬಗ್ಗೆ ಪ್ರಶ್ನಿಸುವಷ್ಟೇ ಆಸಕ್ತಿಯಿಂದ ಮೂಲಭೂತ ಕರ್ತವ್ಯಗಳ ಪಾಲನೆಯಲ್ಲೂ ಗಮನ ಹರಿಸಬೇಕು ಎಂದು ಪೇಜಾವರ ಶ್ರೀ ಕರೆ ನೀಡಿದರು. ಮಹಾಭಾರತ ಮತ್ತು ಭಗವದ್ಗೀತೆಯಲ್ಲಿನ ಉದಾಹರಣೆಗಳನ್ನು



ಉಲ್ಲೇಖಿಸಿ ಹಕ್ಕು ಮತ್ತು ಕರ್ತವ್ಯಗಳ ಮಹತ್ವವನ್ನು ವಿವರಿಸಿದರು. ಸಂವಾದದ ವೇಳೆ ವಿದ್ಯಾರ್ಥಿಯೊಬ್ಬರು ಪ್ರಸ್ತುತ ಜಾತ್ಯತೀತತೆಯ ಪರಿಕಲ್ಪನೆ ಭಾರತೀಯ ಅಧ್ಯಾತ್ಮಿಕ ಪರಂಪರೆಗೆ ಹೊಂದಿಕೆಯಾಗುತ್ತದೆಯೇ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಪೇಜಾವರ ಶ್ರೀ, ಭಾರತದ ಅಧ್ಯಾತ್ಮಿಕ ಪರಂಪರೆಯಲ್ಲಿರುವ ಜಾತ್ಯತೀತತೆಯ ಪರಿಕಲ್ಪನೆ ಅತ್ಯುತ್ತಮವಾದದ್ದು ಎಂದು ಪ್ರತಿಪಾದಿಸಿದರು. ಸನಾತನ ಪರಂಪರೆಯಲ್ಲಿಯೇ ಜಾತ್ಯತೀತತೆಯ ಶ್ರೇಷ್ಠ ತತ್ವಗಳು ಅಡಕವಾಗಿವೆ. ಆದರೆ ಪ್ರಸ್ತುತ ರಾಜಕೀಯವಾಗಿ ರೂಪುಗೊಂಡಿರುವ ಜಾತ್ಯತೀತತೆಯ ವ್ಯಾಖ್ಯಾನ ತಪ್ಪಾಗಿದ್ದು, ಅದು ಬದಲಾಗಬೇಕು ಎಂದು ಅಭಿಪ್ರಾಯಪಟ್ಟರು.

# ಅ.6: ನಾಗಾಂವ್ ಲೋಕಸಭಾ ಕ್ಷೇತ್ರ, 5 ವಿಧಾನಸಭಾ ಸ್ಥಾನಗಳಿಗೆ ಚುನಾವಣೆ

**ನವದೆಹಲಿ, ಸೆ. 7:** ಅಕ್ಟೋಬರ್ 6 ರಂದು ನಡೆಯಲಿರುವ ಐದು ವಿಧಾನಸಭಾ ಕ್ಷೇತ್ರಗಳು ಮತ್ತು ಒಂದು ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಭಾರತೀಯ ಚುನಾವಣಾ ಆಯೋಗ (ಇಸಿಐ) ಚುನಾವಣಾ ದಿನಾಂಕಗಳನ್ನು ಬಿಡುಗಡೆ ಮಾಡಿದೆ. ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೇರಿ ಮತ್ತು ಅಸ್ಸಾಂನಲ್ಲಿ ಉಪಚುನಾವಣೆ ನಡೆಯಲಿದ್ದು, ಆರು ವಿಧಾನಸಭಾ ಸ್ಥಾನಗಳು ಮತ್ತು ಒಂದು ಲೋಕಸಭಾ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಸೆಪ್ಟೆಂಬರ್ 9 ರಂದು ಔಪಚಾರಿಕ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ. ಸೆಪ್ಟೆಂಬರ್ 17 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅಭ್ಯರ್ಥಿಗಳು ಸೆಪ್ಟೆಂಬರ್ 19 ರವರೆಗೆ ತಮ್ಮ ನಾಮಪತ್ರಗಳನ್ನು ಹಿಂಪಡೆಯಬಹುದು, ಅಕ್ಟೋಬರ್ 9 ರಂದು ಫಲಿತಾಂಶ ಪ್ರಕಟವಾಗಲಿದೆ.

**ಉಪಚುನಾವಣೆ ನಡೆಯುವ ಕ್ಷೇತ್ರಗಳು:** ಪಶ್ಚಿಮ ಬಂಗಾಳದ ನಂದಿಗ್ರಾಮ್ ಮತ್ತು ರೆಜಿನಗರ; ತಮಿಳುನಾಡಿನ ಮದುರಾಂತಕಂ ಮತ್ತು ಧಾರಾಪುರಂ; ಪುದುಚೇರಿಯ ತಟ್ಟಂಚವಾಡಿ ಮತ್ತು ಅಸ್ಸಾಂನ ನಾಗಾಂವ್ ಲೋಕಸಭಾ ಕ್ಷೇತ್ರ.

**ಉಪಚುನಾವಣೆಗೆ ಕಾರಣಗಳು:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಮ್ಮ ದೀರ್ಘಕಾಲದ ಪ್ರತಿಸ್ಪರ್ಧಿ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸುವ ಮೂಲಕ ಭಬಾನಿಪುರ ಲೋಕಸಭಾ ಕ್ಷೇತ್ರವನ್ನು ಗೆದ್ದರು. ಆದಾಗ್ಯೂ, ಅವರು ತಮ್ಮ ಸಚಿವ ಸ್ಥಾನವನ್ನು ಉಳಿಸಿಕೊಳ್ಳಲು ನಿರ್ಧರಿಸಿದರು ಮತ್ತು ಅದೇ ಲೋಕಸಭಾ ಕ್ಷೇತ್ರದ ನಂದಿಗ್ರಾಮ್ ವಿಧಾನಸಭಾ ಕ್ಷೇತ್ರಕ್ಕೆ ರಾಜೀನಾಮೆ ನೀಡಿದರು.

ರೆಜಿನಗರದಲ್ಲಿ, ಆಮ್ ಜನತಾ ಉನ್ನಯನ್ ಪಕ್ಷದ ಹುಮಾಯೂನ್ ಕಬೀರ್ ರೆಜಿನಗರ ಮತ್ತು ನವ್ದಾ ವಿಧಾನಸಭಾ ಕ್ಷೇತ್ರಗಳನ್ನು ಗೆದ್ದಿದ್ದರು. ಆದಾಗ್ಯೂ, ಅವರು ನವ್ದಾವನ್ನು ಉಳಿಸಿಕೊಳ್ಳಲು ನಿರ್ಧರಿಸಿದರು ಮತ್ತು ರೆಜಿನಗರ ಸ್ಥಾನದಿಂದ ರಾಜೀನಾಮೆ ನೀಡಿದರು.

ತಮಿಳುನಾಡಿನಲ್ಲಿ, ಹಾಲಿ ಶಾಸಕರ ರಾಜೀನಾಮೆಯಿಂದಾಗಿ ಮಧುರಾಂತಕಂ ಮತ್ತು ಧಾರಾಪುರಂ ವಿಧಾನ ಸಭಾ ಸ್ಥಾನಗಳಲ್ಲಿ ಉಪಚುನಾವಣೆ ನಡೆಯಲಿದೆ.

ಎಐಎಡಿಎಂಕೆಯ ಮಿತ್ರಪಕ್ಷವಾದ ಮಧುರಾಂತಕಂ ಶಾಸಕ ಮರಗತಮ್ ಕುಮಾರವೇಲ್ ಮೇ ತಿಂಗಳಲ್ಲಿ ಹುದ್ದೆಗೆ ರಾಜೀನಾಮೆ ನೀಡಿದರು ಮತ್ತು ನಂತರ ಎಐಎಡಿಎಂಕೆಯಿಂದ ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ)ಗೆ ಪಕ್ಷ ಬದಲಾಯಿಸಿದರು.

ಅದೇ ರೀತಿ, ಅವರ ಪಕ್ಷದ ಸಹೋದ್ಯೋಗಿ ಎಐಎಡಿಎಂಕೆಯ ಪಿ ಸತ್ಯಭಾಮ ಕೂಡ ಧಾರಾಪುರಂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಟಿವಿಕೆ ಸೇರಿದರು. ಪುದುಚೇರಿಯಲ್ಲಿ, ತಚ್ಚವಾಡಿ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ. ಪುದುಚೇರಿ ಮುಖ್ಯಮಂತ್ರಿ ಎನ್. ರಂಗಸಾಮಿ ಅವರು ತಚ್ಚಾಂಚವಾಡಿ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದರಿಂದ ಇದು ಸಂಭವಿಸಿದೆ. ಅವರು ಮಂಗಳಂ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ನಂತರ, ಅವರು ಮಂಗಳಂ ಅನ್ನು ಉಳಿಸಿಕೊಳ್ಳಲು ನಿರ್ಧರಿಸಿದರು ಮತ್ತು ತಚ್ಚಾಂಚವಾಡಿಗೆ ರಾಜೀನಾಮೆ ನೀಡಿದರು.

ಏತನ್ಮಧ್ಯೆ, ಅಸ್ಸಾಂನ ನಾಗಾಂವ್ ಲೋಕಸಭಾ ಕ್ಷೇತ್ರಕ್ಕೂ ಉಪಚುನಾವಣೆ ನಡೆಯಲಿದೆ. ಲೋಕಸಭಾ ಕ್ಷೇತ್ರವನ್ನು ಕಾಂಗ್ರೆಸ್ ನಾಯಕ ಪ್ರದ್ಯುತ್ ಬೋರ್ಡೊಲೊಯ್ ಪ್ರತಿನಿಧಿಸುತ್ತಿದ್ದರು. ಆದಾಗ್ಯೂ, ಬೋರ್ಡೊಲೊಯ್ ಅವರು ಆ ಹುದ್ದೆಗೆ ರಾಜೀನಾಮೆ ನೀಡಿ ಕಾಂಗ್ರೆಸ್ ತೊರೆದು ಅಸ್ಸಾಂ ವಿಧಾನಸಭಾ ಚುನಾವಣೆಗೆ ಮುನ್ನ ಬಿಜೆಪಿಗೆ ಸೇರಿದರು. ನಂತರ, ಅವರು ದಿಸ್ಪುರ್ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು.

# ಪ್ರವಾಹ: ಇತಿಹಾಸದಲ್ಲೇ ಗರಿಷ್ಠ ಮಟ್ಟಕ್ಕೆ ಏರಿದ ಗಂಗಾನದಿ

**ನವದೆಹಲಿ, ಸೆ. 7:** ಮುಂಗಾರು ಮಳೆಯ ಅಬ್ಬರ ಮತ್ತು ನೆರೆಯ ನೇಪಾಳ ಪ್ರದೇಶದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಬಿಹಾರದಲ್ಲಿ ಪ್ರಮುಖ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಪ್ರವಾಹ ಪರಿಸ್ಥಿತಿ ಭೀಕರ ಸ್ವರೂಪ ಪಡೆದುಕೊಂಡಿದೆ. ರಾಜ್ಯ ವಿಪತ್ತು ನಿರ್ವಹಣಾ ಇಲಾಖೆಯ ವರದಿಯ ಪ್ರಕಾರ, 12 ಜಿಲ್ಲೆಗಳ 70ಕ್ಕೂ ಹೆಚ್ಚು ತಾಲೂಕುಗಳ (ಪ್ರಖಂಡ) 368 ಪಂಚಾಯತಿಗಳಲ್ಲಿ ಸುಮಾರು 22.42 ಲಕ್ಷಕ್ಕೂ ಹೆಚ್ಚು (23 ಲಕ್ಷ) ಮಂದಿ ಪ್ರವಾಹದ ತೀವ್ರ ಪ್ರಭಾವಕ್ಕೆ ಒಳಗಾಗಿದ್ದಾರೆ.

ಬಿಹಾರದಲ್ಲಿ ಹಾದುಹೋಗುವ ಗಂಗಾ, ಕೋಸಿ, ಗಂಡಕ್, ಬೂಢಿ ಗಂಡಕ್, ಬಾಗಮತಿ ಹಾಗೂ ಪುನ್ಪುನ್ ಸೇರಿದಂತೆ ಪ್ರಮುಖ ನದಿಗಳು ಭೋರ್ಗರೆಯುತ್ತಿವೆ. ರಾಜಧಾನಿ ಪಟನಾದ ಗಾಂಧಿ ಘಾಟ್‌ನಲ್ಲಿ ಗಂಗಾನದಿಯ ಜಲಮಟ್ಟವು 50.57 ಮೀಟರ್‌ಗೆ ತಲುಪಿದೆ. ಈ ಹಿಂದೆ 2016ರಲ್ಲಿ ತಲುಪಿದ್ದ 50.52 ಮೀಟರ್ ಸಾರ್ವಕಾಲಿಕ ದಾಖಲೆಯನ್ನು ಈ ಬಾರಿ ಗಂಗಾ ನದಿ ಮುರಿದಿದೆ. ಪರಿಣಾಮವಾಗಿ, ಪಟನಾ ನಗರದ ಹಲವು ತಗ್ಗು ಪ್ರದೇಶಗಳು ಹಾಗೂ ಗ್ರಾಮೀಣ ಭಾಗಗಳು ಸಂಪೂರ್ಣವಾಗಿ ಜಲಾವೃತಗೊಂಡಿವೆ.

ಪ್ರವಾಹದಿಂದಾಗಿ ಪಟನಾ, ಭಾಗಲ್ಪುರ, ಮುಂಗೇರ್, ಕಟಿಹಾರ್, ಖಗರಿಯಾ, ಸರನ್, ಬಕ್ಸರ್, ಭೋಜ್ಪುರ (ಆರಾ), ವೈಶಾಲಿ, ಸಮಸ್ತಿಪುರ, ಸೀವಾನ್ ಮತ್ತು ಬೇಗುಸರಾಯ್



ಜಿಲ್ಲೆಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ಸರನ್ ಜಿಲ್ಲೆಯ ದರಿಯಾಪುರದಲ್ಲಿ ಮಹೀ ನದಿಯ ತಡೆಗೋಡೆ 20 ಅಡಿಗಳಷ್ಟು ಬಿರುಕುಬಿಟ್ಟು ಒಡೆದುಹೋಗಿದೆ. ಇದರಿಂದಾಗಿ 12ಕ್ಕೂ ಹೆಚ್ಚು ಗ್ರಾಮಗಳಿಗೆ ನೀರು ನುಗ್ಗಿದೆ. ಸಮಷ್ಟಿಪುರದಲ್ಲಿ ಚತುಷ್ಪಥ ಅಂಡರ್‌ಪಾಸ್‌ನ ತಡೆಗೋಡೆ ಕುಸಿದುಬಿದ್ದಿದೆ.

ಭಾಗಲ್ಪುರ ಮತ್ತು ಭೋಜ್ಪುರ ಜಿಲ್ಲೆಗಳಲ್ಲಿ ನದಿಯ ತೀವ್ರ ಹರಿವಿಗೆ ಕಡಲ್ಕೊರೆತ ಉಂಟಾಗಿ ನೂರಾರು ಕಾಂಕ್ರೀಟ್ ಮನೆಗಳು ನದಿಯಲ್ಲಿ ಕೊಚ್ಚಿಹೋಗಿವೆ. ಎನ್‌ಎಚ್–80 ಸೇರಿದಂತೆ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳ ಮೇಲೆ 2 ರಿಂದ 3 ಅಡಿ ನೀರು ಹರಿಯುತ್ತಿದ್ದು, ಸಂಚಾರ ಸಂಪೂರ್ಣ ಬಂದ್ ಆಗಿದೆ.

ನೂರಾರು ಹಳ್ಳಿಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. ಕುಡಿಯುವ ನೀರಿಗೆ ತೀವ್ರ ಅಭಾವ ಸೃಷ್ಟಿಯಾಗಿದೆ. ಮನೆಗಳಿಗೆ ನೀರು ನುಗ್ಗಿರುವ ಕಾರಣ ಲಕ್ಷಾಂತರ ಜನರು ರಾಷ್ಟ್ರೀಯ ಹೆದ್ದಾರಿಗಳು, ಎತ್ತರದ ತಂಗುದಾಣಗಳು, ಬಂಜ್ ಮತ್ತು ಕಾಂಕ್ರೀಟ್ ಕಟ್ಟಡಗಳ ಮೇಲ್ಛಾವಣಿಗಳಲ್ಲಿ ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿಕೊಂಡು ದಿನ ದೂಡುತ್ತಿದ್ದಾರೆ.

ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ಸರ್ಕಾರ ಹಾಗೂ ವಿಪತ್ತು ನಿರ್ವಹಣಾ ಪಡೆಗಳು ಶ್ರಮಿಸುತ್ತಿವೆ. ಎನ್‌ಡಿಆರ್‌ಎಫ್‌ನ 10 ತುಕಡಿಗಳು ಮತ್ತು ಎಸ್‌ಡಿಆರ್‌ಎಫ್‌ನ 27 ವಿಶೇಷ ತುಕಡಿಗಳನ್ನು ಕಷ್ಟದಲ್ಲಿರುವ ಜನರ ರಕ್ಷಣೆಗೆ ನಿಯೋಜಿಸಲಾಗಿದೆ. ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು 1,400ಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ದೋಣಿಗಳನ್ನು ಕಾರ್ಯಾಚರಣೆಗೆ ಇಳಿಸಲಾಗಿದೆ.

ಸಂತ್ರಸ್ತರಿಗಾಗಿ 900ಕ್ಕೂ ಹೆಚ್ಚು ಕಮ್ಯುನಿಟಿ ಕಿಚನ್ ಹಾಗೂ ನೂರಾರು ತಾತ್ಕಾಲಿಕ ಪರಿಹಾರ ಶಿಬಿರಗಳನ್ನು ಆರಂಭಿಸಲಾಗಿದೆ. ಸಿದ್ಧಪಡಿಸಿದ ಆಹಾರ, ಒಣ ಉಪಹಾರ, ಕುಡಿಯುವ ನೀರು ಮತ್ತು ಓಆರ್‌ಎಸ್ ಪೊಟ್ಟಣಗಳನ್ನು ವಿತರಿಸಲಾಗುತ್ತಿದೆ.

ಜಲಜನ್ಯ ರೋಗಗಳು ಹರಡದಂತೆ ತಡೆಯಲು

# ದೆಹಲಿ ಕಟ್ಟಡ ಕುಸಿತ: ಮೃತ ವಿದ್ಯಾರ್ಥಿ ಅರ್ಪಿತ್ ಕಣ್ಣು ದಾನ ಇಬ್ಬರ ಬಾಳಿಗೆ ಬೆಳಕಾದ ಕುಟುಂಬ

ನವದೆಹಲಿ: ದೆಹಲಿಯ ಸತ್ಯ ನಿಕೇತನದಲ್ಲಿ ಪಿಜಿ ಕಟ್ಟಡ ಕುಸಿದು ಮೃತಪಟ್ಟ 18 ವರ್ಷದ ಅರ್ಪಿತ್ ಜೈ ಕುಟುಂಬ, ದುಃಖದ ನಡುವೆಯೂ ಮಾನವೀಯ ನಿರ್ಧಾರ ಕೈಗೊಂಡಿದೆ. ಅರ್ಪಿತ್ ಕಣ್ಣುಗಳನ್ನು ದಾನಮಾಡುವ ಮೂಲಕ ಮತ್ತೊಬ್ಬರ ಬದುಕಿಗೆ ದೃಷ್ಟಿಯ ಬೆಳಕು ನೀಡಲು ಮುಂದಾಗಿದೆ. ಮಧ್ಯಪ್ರದೇಶದ ದೇವಾಸ್ ಮೂಲದ ಅರ್ಪಿತ್, ರಕ್ಷಾಬಂಧನ ಹಬ್ಬದ ರಜೆ ಮುಗಿಸಿಕೊಂಡು ಇತ್ತೀಚೆಗಷ್ಟೇ ಪಿಜಿಗೆ ಮರಳಿದ್ದರು. ಆದರೆ, ಪಿಜಿ ಕಟ್ಟಡ ಕುಸಿತದ ದುರಂತದಲ್ಲಿ ಮೃತಪಟ್ಟಿದ್ದಾರೆ. ಮಗನನ್ನು ಕಳೆದುಕೊಂಡ ನೋವಿನ ನಡುವೆಯೂ ಕುಟುಂಬದವರು ಅವರ ಕಾರ್ನಿಯಾಗಳನ್ನು ದಾನ ಮಾಡಲು ನಿರ್ಧರಿಸಿದ್ದಾರೆ.

**ಮಗನನ್ನು ಪಿಜಿಗೆ ಕಳುಹಿಸಿದ್ದಕ್ಕೆ ತಂದೆಯ ವಿಷಾದ:** ಅರ್ಪಿತ್ ತಂದೆ ಭೂಪೇಂದ್ರ ಜೈ ಮಾತನಾಡಿ, "ರಕ್ಷಾಬಂಧನ ರಜೆ ಮುಗಿಸಿಕೊಂಡು ನನ್ನ ಮಗ ಊರಿನಿಂದ ಹಿಂದಿರುಗಿದ್ದ. ಭಾನುವಾರ ಬೆಳಗ್ಗೆಯಷ್ಟೇ ಪಿಜಿಗೆ ತಲುಪಿದ್ದ. ಆದರೆ, ಆತನ ಮೃತದೇಹವನ್ನು ನೋಡುವ ಪರಿಸ್ಥಿತಿ ಬರುತ್ತದೆ ಎಂದು ಕನಸಿನಲ್ಲೂ ಅಂದುಕೊಂಡಿರಲಿಲ್ಲ" ಎಂದು ದುಃಖ ವ್ಯಕ್ತಪಡಿಸಿದ್ದಾರೆ. "ಪಿಜಿಯ ಪರಿಸ್ಥಿತಿ ಎಷ್ಟು ಕೆಟ್ಟದಾಗಿತ್ತು ಎಂಬುದನ್ನು ಈಗ ಎಲ್ಲರೂ ನಮಗೆ ಹೇಳುತ್ತಿದ್ದಾರೆ. ನನ್ನ ಮಗ ಮೊದಲೇ ಈ ಬಗ್ಗೆ ನನಗೆ ಹೇಳಿದ್ದರೆ ಚೆನ್ನಾಗಿತ್ತು. ಆತ ಅಲ್ಲಿನ ಪರಿಸ್ಥಿತಿ ಬಗ್ಗೆ ಹೇಳಿದ್ದರೆ, ನಾನು ಖಂಡಿತವಾಗಿಯೂ ಆತನನ್ನು ಅಲ್ಲಿ ಉಳಿಯಲು ಬಿಡುತ್ತಿರಲಿಲ್ಲ" ಎಂದು ಅವರು ಹೇಳಿದ್ದಾರೆ.

**ಗಾಯಗಳ ತೀವ್ರತೆಯಿಂದ ಗುರುತಿಸುವುದೇ ಕಷ್ಟ**

ಅರ್ಪಿತ್ ಸ್ನೇಹಿತರೊಬ್ಬರು ದುರಂತದ ಬಳಿಕದ ಸ್ಥಿತಿಯನ್ನು ವಿವರಿಸಿದ್ದಾರೆ. ಕುಟುಂಬಸ್ಥರು ಆಸ್ಪತ್ರೆಗೆ ತೆರಳಿ ಮೃತದೇಹ ನೋಡಿದಾಗ, ಗಾಯಗಳ ತೀವ್ರತೆಯಿಂದಾಗಿ ಅರ್ಪಿತ್ ಅವರನ್ನು ಗುರುತಿಸುವುದೇ



ಕಷ್ಟವಾಗಿತ್ತು ಎಂದು ತಿಳಿಸಿದ್ದಾರೆ. "ಸೋಮವಾರ ಬೆಳಗ್ಗೆ ಏಮ್ಸ್‌ನಿಂದ ನಮಗೆ ಕರೆಮಾಡಿ, ನಾವು ನೀಡಿದ್ದ ಗುರುತಿನ ವಿವರಗಳಿಗೆ ಹೊಂದಿಕೆಯಾಗುವ ಮೃತದೇಹವೊಂದು ಇದೆ ಎಂದು ತಿಳಿಸಿದರು. ಆದರೆ, ಮೃತದೇಹದ ಸ್ಥಿತಿ ತುಂಬಾ ಗಂಭೀರವಾಗಿದ್ದರಿಂದ ನಾವು ನೋಡಿದಾಗ ಅದನ್ನು ಅರ್ಪಿತ್ ಎಂದು ಗುರುತಿಸಲು ಸಾಧ್ಯವಾಗಲಿಲ್ಲ" ಎಂದು ಸ್ನೇಹಿತ ಹೇಳಿದ್ದಾರೆ.

"ಬೆಳಗ್ಗೆ 6.30ಕ್ಕೆ ಅವರ ಕುಟುಂಬಸ್ಥರು ಆಸ್ಪತ್ರೆಗೆ ಬಂದರು. ಕೊನೆಗೆ ಅರ್ಪಿತ್ ಅವರ ತಾಯಿ ದೇಹದಲ್ಲಿದ್ದ ಜನ್ಮದ ಗುರುತುಗಳನ್ನು ಆಧರಿಸಿ ಮಗನನ್ನು ಗುರುತಿಸಿದರು" ಎಂದು ಅವರು ತಿಳಿಸಿದ್ದಾರೆ.

**ಇಡೀ ರಾತ್ರಿ ಹುಡುಕಾಟ, ಕೊನೆಗೆ ಬಂದ ಸಾವಿನ ಸುದ್ದಿ:**

"ನಾವು ಇಡೀ ರಾತ್ರಿ ಅರ್ಪಿತ್‌ಗಾಗಿ ಹುಡುಕಾಡಿದ್ದೆವು. ಆದರೆ ಎಲ್ಲಿಯೂ ಆತನ ಸುಳಿವು ಸಿಗಲಿಲ್ಲ. ಕೊನೆಗೆ ಆತ ಇನ್ನಿಲ್ಲ ಎಂಬ ಸುದ್ದಿ ನಮಗೆ ತಿಳಿಯಿತು" ಎಂದು ಸ್ನೇಹಿತ ನೋವು ತೋಡಿಕೊಂಡಿದ್ದಾರೆ. ಅಲ್ಪವಯಸ್ಸಿನಲ್ಲೇ ಮೃತಪಟ್ಟ ಅರ್ಪಿತ್ ನ ಕಣ್ಣುಗಳನ್ನು ದಾನ ಮಾಡುವ ಕುಟುಂಬದ ನಿರ್ಧಾರ, ದುರಂತದ ನಡುವೆಯೂ ಮಾನವೀಯತೆಯ ಮಹತ್ವವನ್ನು ಸಾರಿದೆ.

# ನೇಪಾಳದಲ್ಲಿ ಪ್ರವಾಹ ಸಂತ್ರಸ್ತರಿಗಾಗಿ ರಾಷ್ಟ್ರೀಯ ಶೋಕಾಚರಣೆ

**ಕಠ್ಮಂಡು, ಸೆ. 7:** ಆಗಸ್ಟ್ 26ರಂದು ಬೋಟೆಕೋಶಿ ನದಿಯಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ ಮೃತಪಟ್ಟವರ ಸ್ಮರಣಾರ್ಥ ನೇಪಾಳ ಸೋಮವಾರ ರಾಷ್ಟ್ರೀಯ ಶೋಕಾಚರಣೆ ದಿನವನ್ನು ಆಚರಿಸಲಾಯಿತು. ಈ ಹಿನ್ನೆಲೆಯಲ್ಲಿ ದೇಶದಾದ್ಯಂತ ಸರ್ಕಾರಿ ಕಚೇರಿಗಳು ಹಾಗೂ ವಿದೇಶಗಳಲ್ಲಿರುವ ನೇಪಾಳದ ರಾಯಭಾರ ಕಚೇರಿಗಳಲ್ಲಿ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಲಾಯಿತು.

ನೇಪಾಳದ ಪ್ರಧಾನಮಂತ್ರಿ ಹಾಗೂ ಸಚಿವ ಸಂಪುಟ ಕಚೇರಿಯಲ್ಲಿ ಸೆ.3ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರವಾಹದಲ್ಲಿ ಮೃತಪಟ್ಟವರ ಗೌರವಾರ್ಥ ಸೆ.7ರಂದು ರಾಷ್ಟ್ರೀಯ ಶೋಕಾಚರಣೆ ನಡೆಸಲು ನಿರ್ಧರಿಸಲಾಗಿತ್ತು. ರಸುವಾ ಜಿಲ್ಲೆಯಲ್ಲಿ ಬೋಟೆಕೋಶಿ ನದಿಯಲ್ಲಿ ಉಂಟಾದ ಭಾರಿ ಪ್ರವಾಹದಿಂದ ಅಪಾರ ಪ್ರಮಾಣದಲ್ಲಿ ಜೀವಹಾನಿ ಸಂಭವಿಸಿದ್ದು, ಮನೆಗಳು, ರಸ್ತೆಗಳು, ಸೇತುವೆಗಳು, ಜಲವಿದ್ಯುತ್ ಯೋಜನೆಗಳು ಸೇರಿದಂತೆ ಪ್ರಮುಖ ಮೂಲಸೌಕರ್ಯಗಳಿಗೆ ಭಾರಿ ಹಾನಿಯಾಗಿದೆ. ಪ್ರವಾಹದ ಪರಿಣಾಮ ತ್ರಿಶೂಲಿ ನದಿಯ ಕೆಳಭಾಗದಲ್ಲಿರುವ ನುವಾಕೋಟ್ ಮತ್ತು ಧಾದಿಂಗ್ ಜಿಲ್ಲೆಗಳೂ ತೀವ್ರವಾಗಿ ಬಾಧಿತವಾಗಿವೆ. ಹಲವು ಪ್ರದೇಶಗಳಲ್ಲಿ ಜನರು ಸ್ಥಳಾಂತರಗೊಂಡಿದ್ದು, ಸಾರಿಗೆ, ವಿದ್ಯುತ್ ಮತ್ತು ನೀರು ಪೂರೈಕೆ ವ್ಯವಸ್ಥೆಗೂ ಅಡಚಣೆಯಾಗಿದೆ.

**ಮುಂದುವರಿದ ರಕ್ಷಣಾ ಕಾರ್ಯಾಚರಣೆ:** ಪ್ರವಾಹ ಪೀಡಿತ ಪ್ರದೇಶಗಳಲ್ಲಿ ನೇಪಾಳ ಸೇನೆ, ನೇಪಾಳ ಪೊಲೀಸ್ ಹಾಗೂ ಸಶಸ್ತ್ರ ಪೊಲೀಸ್ ಪಡೆ ಸೇರಿದಂತೆ ವಿವಿಧ ಸಂಸ್ಥೆಗಳು ಶೋಧ, ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಮುಂದುವರಿಸಿವೆ.



ಲಭ್ಯ ಮಾಹಿತಿಯ ಪ್ರಕಾರ, 13,391 ಮಂದಿಯನ್ನು ರಕ್ಷಿಸಲಾಗಿದೆ. ಒಟ್ಟು 21,465 ಭದ್ರತಾ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ನಿಯೋಜಿತರಾಗಿದ್ದಾರೆ. ನೇಪಾಳ ಪೊಲೀಸ್ ಮಾಹಿತಿಯಂತೆ, ಭಾನುವಾರ ಸಂಜೆ ವೇಳೆಗೆ 1,342 ಮೃತದೇಹಗಳನ್ನು ಪತ್ತೆಹಚ್ಚಲಾಗಿದೆ, ಇನ್ನೂ 3,992 ಮಂದಿ ನಾಪತ್ತೆಯಾಗಿದ್ದಾರೆ.

ಪತ್ತೆಯಾದ ಮೃತದೇಹಗಳಲ್ಲಿ 530 ಪುರುಷರು ಮತ್ತು 328 ಮಹಿಳೆಯರಿದ್ದು, 495 ಮೃತದೇಹಗಳನ್ನು ಇನ್ನೂ ಗುರುತಿಸಲು ಸಾಧ್ಯವಾಗಿಲ್ಲ. ಮೃತರು ಹಾಗೂ ಅವರ ಸಂಬಂಧಿಕರಿಂದ ಡಿಎನ್‌ಎ ಮಾದರಿಗಳನ್ನು ಸಂಗ್ರಹಿಸಿ ಗುರುತಿಸುವ ಪ್ರಕ್ರಿಯೆ ಮುಂದುವರಿದಿದೆ.

ಪ್ರವಾಹದಿಂದ ಉಂಟಾದ ಭಾರಿ ಹಾನಿಯ ನಡುವೆ ಪರಿಹಾರ, ಪುನರ್ನಿರ್ಮಾಣ ಮತ್ತು ನಾಪತ್ತೆಯಾದವರ ಶೋಧ ಕಾರ್ಯಗಳು ಮುಂದುವರಿದಿದ್ದು, ಸಂತ್ರಸ್ತ ಕುಟುಂಬಗಳ ದುಃಖದೊಂದಿಗೆ ನೇಪಾಳ ರಾಷ್ಟ್ರೀಯ ಶೋಕಾಚರಣೆಯ ಮೂಲಕ ಮೃತರಿಗೆ ಗೌರವ ಸಲ್ಲಿಸುತ್ತಿದೆ.

# ಎಂಜಿನ್ ತೈಲ ಪ್ರಮಾಣ ದಿಢೀರ್ ಕುಸಿತ

## ಅಬುಧಾಬಿಗೆ ಹೊರಟಿದ್ದ ವಿಮಾನ ಕೊಚ್ಚಿಗೆ ವಾಪಸ್

**ಕೊಚ್ಚಿ, ಸೆ. 7:** ಅಬುಧಾಬಿಗೆ ತೆರಳುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ಬೋಯಿಂಗ್ 737 ವಿಮಾನವು ಹಾರಾಟದ ಮಧ್ಯೆ ಎಂಜಿನ್‌ನ ತೈಲ ಪ್ರಮಾಣ ದಿಢೀರ್ ಕುಸಿದ ಹಿನ್ನೆಲೆಯಲ್ಲಿ ಕೊಚ್ಚಿ ವಿಮಾನ ನಿಲ್ದಾಣಕ್ಕೆ ವಾಪಸ್ ಆಗಿದೆ. ವಿಮಾನವು ಸುರಕ್ಷಿತವಾಗಿ ಲ್ಯಾಂಡ್ ಆಗಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ. ಕೊಚ್ಚಿಯಿಂದ ಅಬುಧಾಬಿಗೆ ತೆರಳುತ್ತಿದ್ದ IX 415 ವಿಮಾನದ ಎಂಜಿನ್ 1ರಲ್ಲಿ ತೈಲದ ಪ್ರಮಾಣ ವೇಗವಾಗಿ ಕಡಿಮೆಯಾಗುತ್ತಿರುವುದನ್ನು ವಿಮಾನದ ಸಿಬ್ಬಂದಿ ಗಮನಿಸಿದರು. ಹಾರಾಟ ಮುಂದುವರಿದಂತೆ ಎಂಜಿನ್ನ ತೈಲದ ಒತ್ತಡವು ಅಪಾಯದ ಮಟ್ಟಕ್ಕೆ ಇಳಿದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಆ ಎಂಜಿನ್ ಸ್ಥಗಿತಗೊಳಿಸಲಾಯಿತು. ತಾಂತ್ರಿಕ ಸಮಸ್ಯೆಯನ್ನು ಗಮನಿಸಿದ ಪೈಲಟ್‌ಗಳು ವಿಮಾನವನ್ನು ಕೊಚ್ಚಿಗೆ ಹಿಂದಿರುಗಿಸುವ ನಿರ್ಧಾರ ಕೈಗೊಂಡರು. ಬಳಿಕ



ವಿಮಾನವು ಕೊಚ್ಚಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಯಿತು. ಘಟನೆಯಿಂದ ಪ್ರಯಾಣಿಕರಿಗೆ ಯಾವುದೇ ಅಪಾಯ ಅಥವಾ ಗಾಯವಾಗಿರುವ ಬಗ್ಗೆ ವರದಿಯಾಗಿಲ್ಲ. ವಿಮಾನವನ್ನು ತಾಂತ್ರಿಕ ತಪಾಸಣೆಗೆ ಒಳಪಡಿಸಲಾಗಿದ್ದು, ಎಂಜಿನ್ನಲ್ಲಿ ತೈಲ ಪ್ರಮಾಣ ದಿಢೀರ್ ಕುಸಿಯಲು ಕಾರಣವೇನು ಎಂಬುದನ್ನು ಪರಿಶೀಲಿಸಲಾಗುತ್ತಿದೆ.

# ಭಾರತ ಬುದ್ಧನ ನಾಡು: ಭಾಗವತ್ ಹೇಳಿಕೆಗೆ ಪ್ರಿಯಾಂಕ್ ಖರ್ಗೆ ತಿರುಗೇಟು

**ಬೆಂಗಳೂರು, ಸೆ.7:** ವಿದೇಶಿ ಪ್ರವಾಸದಲ್ಲಿರುವ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಭಾರತವು ಬುದ್ಧನ ನಾಡು ಎಂದಿದ್ದಾರೆ. ಅವರ ಈ ಹೇಳಿಕೆಯನ್ನು ಆಧರಿಸಿ ರಾಜ್ಯ ಗ್ರಹಸಚಿವ ಪ್ರಿಯಾಂಕ್ ಖರ್ಗೆ, ಸಂಘ ಪರಿವಾರ ಮತ್ತು ಆರ್‌ಎಸ್‌ಎಸ್‌ನ ಸೈದ್ಧಾಂತಿಕ ವಿರೋಧಾಭಾಸಗಳನ್ನು ಬಯಲಿಗೆಳೆದಿದ್ದಾರೆ.



ಆರ್‌ಎಸ್‌ಎಸ್‌ನ ಮೂಲ ಸೈದ್ಧಾಂತಿಕ ಮಾರ್ಗದರ್ಶಿ ಎನಿಸಿಕೊಂಡಿರುವ ವಿನಾಯಕ ದಾಮೋದರ ಸಾವರ್ಕರ್ ಅವರು ಭಗವಾನ್ ಬುದ್ಧ, ಬೌದ್ಧಧರ್ಮ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಧರ್ಮಾಂತರದ ಕುರಿತು ಹೊಂದಿದ್ದ ಕಟು ನಿಲುವು ಮತ್ತು ಭಾಗವತ್ ಅವರ ಇಂದಿನ ಹೇಳಿಕೆಗಳನ್ನು ಒಂದಕ್ಕೊಂದು ಬೆಸೆದು ಆರ್‌ಎಸ್‌ಎಸ್ ಎದುರು ಹಲವು ಪ್ರಶ್ನೆಗಳನ್ನಿಟ್ಟಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಸ್ತೃತ ಪೋಸ್ಟ್ ಬರೆದಿರುವ ಪ್ರಿಯಾಂಕ್ ಖರ್ಗೆ, ಸಾವರ್ಕರ್ ಸಮಗ್ರದ ಏಳನೇ ಸಂಪುಟದಲ್ಲಿದ್ದಿರುವ ಸಾವರ್ಕರ್ ಬರೆದಿದ್ದ ಬೌದ್ಧಧರ್ಮವನ್ನು ಸ್ವೀಕರಿಸುವ ಮೂಲಕ ನೀವು ಅಸಹಾಯಕರಾಗುತ್ತೀರಿ ಎಂಬ ಶೀರ್ಷಿಕೆಯ ಲೇಖನವನ್ನು ಉಲ್ಲೇಖಿಸಿದ್ದಾರೆ. 1956ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದಾಗ, ಸಾವರ್ಕರ್ ಅವರು ಕೇಸರಿ ಪತ್ರಿಕೆಯಲ್ಲಿ (ಅಕ್ಟೋಬರ್ 30, 1956) ಲೇಖನ ಬರೆದಿದ್ದರು.

ಅದರಲ್ಲಿ, ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸುವ ನಿರ್ಧಾರವನ್ನು ಸಾವರ್ಕರ್ ಕಟುವಾಗಿ ಟೀಕಿಸಿದ್ದರು. ಅಂಬೇಡ್ಕರ್ ಅವರು ಬೌದ್ಧಧರ್ಮದ ಮೇಲಿನ ಆಳವಾದ ನಂಬಿಕೆಯಿಂದ ಮತಾಂತರಗೊಂಡಿಲ್ಲ, ಬದಲಿಗೆ ಹಿಂದು ರಾಷ್ಟ್ರವನ್ನು ನಾಶಮಾಡುವ ಮಹತ್ವಾಕಾಂಕ್ಷೆ ಅವರ ಧರ್ಮಾಂತರದ ಹಿಂದಿತ್ತು ಎಂದಿದ್ದರು ಎಂದು ವಿವರಿಸಿದ್ದಾರೆ.

ಮುಂದುವರೆದು, ಅದೇ ಲೇಖನದಲ್ಲಿ ಅಂಬೇಡ್ಕರ್ ಅವರು ಭಿಕ್ಕು ಅಂಬೇಡ್ಕರ್ ಆದರೂ ಅದಕ್ಕೆ ಹಿಂದು ಸಮಾಜದಲ್ಲಿ ಯಾವುದೇ ವಿಶೇಷ ಪ್ರತಿಕ್ರಿಯೆ ಇರುವುದಿಲ್ಲ. ಜಹಾನ್ ಸ್ವಯಂ ಬುದ್ಧ ಹಾರ್ ಗಯೇ, ವಹಾನ್ ಅಂಬೇಡ್ಕರ್ ಕಿಸ್ ಝಾಡ್ ಕಿ ಪತ್ತಿ ಹೈ (ಸ್ವತಃ ಬುದ್ಧನೇ ಯಶಸ್ವಿಯಾಗದಿದ್ದಾಗ, ಅಂಬೇಡ್ಕರ್ ಯಾವ ಲೆಕ್ಕ) ಎಂದು ಬುದ್ಧ ಮತ್ತು ಅಂಬೇಡ್ಕರ್ ಇಬ್ಬರನ್ನೂ ಸಾವರ್ಕರ್ ನಿಂದಿಸಿದ್ದರು ಎಂದು ಖರ್ಗೆ ನೆನಪಿಸಿದ್ದಾರೆ.

ಸಾವರ್ಕರ್ ಬರೆದಿದ್ದ ಈ ಲೇಖನವನ್ನು ಆಧರಿಸಿ ಮೋಹನ್ ಭಾಗವತ್‌ಗೆ ಪ್ರಶ್ನೆಗಳನ್ನು ಕೇಳಿರುವ ಪ್ರಿಯಾಂಕ್ ಖರ್ಗೆ, ಇಂದು ಮೋಹನ್ ಭಾಗವತ್ ಅವರು ಭಾರತವನ್ನು ಬುದ್ಧನ ನಾಡು ಎಂದು ಕರೆಯುತ್ತಿದ್ದಾರೆ. ಆದರೆ, ಅದೇ ಸಂಘದ ಸೈದ್ಧಾಂತಿಕ ಪಿತಾಮಹ ಸಾವರ್ಕರ್ ಅವರು ಬುದ್ಧ, ಬೌದ್ಧ ಧರ್ಮ ಮತ್ತು ಅಂಬೇಡ್ಕರ್ ಅವರನ್ನು ಕಟುವಾಗಿ ಟೀಕಿಸಿದ್ದರು. ಹಾಗಾದರೆ, ಈ ವಿಷಯದಲ್ಲಿ ಆರ್‌ಎಸ್‌ಎಸ್‌ನ ಅಧಿಕೃತ ನಿಲುವು ಏನು. ಸಂಘ ಪರಿವಾರ ತನ್ನ ನೈಜ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಖರ್ಗೆ ಆಗ್ರಹಿಸಿದ್ದಾರೆ.

ಆರ್‌ಎಸ್‌ಎಸ್ ಈಗ ನಿಜಕ್ಕೂ ಭಾರತ ಬುದ್ಧನ ನಾಡು ಎಂದು ಒಪ್ಪಿಕೊಳ್ಳುತ್ತಿದೆಯೇ ಹಾಗಿದ್ದರೆ ಬೌದ್ಧ ಧರ್ಮ ಮತ್ತು ಡಾ. ಅಂಬೇಡ್ಕರ್ ಅವರ ಧರ್ಮಾಂತರವನ್ನು ಕೀಳಾಗಿ ಕಂಡಿದ್ದ ಸಾವರ್ಕರ್ ಅವರ ವಿವಾದಾತ್ಮಕ ನಿಲುವನ್ನು ಆರ್‌ಎಸ್‌ಎಸ್ ಇಂದಿಗೂ ಬೆಂಬಲಿಸುತ್ತದೆಯೇ ಅಥವಾ ಅದನ್ನು ಖಂಡಿಸುತ್ತದೆಯೇ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.



ರಾಜ್ಯ ಸರ್ಕಾರಿ ವಸತಿನಿಲಯ ಮತ್ತು ವಸತಿ ಶಾಲೆಗಳ ಹೊರಗುತ್ತಿಗೆ ನೌಕರರ ಸಂಘದ ಸದಸ್ಯರು ಮಾಸಿಕ 32,000 ರೂಪಾಯಿ ವೇತನಕ್ಕೆ ಆಗ್ರಹಿಸಿ ಸೋಮವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿದರು.

# ಪ್ರಧಾನಮಂತ್ರಿ ಸೂರ್ಯಘರ್ ಯೋಜನೆ: ಬೆಸ್ಕಾಂ ವ್ಯಾಪ್ತಿ ಸೌರಫಲಕ ಅಳವಡಿಸುವ ಕಾರ್ಯ ಚುರುಕು

**ಬೆಂಗಳೂರು, ಸೆ.7,** ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಸರ್ಕಾರಿ ಕಟ್ಟಡಗಳ ಮೇಲೆ ಸೋಲಾರ್ ರೂಫ್‌ಟಾಪ್ ಫೋಟೋವೋಲ್ಟಾಯಿಕ್ ವ್ಯವಸ್ಥೆಗಳನ್ನು ಅಳವಡಿಸುವ ಕಾರ್ಯವನ್ನು ರಾಜ್ಯ ಸರ್ಕಾರ ತ್ವರಿತಗೊಳಿಸಲಿದೆ.

ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ವಿವಿಧ ಸರ್ಕಾರಿ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಸರ್ಕಾರಿ ಕಟ್ಟಡಗಳ ಸೌರೀಕರಣ, ಪಾವತಿ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿದರು.

ಸರ್ಕಾರಿ ಕಟ್ಟಡಗಳ ಸಮೀಕ್ಷೆ ನಡೆಸಲು ಲೋಕೋಪಯೋಗಿ ಇಲಾಖೆಯನ್ನು ಹಾಗೂ ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಸರ್ಕಾರಿ ಕಟ್ಟಡಗಳ ಮೇಲೆ ಸೋಲಾರ್ ರೂಫ್‌ಟಾಪ್ ಯೋಜನೆ ಅನುಷ್ಠಾನಗೊಳಿಸಲು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವನ್ನು ನೋಡಲ್ ಏಜೆನ್ಸಿಗಳನ್ನಾಗಿ ನೇಮಿಸಲಾಗಿದೆ. ಸೌರಫಲಕ ಅಳವಡಿಸಲು ಅನುಕೂಲಕರವಾದ ಮೇಲ್ಛಾವಣಿ ಸ್ಥಳಾವಕಾಶ ಹೊಂದಿರುವ ಜಿಲ್ಲಾಧಿಕಾರಿಗಳ ಕಚೇರಿಗಳು ಸೇರಿದಂತೆ ಇತರೆ ಸರ್ಕಾರಿ ಕಟ್ಟಡಗಳಲ್ಲಿ ನವೀಕರಿಸಬಹುದಾದ ಇಂಧನ ಬಳಕೆಗೆ ಒತ್ತು ನೀಡಲು ಆದ್ಯತೆ ನೀಡಲಾಗುವುದು,? ಎಂದು ಸಭೆಯಲ್ಲಿ ಗೌರವ್ ಗುಪ್ತ ತಿಳಿಸಿದರು.

ಯೋಜನೆ ಅನುಷ್ಠಾನಕ್ಕೆ ರೆಸ್ಕೋ ಮತ್ತು ಕ್ಯಾಪೆಕ್ಸ್ ಮಾದರಿಗಳನ್ನು ವಿವರಿಸಿದ ಗೌರವ್ ಗುಪ್ತ, ನವೀಕರಿಸಬಹುದಾದ ಇಂಧನ ಸೇವಾ ಸಂಸ್ಥೆ (ರೆಸ್ಕೋ) ಮಾದರಿಯಲ್ಲಿ ಸರ್ಕಾರಿ ಇಲಾಖೆಗಳು ಯಾವುದೇ ಆರಂಭಿಕ ಬಂಡವಾಳ ಹೂಡಿಕೆ ಮಾಡುವ ಅಗತ್ಯವಿರುವುದಿಲ್ಲ. ಯೋಜನೆಯ ಸಂಪೂರ್ಣ ವೆಚ್ಚವನ್ನು ಡೆವಲಪರ್‌ಗಳು ಭರಿಸಲಿದ್ದಾರೆ. ಒಪ್ಪಂದದ ಅವಧಿಯಲ್ಲಿ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ, ಉಪಕರಣಗಳ ಬದಲಾವಣೆ ಹಾಗೂ ಕಾರ್ಯಕ್ಷಮತೆ ಮೇಲ್ವಿಚಾರಣೆಯ



ಜವಾಬ್ದಾರಿಯನ್ನೂ ಡೆವಲಪರ್‌ಗಳೇ ನಿರ್ವಹಿಸಲಿದ್ದಾರೆ. ಇದರಿಂದ ಸರ್ಕಾರಿ ಇಲಾಖೆಗಳ ವಿದ್ಯುತ್ ವೆಚ್ಚ ಕಡಿಮೆಯಾಗಲಿದ್ದು, ಹೆಚ್ಚುವರಿ ವಿದ್ಯುತ್ ಅನ್ನು ಗ್ರಿಡ್‌ಗೆ ಮಾರಾಟ ಮಾಡುವ ಮೂಲಕ ಆದಾಯ ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕ್ಯಾಪೆಕ್ಸ್ (ಕಟ್ಟಡಗಳು, ಯಂತ್ರೋಪಕರಣಗಳದಂತಹ ಸ್ವತ್ತು ಖರೀದಿಗೆ ಮಾಡುವ ಖರ್ಚು–ಬಂಡವಾಳ ವೆಚ್ಚ) ಮಾದರಿಯಲ್ಲಿ ಸಂಬಂಧಪಟ್ಟ ಸಚಿವಾಲಯ ಅಥವಾ ಇಲಾಖೆಯು ತನ್ನ ಸ್ವಂತ ನಿಧಿಯನ್ನು ಬಳಸಿಕೊಂಡು ಅಥವಾ ಬ್ಯಾಂಕ್‌ಗಳು ಹಾಗೂ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಮೇಲ್ಛಾವಣಿ ಸೌರ ಯೋಜನೆಯ ಮಾಲೀಕತ್ವವನ್ನು ಹೊಂದಲಿದೆ. ಬಿಡ್ಡಿಂಗ್ ಪ್ರಕ್ರಿಯೆಯ ಮೂಲಕ ಇಪಿಸಿ ಡೆವಲಪರ್ ಆಯ್ಕೆ ಮಾಡಲಾಗುವುದು. ನಿರ್ಮಾಣ, ಕಾರ್ಯಾರಂಭ ಹಾಗೂ ನಿಗದಿತ ಅವಧಿಯವರೆಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಇಪಿಸಿ ಡೆವಲಪರ್ ವಹಿಸಲಿದ್ದು, ನಂತರ ವ್ಯವಸ್ಥೆಯನ್ನು ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸಲಾಗುವುದು ಎಂದು ವಿವರಿಸಿದರು.

ಮೇಲ್ಛಾವಣಿ ಸೌರಯೋಜನೆಗಳಿಗೆ ಅಗತ್ಯವಿರುವ ಗ್ರಿಡ್ ಸಂಪರ್ಕ, ಮೀಟರಿಂಗ್ ಹಾಗೂ ನಿಯಂತ್ರಣಾತ್ಮಕ ನಿಯಮಗಳ ಪಾಲನೆಗೆ ಬೆಸ್ಕಾಂ ಮತ್ತು ಇತರ ಎಸ್ಕಾಂಗಳು ಅಗತ್ಯ ಸಹಕಾರ ನೀಡಲಿವೆ. ಈ ಸಮನ್ವಯವು ಸೌರ ವ್ಯವಸ್ಥೆಗಳನ್ನು ವಿದ್ಯುತ್ ಗ್ರಿಡ್‌ನೊಂದಿಗೆ ಸುಗಮವಾಗಿ ಸಂಯೋಜಿಸಲು ನೆರವಾಗಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ ಹೇಳಿದರು.

> 
>
> ನವೀಕರಿಸಬಹುದಾದದ ಇಂಧನ ಬಳಕೆಯಲ್ಲಿ ನಮ್ಮ ರಾಜ್ಯ ಮುಂಚೂಣಿಯಲ್ಲಿದೆ. ಸರ್ಕಾರಿ ಕಟ್ಟಡಗಳ ಸೌರೀಕರಣವು ಸಾಂಪ್ರದಾಯಿಕ ವಿದ್ಯುತ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ನವೀಕರಿಸಬಹುದಾದದ ಇಂಧನದ ಬಳಕೆಯನ್ನು ಸರ್ಕಾರ ಉತ್ತೇಜಿಸಲಿದೆ. ಇಂಗಾಲದ ಹೊರಸೂಸುವಿಕೆಯನ್ನು ತಗ್ಗಿಸುವಲ್ಲಿ ನೆರವಾಗಲಿರುವ ಈ ಉಪಕ್ರಮವು, ಸರ್ಕಾರಿ ಕಟ್ಟಡಗಳಲ್ಲಿ ಇಂಧನ ಸುಸ್ಥಿರತೆಯನ್ನು ಮತ್ತಷ್ಟು ಬಲಪಡಿಸುವುದರ ಜತೆಗೆ ಇಂಧನ ಭದ್ರತೆಯನ್ನು ಕಾಯ್ದುಕೊಳ್ಳಲು ನೆರವಾಗಲಿದೆ.
>
> -ಕೆ.ಜೆ.ಜಾರ್ಜ್, ಇಂಧನ ಮತ್ತು ಪ್ರವಾಸೋದ್ಯಮ ಸಚಿವ

ಸಭೆಯಲ್ಲಿ ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ರಾಮ್ ಪ್ರಸಾತ್ ಮನೋಹರ್, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕಿ ದಿವ್ಯಾ ಪ್ರಭು, ಜೆ.ಆರ್.ಜೆ. ಹಾಗೂ ಇಂಧನ ಇಲಾಖೆ ಹಾಗೂ ಇತರ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

**ಹೆಚ್ಚುವರಿ ವಿದ್ಯುತ್ ಗ್ರಿಡ್‌ಗೆ ರವಾನೆ**

ಉತ್ಪಾದನೆಯಾಗುವ ವಿದ್ಯುತ್ ಅನ್ನು ಮೊದಲು ಕಟ್ಟಡದ ಸ್ವಂತ ವಿದ್ಯುತ್ ಬಳಕೆಗೆ ವಿನಿಯೋಗಿಸಲಾಗುತ್ತದೆ. ಹೆಚ್ಚುವರಿ ವಿದ್ಯುತ್ ಅನ್ನು ಗ್ರಿಡ್‌ಗೆ ರವಾನಿಸಲಾಗುವುದು. ಗ್ರಿಡ್‌ನಿಂದ ಬಳಸಲಾದ ವಿದ್ಯುತ್ ಆಧರಿಸಿ ವಿದ್ಯುತ್ ವಿತರಣಾ ಕಂಪನಿಗಳು ಮಾಸಿಕ ವಿದ್ಯುತ್ ಬಿಲ್‌ಗಳನ್ನು ನೀಡಲಿದ್ದು, ಮೇಲ್ಛಾವಣಿ ಸೌರ ವ್ಯವಸ್ಥೆಯಿಂದ ಗ್ರಿಡ್‌ಗೆ ರಫ್ತು ಮಾಡಲಾದ ಹೆಚ್ಚುವರಿ ವಿದ್ಯುತ್‌ಗೆ ಪ್ರೋತ್ಸಾಹಧನವನ್ನೂ ಒದಗಿಸಲಿವೆ ಎಂದು ಗೌರವ್ ಗುಪ್ತ ಹೇಳಿದರು.

# ನಿಗದಿತ ಅವಧಿಯೊಳಗೆ ನೀರಾವರಿ ಯೋಜನೆ ಪೂರ್ಣಗೊಳಿಸಿ ಅಧಿಕಾರಿಗಳಿಗೆ ಸಚಿವ ಚಲುವರಾಯಸ್ವಾಮಿ ಸೂಚನೆ

**ಬೆಂಗಳೂರು ಸೆ.7:** ರಾಜ್ಯದ ನೀರಾವರಿ ಯೋಜನೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ರೈತರಿಗೆ ಯೋಜನೆಗಳ ಸಂಪೂರ್ಣ ಪ್ರಯೋಜನ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚಿನ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ಸೂಚಿಸಿದರು.




ಕರ್ನಾಟಕ ನೀರಾವರಿ ನಿಗಮದ ವತಿಯಿಂದ ಕೈಗೊಳ್ಳಲಾಗುತ್ತಿರುವ ವಿವಿಧ ನೀರಾವರಿ ಯೋಜನೆಗಳು ಹಾಗೂ ಕಾಮಗಾರಿಗಳ ಪ್ರಗತಿ ಕುರಿತು ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಅಧಿಕಾರಿಗಳಿಗೆ ಹಲವು ಮಹತ್ವದ ನಿರ್ದೇಶನಗಳನ್ನು ನೀಡಿದರು.

ರಾಜ್ಯದ ವಿವಿಧ ಭಾಗಗಳಲ್ಲಿ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಸರ್ಕಾರ ಹಲವಾರು ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳು ಪೂರ್ಣಗೊಂಡಾಗ ಸಾವಿರಾರು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುವುದರ ಜೊತೆಗೆ ರೈತರ ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಹೀಗಾಗಿ ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ರೀತಿಯ ವಿಳಂಬ ಅಥವಾ ನಿರ್ಲಕ್ಷ್ಯಕ್ಕೆ ಅವಕಾಶ ನೀಡಬಾರದು ಎಂದು ಸಚಿವರು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ತಿಳಿಸಿದರು.

ಯೋಜನೆಗಳ ಪ್ರಗತಿ ಕಡತಗಳಲ್ಲಿ ಮಾತ್ರ ಕಾಣಿಸಿಕೊಳ್ಳಬಾರದು; ಕಾಮಗಾರಿ ಸ್ಥಳದಲ್ಲೂ ಕಾಣಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಪ್ರತಿ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳು, ಎದುರಾಗಿರುವ ತಾಂತ್ರಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಚಿವರು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

**ಕಾಮಗಾರಿ ಗುಣಮಟ್ಟದಲ್ಲಿ ರಾಜಿ ಇಲ್ಲ**


ನೀರಾವರಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳಬಾರದು ಎಂದು ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು. ಸರ್ಕಾರದ ಹಣ ಎಂದರೆ ಅದು ಜನರ ಹಣ. ಸಾರ್ವಜನಿಕರ ತೆರಿಗೆ ಹಣದಿಂದ ಕೈಗೊಳ್ಳುವ ಕಾಮಗಾರಿಗಳು ದೀರ್ಘಕಾಲ ಬಾಳಿಕೆ ಬರುವಂತಿರಬೇಕು. ಕಾಮಗಾರಿಗಳಲ್ಲಿ ಕಳಪೆ ಗುಣಮಟ್ಟ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಪ್ರಗತಿಯಲ್ಲಿರುವ ಎಲ್ಲ ಯೋಜನೆಗಳಿಗೂ ಕಾಲಮಿತಿ ನಿಗದಿಪಡಿಸಿ, ಆ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರು. ಕಾಮಗಾರಿಗಳ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸುವ ವ್ಯವಸ್ಥೆ ರೂಪಿಸಬೇಕು. ಪ್ರತಿ ಯೋಜನೆಯ ಪ್ರಗತಿ ವರದಿಯನ್ನು ನಿಯಮಿತವಾಗಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಎಂಜಿನಿಯರ್‌ಗಳು ಹಾಗೂ ವಿವಿಧ ವಿಭಾಗಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಾಜಿ ಸಚಿವ ಎಚ್.ಸಿ.ಮಹದೇವಪ್ಪ, ಸಚಿವ ಬೈರತಿ ಸುರೇಶ್ ನಡುವೆ ಭುಗಿಲೆದ್ದ ವಿವಾದ

**ಬೆಂಗಳೂರು, ಸೆ.7:** ಬೆಂಗಳೂರಿನ ಕ್ರೆಸೆಂಟ್ ರಸ್ತೆಯಲ್ಲಿರುವ ಸರ್ಕಾರಿ ಬಂಗಲೆಗಾಗಿ ಕಾಂಗ್ರೆಸ್ ನಾಯಕರಾದ ಎಚ್.ಸಿ. ಮಹದೇವಪ್ಪ ಮತ್ತು ಭೈರತಿ ಸುರೇಶ್ ನಡುವೆ ವಿವಾದ ಭುಗಿಲೆದ್ದಿದೆ. ಮಹದೇವಪ್ಪನವರು ನಿವಾಸ ಖಾಲಿ ಮಾಡುವ ಮುನ್ನವೇ, ಸುರೇಶ್ ಅವರು ನವೀಕರಣ ಕಾರ್ಯ ಆರಂಭಿಸಿ, ಶೆಡ್ ಕೆಡವಿರುವುದು ತೀವ್ರ ಚರ್ಚೆಗೆ ಕಾರಣವಾಗಿದೆ.



ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಪ್ರಮುಖ ನಾಯಕರ ನಡುವೆ ಇದೀಗ 'ಸರ್ಕಾರಿ ಬಂಗಲೆ' ಕಿತ್ತಾಟ ತಾರಕಕ್ಕೇರಿದೆ. ರಾಜಧಾನಿಯ ಪ್ರತಿಷ್ಠಿತ ಕ್ರೆಸೆಂಟ್ ರಸ್ತೆಯಲ್ಲಿರುವ ಸರ್ಕಾರಿ ನಿವಾಸವನ್ನು ಮಾಜಿ ಸಚಿವ, ಹಿರಿಯ ಮುಖಂಡ ಡಾ. ಎಚ್.ಸಿ. ಮಹದೇವಪ್ಪ ಅವರು ಖಾಲಿಮಾಡುವ ಮುನ್ನವೇ, ಸಚಿವ ಭೈರತಿ ಸುರೇಶ್ ಆ ಮನೆಯ ನವೀಕರಣ ಕಾರ್ಯ ಆರಂಭಿಸಿರುವುದು ತೀವ್ರ ವಿವಾದ ಹಾಗೂ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮಹದೇವಪ್ಪ ಅವರು ಇನ್ನೂ ಮನೆಯಲ್ಲೇ ವಾಸ್ತವ್ಯ ಹೂಡಿರುವಾಗಲೇ ಮನೆಗೆ ಪೇಂಟಿಂಗ್ ಮಾಡಿಸುವುದು ಹಾಗೂ ಸಾರ್ವಜನಿಕರ ಭೇಟಿಗಾಗಿ ನಿರ್ಮಿಸಲಾಗಿದ್ದ ಶೆಡ್ ಅನ್ನು ಒಡೆಸಿ ಹಾಕಿರುವುದು ಕಾಂಗ್ರೆಸ್ ಪಾಳೆಯದಲ್ಲಿ ಭಾರೀ ಮುಜುಗರ ಸೃಷ್ಟಿಸಿದೆ.

ಸದ್ಯ ಡಾ. ಎಚ್.ಸಿ. ಮಹದೇವಪ್ಪ ವಾಸವಿರುವ ಕ್ರೆಸೆಂಟ್ ರಸ್ತೆಯ ಸರ್ಕಾರಿ ನಿವಾಸವು ಹಾಲಿ ಸಚಿವ ಭೈರತಿ ಸುರೇಶ್ ಅವರಿಗೆ ಹಂಚಿಕೆಯಾಗಿದೆ ನಿಯಮಾವಳಿಗಳ ಪ್ರಕಾರ ಯಾವುದೇ ಸಚಿವರು ಅಥವಾ ಶಾಸಕರು ಸರ್ಕಾರಿ ನಿವಾಸವನ್ನು ತೆರವುಗೊಳಿಸಲು ಕನಿಷ್ಠ 6 ತಿಂಗಳ ಕಾಲಾವಕಾಶವಿರುತ್ತದೆ. ಆದರೆ, ಮಹದೇವಪ್ಪ ಅವರು ಮನೆ ಹುಡುಕಿ ಖಾಲಿ ಮಾಡುವ ಮುನ್ನವೇ ಭೈರತಿ ಸುರೇಶ್ ಅತಿಯಾದ ಆತುರ ತೋರಿದ್ದಾರೆ ಎನ್ನಲಾಗಿದೆ.

ಖುದ್ದು ಭೈರತಿ ಸುರೇಶ್ ಅವರೇ ಸ್ಥಳಕ್ಕೆ ಭೇಟಿ ನೀಡಿ, ಮಹದೇವಪ್ಪ ಅವರು ಸಾರ್ವಜನಿಕರನ್ನು ಭೇಟಿ ಮಾಡುತ್ತಿದ್ದ ಮೀಟಿಂಗ್ ಹಾಲ್/ಶೆಡ್ ಅನ್ನು ನೆಲಸಮ ಮಾಡಿಸಿದ್ದಾರೆ.ಮಹದೇವಪ್ಪ ಅವರು ಮನೆಯ ಒಳಗಿರುವಾಗಲೇ ಹೊರಗಡೆ ಪೇಂಟಿಂಗ್ ಹಾಗೂ ನವೀಕರಣ ಕಾಮಗಾರಿ ಶುರುಮಾಡಿಸಲಾಗಿದೆ. ಅಷ್ಟೇ ಅಲ್ಲದೆ, ಮಹದೇವಪ್ಪ ಅವರ ಮನೆಯ ಸಿಬ್ಬಂದಿಗೆ ಭೈರತಿ ಸುರೇಶ್ ಆವಾಜ್ ಹಾಕಿದ್ದು, ಕೇವಲ 2 ದಿನಗಳಲ್ಲಿ ಮನೆ ಖಾಲಿ ಮಾಡುವಂತೆ ತಾಕೀತು ಮಾಡಿದ್ದಾರೆ ಎಂಬ ಗಂಭೀರ ಆರೋಪವೂ ಕೇಳಿಬಂದಿದೆ.

**ಬಾಡಿಗೆ ಮನೆ ಸಿಕ್ಕ ತಕ್ಷಣ ಖಾಲಿ ಮಾಡುವೆ**

ಭೈರತಿ ಸುರೇಶ್ ಅವರ ಈ ಅಸಹನೆ ಮತ್ತು ವರ್ತನೆಗೆ ಅತ್ಯಂತ ಸಂಯಮ ಹಾಗೂ ಮಾರ್ಮಿಕ ವ್ಯಂಗ್ಯದ ಮೂಲಕವೇ ಡಾ. ಎಚ್.ಸಿ. ಮಹದೇವಪ್ಪ ಪ್ರತ್ಯುತ್ತರ ನೀಡಿದ್ದಾರೆ. 'ಮನೆ ಭೈರತಿ ಸುರೇಶ್‌ಗೆ ಅಲಾಟ್ ಆಗಿದೆ. ಖಾಲಿ ಮಾಡಿ ಎಂದಿದ್ದಾರೆ, ಖಾಲಿ ಮಾಡಬೇಕಲ್ಲವೇ, ಪಾಪ... ಅವರಿಗೆ ಬಹಳ ಕಷ್ಟ ಇರಬಹುದು, ಬಹಳ ಬೇಗ ಇಲ್ಲಿಗೆ ಬರಬೇಕೆಂಬ ಆತುರ ಇರಬಹುದು. ಇಲ್ಲಿ ಹಿರಿಯ–ಕಿರಿಯ ನಾಯಕ ಎಂಬ ಪ್ರಶ್ನೆಯೇ ಬರಲ್ಲ. ಅವರು ಮಿನಿಸ್ಟರ್ ಇದ್ದಾರೆ, ಅವರ ಕೆಲಸ ಕಾರ್ಯಗಳಿಗೆ ಅಡ್ಡಿ ಆಗಬಾರದು. ನಾನು ಬಾಡಿಗೆ ಮನೆ ಹುಡುಕುತ್ತಿದ್ದೇನೆ, ಸಿಕ್ಕ ತಕ್ಷಣ ಖಾಲಿ ಮಾಡಿಕೊಡುತ್ತೇನೆ. ಪಾಪ ಅವರು ಕೇಳ್ತಿದ್ದಾರೆ, ಅವರಿಗೆ ತೊಂದರೆ ಆಗಬಾರದು ಎಂದು ಬಿಡುತ್ತಿದ್ದೇನೆ. ನಾನು ಸರ್ಕಾರಿ ಕೆಲಸದಲ್ಲಿದ್ದೆ, ಮನೆ ಕೊಟ್ಟಿದ್ದರು. ಈಗ ನಾನಿಲ್ಲ, ಬೇಗ ಬಿಡ್ತೇನೆ. ಇದರಲ್ಲಿ ನಾನು ಯಾರ ತಪ್ಪನ್ನೂ ಹುಡುಕಲ್ಲ' ಎಂದು ಕುಟುಕಿದ್ದಾರೆ.ಪಕ್ಷದ ಹಿರಿಯ ನಾಯಕನೊಬ್ಬ ಇನ್ನೂ ಮನೆಯಲ್ಲೇ ಇರುವಾಗ ಈ ರೀತಿ ದರ್ಪ ಪ್ರದರ್ಶಿಸಿ, ಮನೆಗೆ ಬಣ್ಣ ಬಳಿಯಲು ಮುಂದಾಗಿರುವ ಕಿರಿಯ ಸಚಿವ ಭೈರತಿ ಸುರೇಶ್ ಅವರ ನಡೆಗೆ ಸ್ವಪಕ್ಷೀಯರೇ ಒಳಗೊಳಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

# ಗುರಮಠಕಲ್, ಯಾದಗಿರಿ ಭಾಗ ಬರಪೀಡಿತ ಪಟ್ಟಿಗೆ ಸೇರಿಸದಿರುವುದಕ್ಕೆ ಖಂಡನೆ, ಪ್ರತಿಭಟನೆ

**ಬೆಂಗಳೂರು, ಸೆ.7:** ಬರದ ಬಿಸಿ ತೀವ್ರವಾಗಿದ್ದರೂ ಗುರುಮಠಕಲ್ ಹಾಗೂ ಯಾದಗಿರಿ ಭಾಗಗಳನ್ನು ಬರಪೀಡಿತ ತಾಲೂಕುಗಳ ಪಟ್ಟಿಗೆ ಸೇರಿಸದಿರುವುದನ್ನು ಖಂಡಿಸಿ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ್ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಸರ್ಕಾರ ಪ್ರಕಟಿಸಿರುವ ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ತಮ್ಮ ಕ್ಷೇತ್ರದ ಪ್ರದೇಶಗಳಿಗೆ ಸ್ಥಾನ ನೀಡದಿರುವುದು ರೈತರಿಗೆ ಅನ್ಯಾಯವಾಗಿದೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು. ಬರದ ಪರಿಣಾಮದಿಂದ ಬೆಳೆ ಹಾಗೂ ಜೀವನೋಪಾಯಕ್ಕೆ ಸಂಕಷ್ಟ ಎದುರಿಸುತ್ತಿರುವ ರೈತರಿಗೆ ಕೂಡಲೇ ಸರ್ಕಾರದ ನೆರವು ಸಿಗಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆ ವೇಳೆ ಮಾತನಾಡಿದ ಶರಣಗೌಡ ಕಂದಕೂರ್, ಬಿಸಿಲಿನ ತೀವ್ರತೆ ಹಾಗೂ ನೀರಿನ ಕೊರತೆಯಿಂದ ಗ್ರಾಮೀಣ ಭಾಗದ ಜನರು ಅನುಭವಿಸುತ್ತಿರುವ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಅಸಮಾಧಾನ ಹೊರಹಾಕಿದರು. ರೈತರು ಪ್ರತಿದಿನವೂ ಕಠಿಣ ಬಿಸಿಲಿನಲ್ಲೇ ಕೆಲಸ ಮಾಡಬೇಕಾದ ಪರಿಸ್ಥಿತಿಯಲ್ಲಿದ್ದಾರೆ. ಅವರ ಸಂಕಷ್ಟವನ್ನು ಕಚೇರಿಯಲ್ಲಿಕುಳಿತು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

# ಎಚ್.ವಿಶ್ವನಾಥ್ ವಿರುದ್ಧ ಬೈರತಿ ಸುರೇಶ್ ಸಲ್ಲಿಸಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣ: ಅರ್ಜಿ ರದ್ದತಿಗೆ ಹೈಕೋರ್ಟ್ ನಕಾರ

**ಬೆಂಗಳೂರು, ಸೆ.7:** ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ಬೈರತಿ ಸುರೇಶ್ ಮತ್ತು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ನಡುವಿನ ಹಗ್ಗಜಗ್ಗಾಟಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಅದರಂತೆ, ಎಚ್. ವಿಶ್ವನಾಥ್ ವಿರುದ್ಧ ಸಚಿವ ಬೈರತಿ ಸುರೇಶ್ ದಾಖಲಿಸಿರುವ 50 ಕೋಟಿ ಮೊತ್ತದ ಸಿವಿಲ್ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ. ಎಚ್. ವಿಶ್ವನಾಥ್ ಅವರು ತಮ್ಮ ವಿರುದ್ಧ ಸಚಿವರು ಹೂಡಿರುವ ಮಾನನಷ್ಟ ಮೊಕದ್ದಮೆ ಪ್ರಕರಣವನ್ನು ರದ್ದುಗೊಳಿಸುವಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಈ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಕೆಳ ನ್ಯಾಯಾಲಯದಲ್ಲಿ (ಸಿವಿಲ್ ಕೋರ್ಟ್) ದಾಖಲಾಗಿರುವ ಮಾನನಷ್ಟ ಕೇಸ್ ವಿಚಾರಣೆಯನ್ನು ರದ್ದುಪಡಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿ ವಿಶ್ವನಾಥ್ ಅವರ ಮನವಿಯನ್ನು ತಳ್ಳಿಹಾಕಿದೆ.ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ವಿವಾದದ ವೇಳೆ ಎಚ್. ವಿಶ್ವನಾಥ್ ಅವರು ಅಂದು ನಗರಾಭಿವೃದ್ಧಿ ಸಚಿವರಾಗಿದ್ದ ಸಚಿವ ಬೈರತಿ ಸುರೇಶ್ ವಿರುದ್ಧ ಗಂಭೀರ ಭ್ರಷ್ಟಾಚಾರದ ಆರೋಪಗಳನ್ನು ಮಾಡಿದ್ದರು. ಸಚಿವರು ಮುಡಾ ಕಚೇರಿಗೆ ಭೇಟಿ ನೀಡಿದ ಬಳಿಕವೂ ನೂರಾರು ಅಕ್ರಮ ಸೈಟ್‌ಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಿದ್ದರು. ಆದರೆ, ಈ ನಿರಂತರ ಮತ್ತು ಆಧಾರರಹಿತ ಆರೋಪಗಳಿಂದ ತಮ್ಮ ತೇಜೋವಧೆಯಾಗಿದೆ ಎಂದು ಬೇಸತ್ತ ಸಚಿವ ಬೈರತಿ ಸುರೇಶ್, ಬೆಂಗಳೂರಿನ ಸಿವಿಲ್ ನ್ಯಾಯಾಲಯದಲ್ಲಿ ವಿಶ್ವನಾಥ್ ವಿರುದ್ಧ 50 ಕೋಟಿ ಪರಿಹಾರ ಕೋರಿ ಮಾನನಷ್ಟ ಮೊಕದ್ದಮೆ ಹೂಡಿದ್ದರು.ಏತನ್ಮಧ್ಯೆ, ಈ ಹಿಂದೆ ತಮಗೆ ನೋಟಿಸ್ ಜಾರಿಯಾದಾಗ ಪ್ರತಿಕ್ರಿಯಿಸಿದ್ದ ಎಚ್. ವಿಶ್ವನಾಥ್, "ನಾನೂ ಕೂಡ ಕಾನೂನು ವಿದ್ಯಾರ್ಥಿ (ಲಾಯರ್), ಕೋರ್ಟ್‌ನಲ್ಲಿ ಈ ಪ್ರಕರಣವನ್ನು ಖುದ್ದಾಗಿ ಎದುರಿಸುತ್ತೇನೆ ಎಂದು ಸವಾಲು ಹಾಕಿದ್ದರು.

# ನೇಪಾಳದಲ್ಲಿ ನಾಪತ್ತೆಯಾದವರ ಪತ್ತೆಗಾಗಿ 8 ಕುಟುಂಬಸ್ಥರ ಡಿಎನ್‌ಎ ಮಾದರಿ ಸಂಗ್ರಹಣೆ

**ಬೆಂಗಳೂರು, ಸೆ.7:** ನೇಪಾಳದಲ್ಲಿ ಸಂಭವಿಸಿರುವ ಪ್ರವಾಹದ ಹಿನ್ನೆಲೆಯಲ್ಲಿ ನಾಪತ್ತೆಯಾಗಿರುವ ಕರ್ನಾಟಕದ ವ್ಯಕ್ತಿಗಳ ಗುರುತು ಪತ್ತೆಹಚ್ಚಲು ಹಾಗೂ ಅಗತ್ಯವಿದ್ದಲ್ಲಿ ಮೃತದೇಹಗಳ ಗುರುತಿಸುವಿಕೆ ನಡೆಸಲು ನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಸಂಬಂಧಿಕರಿಂದ ಡಿ.ಎನ್.ಎ ಮಾದರಿಗಳನ್ನು ಸಂಗ್ರಹಿಸುವ ಕಾರ್ಯ ನಡೆಯುತ್ತಿದೆ. ಇದುವರೆಗೆ ಸುಮಾರು ಎಂಟು ಮಂದಿಯ ಸಂಬಂಧಿಕರಿಂದ ಡಿ.ಎನ್.ಎ ಪರೀಕ್ಷೆಗಾಗಿ ರಕ್ತದ ಮಾದರಿಗಳನ್ನು ಸಂಗ್ರಹಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ನಾಪತ್ತೆಯಾದವರ ಮೊಬೈಲ್ ಫೋನ್‌ಗಳೂ ಸ್ವಿಚ್ ಆಫ್ ಆಗಿರುವ ಹಿನ್ನೆಲೆಯಲ್ಲಿ ಕುಟುಂಬ ಸದಸ್ಯರ ಆತಂಕ ಮತ್ತಷ್ಟು ಹೆಚ್ಚಾಗಿದೆ. ತಮ್ಮ ಕುಟುಂಬದ ಸದಸ್ಯರ ಸುಳಿವು ಪತ್ತೆಯಾಗದ ಹಿನ್ನೆಲೆಯಲ್ಲಿ ಸಂಬಂಧಿಕರು ಬೌರಿಂಗ್ ಆಸ್ಪತ್ರೆಗೆ ಆಗಮಿಸಿ ರಕ್ತದ ಮಾದರಿಗಳನ್ನು ನೀಡಿದ್ದಾರೆ. ನೇಪಾಳದಲ್ಲಿ ಪ್ರವಾಹದಿಂದ ಮೃತಪಟ್ಟಿರಬಹುದಾದವರ ಮೃತದೇಹಗಳ ಡಿ.ಎನ್.ಎ ಮಾದರಿಗಳೊಂದಿಗೆ ಇಲ್ಲಿ ಸಂಗ್ರಹಿಸಲಾಗುತ್ತಿರುವ ಸಂಬಂಧಿಕರ ಡಿ.ಎನ್.ಎ ಮಾದರಿಗಳನ್ನು ಹೋಲಿಕೆ ಮಾಡಲಾಗುತ್ತದೆ. ಡಿ.ಎನ್.ಎ ಪರೀಕ್ಷೆಯ ಮೂಲಕ ಮೃತದೇಹಗಳ ಗುರುತು ದೃಢಪಟ್ಟಲ್ಲಿ, ಸಂಬಂಧಪಟ್ಟ ಕುಟುಂಬಗಳಿಗೆ ಮಾಹಿತಿ ನೀಡಿ ಪಾರ್ಥಿವ ಶರೀರಗಳನ್ನು ಸ್ವದೇಶಕ್ಕೆ ತರಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ.

ನಾಪತ್ತೆಯಾಗಿರುವ ವ್ಯಕ್ತಿಗಳ ಗುರುತು ಪತ್ತೆ ಕಾರ್ಯದಲ್ಲಿ ನಿಖರತೆ ಕಾಯ್ದುಕೊಳ್ಳಲು ಅವರ ತಂದೆ, ತಾಯಿ, ಮಗ ಅಥವಾ ಮಗಳಿಂದ ಮಾತ್ರ ಡಿ.ಎನ್.ಎ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ. ಆಸ್ಪತ್ರೆಗೆ ಆಗಮಿಸುವ ಸಂಬಂಧಿಕರ ಗುರುತು ಹಾಗೂ ನಾಪತ್ತೆಯಾಗಿರುವ ವ್ಯಕ್ತಿಯೊಂದಿಗಿನ ಸಂಬಂಧವನ್ನು ಅಗತ್ಯ ದಾಖಲೆಗಳ ಮೂಲಕ ಪರಿಶೀಲಿಸಿದ ಬಳಿಕವೇ ರಕ್ತದ ಮಾದರಿ ಪಡೆಯಲಾಗುತ್ತಿದೆ ಎಂದು ಬೌರಿಂಗ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ

# ಕೆಪಿಎಸ್‌ಸಿ ನೇಮಕಾತಿ ಹಗರಣ: ಸಿಐಡಿ ಬೆನ್ನಲ್ಲೇ ಇ.ಡಿ. ತನಿಖೆಯೂ ಚುರುಕು

**ಬೆಂಗಳೂರು, ಸೆ.7:** ಕೆಪಿಎಸ್‌ಸಿ ಪಶುವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸಿಐಡಿ ತನಿಖೆ ಬೆನ್ನಲ್ಲೇ ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದೆ.

ಪ್ರಕರಣದ ಪ್ರಮುಖ ಆರೋಪಿಗಳಾದ ಗ್ಯಾನೇಂದ್ರ ಹಾಗೂ ಬಸವರಾಜ್ ಕನ್ನಾಳೆ ಸಿಐಡಿ ಕಸ್ಟಡಿ ಅವಧಿ ಮುಗಿಯುತ್ತಿದ್ದಂತೆಯೇ ಇ.ಡಿ ಅಧಿಕಾರಿಗಳು ವಿಚಾರಣೆ ನಡೆಸಲು ಸಿದ್ಧತೆ ನಡೆಸಿದ್ದಾರೆ.ಅಗತ್ಯವಿದ್ದಲ್ಲಿ ಆರೋಪಿಗಳನ್ನು ಬಾಡಿ ವಾರೆಂಟ್ ಮೂಲಕ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುವ ಸಾಧ್ಯತೆಯೂ ಇದೆ. ಒಂದು ವೇಳೆ ಆರೋಪಿಗಳಿಗೆ ಜಾಮೀನು ದೊರೆತರೆ, ಇ.ಡಿ ಅಧಿಕಾರಿಗಳು ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲು ಸಿದ್ಧತೆ ನಡೆಸಿದ್ದಾರೆ.

**ದಾಖಲೆಗಳ ಪರಿಶೀಲನೆ:** ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಈಗಾಗಲೇ ಹಲವು ಸಾಕ್ಷ್ಯಗಳು ಹಾಗೂ ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಆರೋಪಿಗಳ ಮನೆಗಳಲ್ಲಿ ನಡೆಸಿದ ಪರಿಶೀಲನೆ ವೇಳೆ ಪತ್ತೆಯಾದ ಹಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಲಾಗಿದೆ. ಈ ನಡುವೆ ಸಿಐಡಿ ಅಧಿಕಾರಿಗಳ ತನಿಖೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಅಂಶಗಳು ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ, ಸಿಐಡಿ ತನಿಖಾ ವರದಿ ಹಾಗೂ ಪ್ರಕರಣದ ಬೆಳವಣಿಗೆಗಳ ಬಗ್ಗೆಯೂ ಇ.ಡಿ ಮಾಹಿತಿ ಕಲೆಹಾಕುತ್ತಿದೆ. ಈಗಾಗಲೇ ಪ್ರಕರಣದ ಬೆಳವಣಿಗೆಗಳ ಕುರಿತು ಮಾಹಿತಿ ಪಡೆದಿರುವ ಇ.ಡಿ ತಂಡ, ಅಭ್ಯರ್ಥಿಗಳು ಹಾಗೂ ಸಾಕ್ಷಿಗಳನ್ನೂ ವಿಚಾರಣೆ ನಡೆಸಿದೆ. ಇದೀಗ ಪ್ರಕರಣದ ಆರೋಪಿಗಳನ್ನು ವಿಚಾರಣೆ ನಡೆಸಲು ಸಿದ್ಧತೆ ನಡೆಸುತ್ತಿದೆ.

**ಅಕ್ರಮ ಹಣ ವರ್ಗಾವಣೆ ಬಗ್ಗೆಯೂ ತನಿಖೆ:** ಪ್ರಕರಣದಲ್ಲಿ ಅಕ್ರಮವಾಗಿ ಹಣ ಗಳಿಕೆ ಹಾಗೂ ಹಣ ವರ್ಗಾವಣೆ ನಡೆದಿರುವ ಸಾಧ್ಯತೆಗಳ ಕುರಿತು ಇ.ಡಿ ತನಿಖೆ ನಡೆಸುತ್ತಿದೆ. ಸಿಐಡಿ ತನಿಖೆಯಲ್ಲೂ ಅಕ್ರಮ ಹಣ ಗಳಿಕೆ ಮತ್ತು ವರ್ಗಾವಣೆಗೆ ಸಂಬಂಧಿಸಿದ ಅಂಶಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ, ಆ ದಾಖಲೆಗಳನ್ನೂ ಇ.ಡಿ ಪಡೆದುಕೊಳ್ಳುವ ಸಾಧ್ಯತೆಯಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ಯಾನೇಂದ್ರ, ಬಸವರಾಜ್ ಕನ್ನಾಳೆ, ಶಿವಶಂಕರಪ್ಪ ಹಾಗೂ ಶಾಂತ ಹೊಸಮನಿ ಸೇರಿದಂತೆ ಆರೋಪಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಇ.ಡಿ ವಶಕ್ಕೆ ಪಡೆದಿದೆ . ಆರೋಪಿಗಳ ವಿರುದ್ಧ ಪ್ರಮುಖ ಸಾಕ್ಷ್ಯಗಳನ್ನು ಕಲೆಹಾಕಿರುವ ಇ.ಡಿ, ಹಣದ ಮೂಲ, ವರ್ಗಾವಣೆ ಹಾಗೂ ಪ್ರಕರಣದ ಹಿಂದೆ ಯಾರ ಪಾತ್ರವಿದೆ ಎಂಬುದರ ಕುರಿತು ತನಿಖೆಯನ್ನು ಮುಂದುವರಿಸಿದೆ. ಹೀಗಾಗಿ ಸಿಐಡಿ ಕಸ್ಟಡಿ ಮತ್ತು ಜಾಮೀನು ಪ್ರಕ್ರಿಯೆಯ ಬಳಿಕವೂ ಆರೋಪಿಗಳಿಗೆ ಇ.ಡಿ ವಿಚಾರಣೆಯ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ.

# ಪರಪ್ಪನ ಅಗ್ರಹಾರ ಜೈಲು ಹಲ್ಲೆ ಪ್ರಕರಣ, ಕೆಪಿಎಸ್ಸಿ ಹಗರಣ: ಸೂಕ್ತ ತನಿಖೆ, ಅಪರಾಧಿಗಳನ್ನು ಬಿಡುವುದಿಲ್ಲ- ಸಚಿವ ಪ್ರಿಯಾಂಕ್ ಖರ್ಗೆ



**ಕಲಬುರಗಿ, ಸೆ.7:** ರಾಜ್ಯದ ಪರಪ್ಪನ ಅಗ್ರಹಾರ ಜೈಲಿನಲ್ಲಿ ನಡೆದ ಸಿಬ್ಬಂದಿ ಮೇಲಿನ ಹಲ್ಲೆ ಪ್ರಕರಣ ಹಾಗೂ ಕೆಪಿಎಸ್‌ಸಿ ಹಗರಣಕ್ಕೆ ಸಂಬಂಧಿಸಿದಂತೆ ಯಾವ ಅಪರಾಧಿಗಳನ್ನೂ ಸುಮ್ಮನೆ ಬಿಡುವದಿಲ್ಲ ಎಂದು ಗೃಹ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕಾರಾಗೃಹಗಳಲ್ಲಿ ಕೈದಿಗಳ ದುಶ್ಚಟಗಳ ನಿಯಂತ್ರಣ ಹಾಗೂ ನೂತನ ಜೈಲುಗಳ ನಿರ್ಮಾಣದ ಕುರಿತು ಮದ್ಯಮಗಳೊಂದಿಗೆ ಮಾತನಾಡಿದ ಅವರು, ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೆಲ ಕೈದಿಗಳು ಹೆಚ್ಚು ದುಶ್ಚಟವುಳ್ಳವರಾಗಿರುತ್ತಾರೆ. ಜೈಲಿನಲ್ಲಿ ಅವರಿಗೆ ಗುಟ್ಕಾ, ತಂಬಾಕು ಹಾಗೂ ಗಾಂಜಾ ಸಿಗದಿದ್ದಾಗ ಈ ರೀತಿ ವರ್ತನೆ ತೋರುತ್ತಾರೆ. ಇದಕ್ಕಾಗಿ ಕಾಲಕಾಲಕ್ಕೆ ಅಂತಹ ಕೈದಿಗಳಿಗೆ ಕೌನ್ಸಿಲಿಂಗ್ ನಡೆಸಲಾಗುತ್ತಿದ್ದು, ಹಿತೇಂದ್ರ ವರದಿ ಅನುಸಾರ ಕೈದಿಗಳ ಮಾನಸಿಕ ಸ್ಥಿತಿಗತಿ ಬಗ್ಗೆ ನಿಗಾ ವಹಿಸಲಾಗುತ್ತಿದೆ. ಜೈಲಿನ ಗೋಡೆ ಎತ್ತರ ಮಾಡುವುದು ಹಾಗೂ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿ ದೆ. ಆದರೆ ಯಾವ ಕಾರಣಕ್ಕೆ ಸಿಬ್ಬಂದಿಗ: ಮೇಲೆ ಹಲ್ಲೆ ನಡೆಸಲಾಗಿದೆ ಎಂಬುದರ ಕುರಿತು ಸಮಗ್ರ ತನಿಖೆ ನಡೆಸಲಾಗುವುದು ಎಂದರು.

ಜೈಲಿನಲ್ಲಿ ಕೈದಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ನಾಲ್ಕೈದು ಹೊಸ ಕಾರಾಗೃಹಗಳು ನಿರ್ಮಾಣ ಹಂತದಲ್ಲಿವೆ ಎಂದು ತಿಳಿಸಿದ ಅವರು, ಹೊಸ ಕಾರಾಗೃಹಗಳಿಗೆ ಕೈದಿಗಳನ್ನು ಸ್ಥಳಾಂತರ ಮಾಡಿದಾಗ ಇಂತಹ ಘಟನೆಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

'ಮನ್ ಕೀ ಬಾತ್' ನಲ್ಲಿ ಪ್ರಸ್ತಾವಿತ ಬೆಂಗಳೂರಿನ ಮಹಿಳೆಯ ಇಡ್ಲಿ ಬದುಕು ಕಟ್ಟಿಕೊಂಡ ಮಹಿಳೆಯ ಬಂಡಿ ಸ್ಥಳಾಂತರ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಪ್ರಧಾನಿ ಮೋದಿ ಅವರು ಮನ್ ಕೀ ಬಾತ್‌ನಲ್ಲಿ ಮಾತನಾಡಿದ ತಕ್ಷಣ ಕಾನೂನನ್ನು ಬದಲಾಯಿಸಲು ಬರುವುದಿಲ್ಲ. ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಿಂದ ಗೂಡಂಗಡಿ ಹಾಗೂ ಬೀದಿಬದಿ ವ್ಯಾಪಾರಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಸ್ಥಳಾಂತರ ಮಾಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಕೆಪಿಎಸ್‌ಸಿ ಹಗರಣದಲ್ಲಿ ಪ್ರಿಯಾಂಕ್ ಖರ್ಗೆ ಜೈಲಿಗೆ ಹೋಗಲಿದ್ದಾರೆ ಎಂಬ ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿಕೆಗೆ ತಿರುಗೇಟು ನೀಡಿದ ಪ್ರಿಯಾಂಕ್ ಖರ್ಗೆ, ಮೊದಲು ರಾಮುಲು ಅವರಿಗೆ ಕೆಪಿಎಸ್‌ಸಿ ಫುಲ್ಫಾರ್ಮ್ ಏನು ಅಂತ ಹೇಳಲು ಕೇಳಿ ಎಂದು ಸವಾಲು ಹಾಕಿದರು. ನಾನು ಒಂದೇ ಕ್ಷೇತ್ರದಲ್ಲಿ ನಾಲ್ಕು ಸಲ ಹಾಗೂ ಮಲ್ಲಿಕಾರ್ಜುನ ಖರ್ಗೆಯವರು ಒಂದೇ ಕ್ಷೇತ್ರದಲ್ಲಿ ಒಂಭತ್ತು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದೇವೆ. ಆದರೆ ರಾಮುಲು ಅವರು ಜನರಿಂದ ತಿರಸ್ಕಾರಕ್ಕೆ ಒಳಗಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದಾರೆ. ರಾಮುಲುಗೆ ಮೊದಲು ಸರಿಯಾಗಿ ಕನ್ನಡ ಮಾತನಾಡಲು ಹೇಳಿ ಎಂದು ವಾಗ್ದಾಳಿ ನಡೆಸಿದರು.

ನಾನು ಗೃಹ ಮಂತ್ರಿಯಾಗಿರುವವರೆಗೆ ಕೆಪಿಎಸ್‌ಸಿ ಹಗರಣದ ತನಿಖೆ ಯಾವುದೇ ಕಾರಣಕ್ಕೂ ಡೈವರ್ಟ್ ಆಗಲು ಬಿಡುವುದಿಲ್ಲ. ಈ ಪ್ರಕರಣದಲ್ಲಿ ಬಲವಾದ ಸಾಕ್ಷ್ಯಗಳಿವೆ. ಯುವಕರ ಭವಿಷ್ಯದ ಜೊತೆ ಚೆಲ್ಲಾಟವಾಡಲು ಬಿಡುವುದಿಲ್ಲ. ಫಾಸ್ಟ್ ಟ್ರ್ಯಾಕ್ ಕೋರ್ಟ್ ಸ್ಥಾಪನೆ ಬಗ್ಗೆಯೂ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ, ಕುಮಾರಸ್ವಾಮಿ ಅವರ ಹತ್ತು ಪ್ರಶ್ನೆಗೆ ನನ್ನದು ಒಂದೇ ಪ್ರಶ್ನೆ. ಕೆಪಿಎಸ್‌ಸಿ ಹುದ್ದೆ ರದ್ದು ಮಾಡುವ ಅಧಿಕಾರ ಯಾರಿಗಿದೆ ಎನ್ನುವುದನ್ನು ಅವರು ಹೇಳಲಿ. ನಮ್ಮ ಕೈಯಲ್ಲಿ ಆ ಅಧಿಕಾರ ಇರುವುದಿಲ್ಲ. ಕೆಪಿಎಸ್ಸಿಯಲ್ಲಿ ಈ ಹಿಂದೆ ಅಕ್ರಮ ಎಸಗಿದ ಆರೋಪಿಗಳ ಮೇಲೆ ಕಣ್ಣಿಟ್ಟಿದ್ದೇವೆ. ಕಳೆದ ಹಲವು ವರ್ಷಗಳಿಂದ ಈ ಅಕ್ರಮಗಳು ನಡೆಯುತ್ತಿದ್ದು, ನಾವು ಈ ಬಾರಿ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ ಎಂದರು.

**ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಸಚಿವರು, ಬರ ಪರಿಹಾರ ಹಾಗೂ ಸಾಲ ಮನ್ನಾ ವಿಚಾರವಾಗಿ ವಾಗ್ದಾಳಿ ನಡೆಸಿದರು. ಬರ ಘೋಷಣೆ ಮಾಡಬೇಕಾಗಿರುವುದು ಕೇಂದ್ರ ಸರ್ಕಾರದ ಮಾನದಂಡದ ಪ್ರಕಾರ. ಅದನ್ನು ಬಿಟ್ಟು ಕಲಬುರಗಿಯಲ್ಲಿ ಬಿಜೆಪಿಯವರು ಪ್ರತಿಭಟನೆ ಹೆಸರಲ್ಲಿ ಗುಂಡಾಗಿರಿ ಮಾಡುತ್ತಿದ್ದಾರೆ. ತಾಕತ್ತಿದ್ದರೆ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲಿ. ಒಬ್ಬ ಉದ್ಯಮಿಯ 22 ಸಾವಿರ ಕೋಟಿ ರೂ. ಸಾಲವನ್ನು 6 ಕೋಟಿಗೆ ಚುಕ್ತಾ ಮಾಡುತ್ತೀರಿ, ಆದರೆ ರೈತರಿಗೆ ಪರಿಹಾರ ಕೊಡಲು ಮಾತ್ರ ಹಿಂಜರಿಯುತ್ತೀರಿ ಎಂದು ಕೇಂದ್ರ ಸರ್ಕಾರದ ಧೋರಣೆಯನ್ನು ತೀವ್ರವಾಗಿ ಟೀಕಿಸಿದರು.**

# ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಸಿಎಂ ಭಾಗಿ- ಯಶಸ್ಸಿಗೆ ಶ್ರಮಿಸಬೇಕು

## ಸೆ.17ರ ಉತ್ಸವದ ಪೂರ್ವಭಾವಿ ಸಭೆಯಲ್ಲಿ ಕಾರ್ಯದರ್ಶಿ ನಲಿನ್ ಅತುಲ್ ಹೇಳಿಕೆ



**ಕಲಬುರಗಿಯ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸಭಾಂಗಣದಲ್ಲಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್ ಅವರ ಅಧ್ಯಕ್ಷತೆಯಲ್ಲಿ ಸೆ.17ರಂದು ನಡೆಯುವ ಕಲ್ಯಾಣ ಕರ್ನಾಟಕ ಉತ್ಸವದ ಪೂರ್ವಭಾವಿ ಸಿದ್ಧತಾ ಸಭೆ ಜರುಗಿತು. ಜಿಲ್ಲಾಧಿಕಾರಿ ಇಕ್ರಂ ಶರೀಫ್, ಜಿಲ್ಲಾ ಪೊಲೀಸ್ ವರಿಷ್ಠ ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ಎಸ್ ಸಂಕನೂರ್, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಕೆಕೆಆರ್‌ಟ ಇಸಿ ಎಂಸಿ ಡಾ.ಸುಶೀಲಾ ಅವರಿದ್ದರು.**

ಕಲಬುರಗಿ, ಸೆ. 7: ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಭಾಗವಹಿಸಲು ಹಾಗೂ ಕಾರ್ಯಕ್ರಮಕ್ಕೆ ಚಾಲನೆ ನೀಡಲು ರಾಜ್ಯದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇದೇ ಸೆಪ್ಟೆಂಬರ್.16 ಮತ್ತು 17 ರಂದು ಎರಡು ದಿನಗಳ ಕಾಲ ಕಲಬುರಗಿಗೆ ಆಗಮಿಸಲಿದ್ದು, ಅಧಿಕಾರಿಗಳು ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಬೇಕು ಎಂದು ಕೆ.ಕೆ.ಆರ್.ಡಿ.ಬಿ ಮಂಡಳಿ ಕಾರ್ಯದರ್ಶಿ ನಲಿನ್ ಅತುಲ್ ಅವರು ಹೇಳಿದರು.

ನಗರದ ಕೆ.ಕೆ.ಆರ್.ಡಿ.ಬಿ. ಸಭಾಂಗಣದಲ್ಲಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದು ನಡೆಯುವ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಬೇಕು. ಗಣ್ಯರ ಭದ್ರತೆಗೆ ಅಗತ್ಯ ಪೊಲೀಸ್ ಬಂದೋಬಸ್ತ್ ಒದಗಿಸಬೇಕು ಎಂದರು.

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲು ಹಾಗೂ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲಾಡಳಿತದ ನಿರ್ದೇಶನದಂತೆ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯನ್ನು ಕೈಗೊಂಡ ಕ್ರಮವನ್ನು ಸ್ವಯಂ ಪ್ರೇರಿತವಾಗಿ ನಿರ್ವಹಿಸುವಂತೆ ಸೂಚಿಸಿದರು.


ಸೆಪ್ಟೆಂಬರ್ 17ರ ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದಲ್ಲಿ ಮಂಡಳಿಯ ವಿವಿಧ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಕೆ.ಕೆ.ಆರ್.ಡಿ.ಬಿ. ನೆರವಿನ ಅಕ್ಷರ ಆವಿಷ್ಕಾರ, ಆರೋಗ್ಯ ಆವಿಷ್ಕಾರ, ಉದ್ಯೋಗ ಅವಿಷ್ಕಾರ ಹಾಗೂ ಅರಣ್ಯ ಆವಿಷ್ಕಾರ, ಹೀಗೆ ಸುಮಾರು 11 ವಿಷಯಗಳ ಮೇಲೆ ವಿವಿಧ ಇಲಾಖೆಗಳು ಸ್ಥಬ್ದಚಿತ್ರಗಳು ಪ್ರದರ್ಶಿಸಬೇಕು. ಇದಲ್ಲದೆ ವಿವಿಧ ಸರ್ಕಾರಿ ಸೌಲಭ್ಯ ವಿತರಿಸುವ ಕಾರ್ಯಕ್ರಮ ಸಹ ಆಯೋಜಿಸಬೇಕೆಂದು ನಲಿನ್ ಅತುಲ್ ಅಧಿಕಾರಿಗಳಿಗೆ ನಿರ್ದೇಶನ ಎಂದರು.

ಅಪ್ಪನ ಕೆರೆಯ ಪಕ್ಕದಲ್ಲಿ ಗಣಪತಿ ಕೆರೆ, ಕೋಟೆ ಹಾಗೂ ಜಾತ್ರಾ ಮೈದಾನದಲ್ಲಿ ಸ್ತಬ್ಧ ಚಿತ್ರಗಳು ಪ್ರದರ್ಶನ ಮಾಡಬೇಕು. ಕಲೆ ಸಾಹಿತ್ಯ ಕ್ರೀಡೆ,ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ರಾಜ್ಯ ಪ್ರಶಸ್ತಿ, ರಾಷ್ಟ್ರಪತಿ ವಿಜೇತರಿಗೆ ಸನ್ಮಾನಿಸಲು ಕನ್ನಡ ಮತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಿಗೆ ಜಗದೀಶ್ವರಿ ನಾಶಿ ಅವರಿಗೆ ಪಟ್ಟಿಯನ್ನು ಮಾಡಿ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಮಾಹಿತಿ ಮಳಿಗೆ: ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಐತಿಹಾಸಿಕ, ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಪ್ರವಾಸಿ ತಾಣಗಳನ್ನು ಬಿಂಬಿಸುವ ಎರಡು ದಿನಗಳ ಕಾಲ ಮಾಹಿತಿ ನೀಡುವ ಡಿಜಿಟಲ್ ಮಾಹಿತಿ ಮಳಿಗೆ ಮತ್ತು ವಸ್ತು ಪ್ರದರ್ಶನ ಮಳಿಗೆ ಪ್ರವಾಸೋದ್ಯಮ ಇಲಾಖೆಯಿಂದ ಆಯೋಜಿಸಬೇಕು. ಪ್ರತ್ಯೇಕವಾಗಿ ಜಿಲ್ಲಾವಾರು ಮಳಿಗೆ ಸ್ಥಾಪಿಸುವುದರ ಜೊತೆಗೆ ಅದರ ಮಾಹಿತಿ ನೀಡುವ ಧ್ವನಿವರ್ಧಕ ವ್ಯವಸ್ಥೆ ಸಹ ಏರ್ಪಾಡು ಮಾಡಬೇಕು ಎಂದರು.

ಸಭೆಯಲ್ಲಿ ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಜಿಲ್ಲಾಧಿಕಾರಿ ಇಕ್ರಂ ಶರೀಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಎಸ್ ಸಂಕನೂರ್, ಮಹಾನಗರ ಪಾಲಿಕೆ ಆಯುಕ್ತರಾದ ಅವಿನಾಶ್ ಶಿಂಧೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶಿಷ್‌ರೆಡ್ಡಿ, ಡಿ.ಸಿ.ಪಿ ಶಾಲು, ಎ.ಸಿ.ಪಿ. ಪ್ರವೀಣ ನಾಯಕ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸಮದ್ ಪಟೇಲ್, ಕೆ.ಕೆ.ಆರ್.ಡಿ.ಬಿ. ಅಧೀನ ಕಾರ್ಯದರ್ಶಿ ಶಿವಪುತ್ರಪ್ಪ ಕಂಟಿ, ಆಪ್ತಕಾರ್ಯದರ್ಶಿ ಶರದಾ ಬಿರಾದರ್, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಬೇಬಿ ಮುಗೇರಾ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಶಂಕ್ರಮ್ಮ ಡವಳಗಿ ಸೇರಿದಂತೆ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳಿದ್ದರು.

# ಕಾರಾಗೃಹದಲ್ಲಿ ಕೈದಿಗಳಿಗೆ ರಾಜಾತಿಥ್ಯ ಮುಖ್ಯ ಅಧೀಕ್ಷಕಿ ಅಮಾನತು



**ಕಲಬುರಗಿ, ಸೆ.7:** ನಗರದ ಹೊರವಲಯದಲ್ಲಿರುವ ಕೇಂದ್ರ ಕಾರಾಗೃಹದಲ್ಲಿ ಕರ್ತವ್ಯಲೋಪ ಎಸಗಿದ ಆರೋಪದ ಹಿನ್ನೆಲೆ ಮುಖ್ಯ ಅಧೀಕ್ಷಕಿ ಡಾ. ಅನಿತಾ ಆರ್. ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಕಾರಾಗೃಹ ಮತ್ತು ಸುಧಾರಣೆ ಇಲಾಖೆಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಕೈದಿಗಳು ರಾಜಾರೋಷವಾಗಿ ಮೊಬೈಲ್ ಬಳಕೆ ಮಾಡುವುದು, ಮದ್ಯ ಮತ್ತು ಸಿಗರೇಟ್ ಸೇವನೆ ಸೇರಿದಂತೆ ಯಾವುದೇ ಅಡೆತಡೆಯಿಲ್ಲದೆ ಕುಣಿದು ಕುಪ್ಪಳಿಸುತ್ತ ಐಷಾರಾಮಿ ಜೀವನ ನಡೆಸುತ್ತಿರುವ ದೃಶ್ಯಗಳು ಕಳೆದ ತಿಂಗಳು ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲ ತಾಣಗಳಲ್ಲಿ ಪ್ರಸಾರವಾಗಿದ್ದವು.

ಅನಂತರ ಕಾರಾಗೃಹ ಮತ್ತು ಸುಧಾರಣೆ ಇಲಾಖೆ ಪೊಲೀಸ್ ಮಹಾನಿರ್ದೇಶಕ ಅಲೋಕ್‌ಕುಮಾರ ಅವರು ಎರಡು ಬಾರಿ ನಗರದ ಕೇಂದ್ರ ಕಾರಾಗೃಹಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿ ವಿಚಾರಣೆ ನಡೆಸಿದ ನಂತರ ಈ ಪ್ರಕರಣದಲ್ಲಿ ಜೈಲು ಮುಖ್ಯ ಅಧೀಕ್ಷಕಿಯ ಕರ್ತವ್ಯಲೋಪ ಕಂಡುಬಂದ ಹಿನ್ನೆಲೆ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಗೊಳಿಸಲಾಗಿದೆ.

ಅಲ್ಲದೆ ಅವರ ಹುದ್ದೆಯ ಹಕ್ಕನ್ನು ವಿಜಯಪುರ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದ್ದು, ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಕೇಂದ್ರ ಸ್ಥಾನ ಬಿಟ್ಟು ತೆರಳಬಾರದು ಎಂದು ಆದೇಶದಲ್ಲಿ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

# ಖೋಟಾನೋಟು ಜಾಲ ಪತ್ತೆ!




ಕಲಬುರಗಿ, ಸೆ.7: ನಗರದಲ್ಲಿ ಒಂದು ಕಡೆ ರೌಡಿಶೀಟರ್‌ಗಳಿಂದಲೇ ಹಾಡುಹಗಲೇ ಸಾರ್ವಜನಿಕರಿಂದ ಮತ್ತು ವ್ಯಾಪಾರಿಗಳಿಂದ ಹಣ ವಸೂಲಿ ಮಾಡುವ ಲಂಚಬಾಕ ಪೊಲೀಸರು, ಇನ್ನೊಂದೆಡೆ ದಿನೇ ದಿನೆ ಹೆಚ್ಚುತ್ತಿರುವ ಕ್ರಿಮಿನಲ್‌ಗಳ ಬೀದಿ ಕಾಳಗ, ತಲವಾರು ಮುಂತಾದ ಮಾರಕಾಸ್ತ್ರಗಳನ್ನು ಝಳಪಿಸುವ ಮೂಲಕ ಜನರಿಗೆ ಉಪಟಳ ಇವೆಲ್ಲವುಗಳ ನೀಡುವುದರ ನಡುವೆ ಇದೀಗ ಖೋಟಾ ನೋಟು ಜಾಲ ಪತ್ತೆಯಾಗಿದೆ.

ಗೃಹ ಸಚಿವರ ತವರು ಜಿಲ್ಲೆಯಲ್ಲೇ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆಯಾ? ಖೋಟಾ ನೋಟುಗಳ ಚಲಾವಣೆಗೆ ಗೃಹ ಸಚಿವರ ಜಿಲ್ಲೆಯಲ್ಲಿ ನಡೆಯುವುದು ಹೇಗೆ ಸಾಧ್ಯ? ಇಲ್ಲೇ ಪ್ರಿಂಟ್ ಮಾಡುತ್ತೋರೋ ಹೇಗೆ? ಇದರ ಹಿಂದೆ ಯಾರಿದ್ದಾರೆ ಎಂಬ ಅನುಮಾನ ಮೂಡಿಸಿದೆ.

ಕಲಬುರಗಿ ಜಿಲ್ಲೆಯಲ್ಲಿ ಖೋಟಾ ನೋಟು ತಯಾರಿಸಿ ಮಾರುತ್ತಿದ್ದ ಜಾಲವನ್ನು ವಿಶ್ವವಿದ್ಯಾಲಯ ಪೊಲೀಸರು ಪತ್ತೆಹಚ್ಚಿದ್ದಾರೆ. ಖಚಿತ ಮಾಹಿತಿ ಆಧಾರದ ಕಾರ್ಯಾಚರಣೆಗಿಳಿದ ಪೊಲೀಸರು, ಕಲಬುರಗಿಯ ರಾಜರಾಜೇಶ್ವರಿ ನಗರದಲ್ಲಿ ಆರೋಪಿಗಳು ವಾಸವಿದ್ದ ಬಾಡಿಗೆ ಮನೆ ಮೇಲೆ ದಾಳಿ ನಡೆಸಿ ಇಬ್ಬರು ಖದೀಮರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

**ಪೊಲೀಸರು ದಾಳಿ ನಡೆಸಿದ ವೇಳೆ ಮನೆಯಲ್ಲಿ 500 ರೂ ಮುಖಬೆಲೆಯ 28 ನೋಟು ಒಟ್ಟು 14 ಸಾವಿರ ಮೌಲ್ಯದ ಖೋಟಾ ನೋಟು ಜಪ್ತಿ ಮಾಡಲಾಗಿದೆ. ದಶರಥ್ ರಾಠೋಡ್, ಸಿದ್ರಾಮ್ ಬಂಧಿತ ಆರೋಪಿಗಳಾಗಿದ್ದು, ಇನ್ನೋರ್ವ ಆರೋಪಿ ಅಶ್ವಿನ್ ಕುಮಾರ್ ಪೊಲೀಸರ ದಾಳಿ ವೇಳೆ ಪರಾರಿಯಾಗಿದ್ದಾನೆ.**

ಮೈತುಂಬಾ ಸಾಲ ಮಾಡಿಕೊಂಡಿರುವ ಖದೀಮರು, ಸಾಲ ತೀರಿಸಲು ಖೋಟಾ ನೋಟು ತಯಾರಿಸಿ ಚಲಾವಣೆಗೆ ತರುವ ಸ್ಕೆಚ್ ಹಾಕಿದ್ದಾರೆನ್ನಲಾಗಿದ್ದು, ಕಳೆದ ಮಾರ್ಚ್‌ನಲ್ಲೇ ಖೋಟಾನೋಟು ಮುದ್ರಿಸುವ ಕಲರ್ ಪ್ರಿಂಟ್ ಮಷಿನ್ ಖರೀದಿಸಿ ತಂದಿದ್ದ ಆರೋಪಿಗಳು ಆದರೆ ಕೆಲಸ ಪರ್ಫೆಕ್ಟ್ ಆಗದ ಕಾರಣ ಮುದ್ರಿಸಿದ ನೋಟುಗಳು ಚಲಾವಣೆ ಮಾಡಲು ವಿಫಲರಾಗಿದ್ದರು. ಮನೆಯಲ್ಲೇ ಇಟ್ಟುಕೊಂಡರೆ ಅಪಾಯ ಎಂದರಿತ ಕಿಡಿಗೇಡಿಗಳು ಮೊದಲಿಗೆ ಪ್ರಿಂಟ್ ಮಾಡಿದ್ದ ಖೋಟಾ ನೋಟುಗಳನ್ನ ಸುಟ್ಟುಹಾಕಿದ್ದಾರೆಂದು ಹೇಳಲಾಗಿದೆ.

ಬಾಡಿಗೆ ಮನೆಯಲ್ಲಿದ್ದುಕೊಂಡು ಕಲರ್ ಪ್ರಿಂಟರ್ ಮಷಿನ್‌ನಿಂದ ಖೋಟಾ ನೋಟು ತಯಾರಿಸಿ ಒಂದು ಲಕ್ಷಕ್ಕೆ ಎರಡು ಲಕ್ಷ ಕೊಡುವ ಆಫರ್ ಕೊಟ್ಟಿದ್ದ ಕಿಡಿಗೇಡಿಗಳು, ಕೆಲವು ವ್ಯಕ್ತಿಗಳಿಗೆ ಒಂದು ಲಕ್ಷ ಕೊಟ್ಟರೆ ಎರಡು ಲಕ್ಷ ವಾಪಸ್ ಕೊಡುವುದಾಗಿ ಆಫರ್ ತೋರಿಸಿದ್ದ ಖದೀಮರು ಅವರಿಗೆ ನೋಟುಗಳನ್ನು ನೀಡಿದ್ದರು. ಖೋಟಾನೋಟು ಚಲಾವಣೆಗೆ ತರಲು ಸಂಚು ರೂಪಿಸಿದ್ದಾಗಲೇ ಈ ವಿಚಾರ ಪೊಲೀಸರ ಗಮನಕ್ಕೆ ಬಂದಿದೆ. ತಡಮಾಡದೇ ಎಚ್ಚೆತ್ತ ವಿಶ್ವವಿದ್ಯಾಲಯ ಪೊಲೀಸರು ಖಚಿತ ಮಾಹಿತಿ ಆಧಾರಿಸಿ ಆರೋಪಿಗಳಿದ್ದ ಬಾಡಿಗೆ ಮನೆ ಮೇಲೆ ದಾಳಿನಡೆಸಿ ಖದೀಮರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ, ಸದ್ಯ ಓರ್ವ ತಪ್ಪಿಸಿಕೊಂಡಿದ್ದು ಬಂಧಿಸಲು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಪ್ರಕರಣ ಸಂಬಂಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬರಗಾಲ ಘೋಷಣೆ ಹೋರಾಟ 6 ನೇ ದಿನವೂ ಮುಂದುವರಿಕೆ



**ವಿಜಯಪುರ, ಸೆ.7:** ಜಿಲ್ಲೆಯಲ್ಲಿ 2026–27ನೇ ಸಾಲಿನಲ್ಲಿ ಮಳೆ ಸಂಪೂರ್ಣ ಕೈಕೊಟ್ಟಿರುವುದನ್ನು ತಿಳಿದಿದ್ದರು ಕೇವಲ 3 ತಾಲೂಕುಗಳನ್ನು ಪೂರ್ಣ ಬರಗಾಲ ಹಾಗೂ ಇನ್ನು 3 ತಾಲೂಕುಗಳು ಮಧ್ಯಮ ಬರಗಾಲವೆಂದು ಪರಿಗಣಿಸಿ ಉಳಿದ 7 ತಾಲೂಕುಗಳನ್ನು ಕೈ ಬಿಡಲಾಗಿದ್ದು ಕೂಡಲೇ ಜಿಲ್ಲೆಯ 13 ತಾಲೂಕುಗಳನ್ನು ಬರಗಾಲ ಎಂದು ಘೋಷಣೆ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನಡೆಯುತ್ತಿರುವ ಹೋರಾಟ 6 ದಿನಕ್ಕೆ ಪಾದಾರ್ಪಣೆ ಮಾಡಿತು

ಈ ವೇಳೆ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಾಮನಗೌಡ ಪಾಟೀಲ, ಜಿಲ್ಲಾ ಉಪಾಧ್ಯಕ್ಷರಾದ ಮಹಾದೇವ ಬನಸೋಡೆ, ತಾ ಅಧ್ಯಕ್ಷರಾದ ಅನಮೇಶ ಜಮಖಂಡಿ, ಭೀಮು ಹೊನವಾಡ, ಅಮರೇಶ ಭೈರಗೊಂಡ, ಶಿವರಾಜ ಮೆಂಡೇಗಾರ, ಶೌಕತಲಿ ನದಾಪ, ಮುತ್ತು ಹಿರೇಗೋಳ, ಸಂತೋಷ ಬಿರಾದಾರ, ರಾಮನಗೌಡ ಪಾಟೀಲ ಗುಣಕಿ, ಗುರುಲಿಂಗಪ್ಪಗೌಡ ಬಿರಾದಾರ, ಸಿದ್ದಣ್ಣ ಬಾಳಿಗೇರಿ, ಅಶೋಕ ಜಂಬಗಿ ಯಲ್ಲಾಲಿಂಗ ಮಣ್ಣಾಗೋಳ ಸೇರಿದಂತೆ ಇತರರು ಇದ್ದರು.

# ನಟ ರಮೇಶ್ ಅರವಿಂದ್‌ಗೆ ಅಭಿಮಾನಿಗಳಿಂದ ಸನ್ಮಾನ




**ಖ್ಯಾತ ನಟ ಅರವಿಂದ್ ರಮೇಶ್ ಕಲಬುರಗಿಗೆ ಭೇಟಿನೀಡದ ಸಂದರ್ಭದಲ್ಲಿ ಉದ್ಯಮಿಗಳು ಹಾಗೂ ಅಭಿಮಾನಿಗಳು ಹಾರ್ದಿಕವಾಗಿ ಸ್ವಾಗತಿಸಿ ಸನ್ಮಾನಿಸಿದರು. ಹೋಟೆಲ್ ಬೃಂದಾವನ ಗ್ರ್ಯಾಂಡ್‌ನಲ್ಲಿ ಉದ್ಯಮಿಗಳಾದ ವೆಂಕಟೇಶ ಕಡೇಚೂರ್ ಶಾಲು ಹೊದಿಸಿ ಹಾಗೂ ಕೃತಿ ನೀಡಿ ಸನ್ಮಾನಿಸಿದರು. ಉಪನ್ಯಾಸಕರಾದ ಕರುಣೇಶ್, ಡಾ. ರಾಜೇಶ್ ಕಡೇಚೂರ್, ಚನ್ನಬಸವ ತೊರವಿ, ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ ಡಾ. ಸದಾನಂದ ಪೆರ್ಲ, ಓಂ ಚೇಂಗಳಿ ಮತ್ತಿತರರು ಹಾಜರಿದ್ದರು.**

# ಕಾಂಗ್ರೆಸ್ ಪಶ್ಚಾತ್ತಾಪ ಪಡುವಂತೆ ಮಾಡುವ ಪಾದಯಾತ್ರೆ: ಅರುಣಾ ಜನಾರ್ದನ ರೆಡ್ಡಿ



**ಬಳ್ಳಾರಿ, ಸೆ 07.** ಕಾಂಗ್ರೆಸ್ಸಿಗರನ್ನು ಪಶ್ಚಾತ್ತಾಪ ಪಡುವಂತೆ ಮಾಡುವ ಪಾದಯಾತ್ರೆ ಇದು ಎಂದು ಅರುಣಾ ಜನಾರ್ದನ ರೆಡ್ಡಿ ಬಣ್ಣಿಸಿದ್ದಾರೆ.

ಬಿಜೆಪಿಯ ಬಳ್ಳಾರಿ ಪಾದಯಾತ್ರೆಯಲ್ಲಿ ಕಂಪ್ಲಿ ನಗರದ ಅಂಬೇಡ್ಕರ್ ವೃತ್ತದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿ ಪಾದಯಾತ್ರೆಯನ್ನು ಕಾಂಗ್ರೆಸ್ ನವರು ಪಶ್ಚಾತ್ತಾಪದ ಪಾದಯಾತ್ರೆ ಎಂದು ಬಣ್ಣಿಸುತ್ತಿದ್ದರು. ಆದರೆ ಪಾದಯಾತ್ರೆಗೆ ಭಾರೀ ಜನಬೆಂಬಲ ವ್ಯಕ್ತವಾಗುತ್ತಿರುವುದನ್ನು ನೋಡಿದರೆ, ಮುಂದಿನದಿನಗಳಲ್ಲಿ ಕಾಂಗ್ರೆಸ್ ನವರು ಪಶ್ಚಾತ್ತಾಪ ಪಡುವಂತೆ ಮಾಡುವ ಪಾದಯಾತ್ರೆ ಇದು ಎಂದು ಅನಿಸುತ್ತಿದೆ ಎಂದರು.

ಜನಾರ್ದನ ರೆಡ್ಡಿ ಅವರು ಬಳ್ಳಾರಿ ಉಸ್ತುವಾರಿ ಸಚಿವರಾಗಿದ್ದಾಗ ಹಾಗೂ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅಭಿವೃದ್ಧಿಯ ರುಚಿ ತೋರಿಸಿದ್ದರು. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಜನ ಬಿಜೆಪಿಯನ್ನು ಗೆಲ್ಲಿಸಬೇಕು ಎಂದು ಜನರಲ್ಲಿ ಮನವಿ ಮಾಡಿದರು.

# ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರತ್ಯೇಕ ಅಪಘಾತ: 7 ಮಂದಿ ಸಾವು

ಕೋಲಾರ, ಚಿಕ್ಕಬಳ್ಳಾಪುರ, ಸೆ.7: ರಾಜ್ಯದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸಂಭವಿಸಿದ ಎರಡು ಭೀಕರ ರಸ್ತೆ ಅಪಘಾತಗಳಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ.

ತಿರುಪತಿ ದರ್ಶನ ಮುಗಿಸಿ ಬೆಂಗಳೂರಿಗೆ ಹಿಂತಿರುಗುತ್ತಿದ್ದಾಗ ಸಂಭವಿಸಿದ ಕಾರು ಪಲ್ಟಿ ದುರಂತದಲ್ಲಿ ನಾಲ್ವರು ಸ್ಥಳದಲ್ಲೇ ಮೃತಪಟ್ಟರೆ,ಮತ್ತೊಂದು ಅಪಘಾತದಲ್ಲಿ ಹೂವು ಕಟಾವಿಗೆ ತೆರಳುತ್ತಿದ್ದ ಕೂಲಿ ಕಾರ್ಮಿಕರಿದ್ದ ಓಮ್ನಿ ಕಾರು ಮಿನಿ ಗೂಡ್ಸ್ ಗೆ ಡಿಕ್ಕಿ ಹೊಡೆದು ಮೂವರು ಮಹಿಳೆಯರು ಮೃತಪಟ್ಟಿದ್ದಾರೆ.

ನಾಲ್ವರು ದುರ್ಮರಣ

ವೇಗವಾಗಿ ಹೋಗುತ್ತಿದ್ದ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಬೆಂಗಳೂರಿನ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿ ಮೂವರು ಗಾಯಗೊಂಡಿರುವ ದಾರುಣ ಘಟನೆ ಕೆಜಿಎಫ್ ತಾಲ್ಲೂಕಿನ ದೊಡ್ಡಕಾರಿ ಬಳಿ ನಡೆದಿದೆ. ಬೆಂಗಳೂರಿ ನ ವಿದ್ಯಾರಣ್ಯಪುರ ಮೂಲದ ಶಾರದಮ್ಮ(70), ದೀಕ್ಷಿತ (25), ದೇವೆಂದ್ರ ಕುಮಾರ್, (41) ಜಿಷ್ಣು (13) ಮೃತಪಟ್ಟವರು.ಗಾಯಗೊಂಡಿರುವ ವಿಕಾಸ್, ನೀತು, ಆದ್ವಿಕ ಸೇರಿ ಮೂವರನ್ನು ಬಂಗಾರಪೇಟೆಯ ಆಸ್ಪತ್ರೆಗೆ ದಾಖಲಿಸಲಾಗಿದ್ದು,ಅವರಲ್ಲಿ ಒಬ್ಬರು ಸ್ಥಿತಿ ಗಂಭೀರವಾಗಿದೆ.

**ತಿಮ್ಮಪ್ಪನ ದರ್ಶನ:**

ಕುಟುಂಬಸ್ಥರು ಸೇರಿಕೊಂಡು ತಿರುಪತಿಗೆ ತೆರಳಿದ್ದರು. ತಿರುಪತಿಯ ತಿಮ್ಮಪ್ಪನ ದರ್ಶನ ಪಡೆದು ಕಾರಿನಲ್ಲಿ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದಾಗ ಈ ಅವಘಡ ಸಂಭವಿಸಿದೆ. ತಿರುಪತಿಯಿಂದ ಹೊರಟ ಟೊಯೋಟಾ ರಿಯಾನ್ ಕಾರು ಮಾರ್ಗ ಮಧ್ಯದ ಕೆಜಿಎಫ್ ತಾಲ್ಲೂಕಿನ ದೊಡ್ಡಕಾರಿ ಬಳಿ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ,ಡಿಕ್ಕಿ ಹೊಡೆದ ರಭಸಕ್ಕೆ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಕಾಸ್, ನೀತು, ಆದ್ವಿಕ ಮೂವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಬಂಗಾರಪೇಟೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.ಸುದ್ದಿ ತಿಳಿದ ತಕ್ಷಣವೇ ಸ್ಥಳಕ್ಕೆ ಬೇತಮಂಗಲ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

**ಮೂವರು ಮಹಿಳೆಯರು ಸಾವು:**

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಕೊತ್ತನೂರು ಗೇಟ್ ಬಳಿ ಸೋಮವಾರ ಮುಂಜಾನೆ ಓಮ್ನಿ ಕಾರು ಹಾಗೂ ಮಿನಿ ಗೂಡ್ಸ್ ಡಿಕ್ಕಿ ಸಂಭವಿಸಿ ಮೂವರು ಮಹಿಳಾ ಕೂಲಿ ಕಾರ್ಮಿಕರು ಸ್ಥಳದಲ್ಲೇ ಸಾವನ್ನಪ್ಪಿ ಹಲವರು ಗಂಭೀರ ಗಾಯಗೊಂಡಿದ್ದಾರೆ. ಮಲ್ಲಿಕಾರ್ಜುನಪುರ ಗ್ರಾಮದ ರೂಪಾ (25), ರತ್ನಮ್ಮ (45) ಹಾಗೂ ಮುನಿಚಿನ್ನಮ್ಮ (48) ಮೃತಪಟ್ಟವರು. ವಾಹನದಲ್ಲಿದ್ದ ಸುಮಾರು 12 ಮಂದಿಗೆ ಸಣ್ಣಪುಟ್ಟ ಹಾಗೂ ಗಂಭೀರ ಗಾಯಗಳಾಗಿದೆ. ಓಮ್ನಿ ಚಾಲಕನ ಕೈ ಮೂಳೆ ಮುರಿದಿದೆ.

**ಕ್ಯಾಂಟರ್ ಪಲ್ಟಿ:**

ಚಿಂತಾಮಣಿ ತಾಲೂಕಿನ ಮಲ್ಲಿಕಾರ್ಜುನಪುರ ಗ್ರಾಮದಿಂದ ಶಿಡ್ಲಘಟ್ಟ ತಾಲೂಕಿನ ತಿಪ್ಪೇನಹಳ್ಳಿಗೆ ಕೂಲಿ ಕೆಲಸಕ್ಕಾಗಿ ಮಹಿಳೆಯರು ಮಾರುತಿ ಓಮ್ನಿ ವಾಹನದಲ್ಲಿ ತೆರಳುತ್ತಿದ್ದರು. ಮುಂಜಾನೆ ಸುಮಾರು 2:30ರ ಸುಮಾರಿಗೆ ಹೊಸಹಳ್ಳಿ ಗೇಟ್ ಸಮೀಪ ತಲುಪುತ್ತಿದ್ದಂತೆ, ಎದುರಿನಿಂದ ಬಂದ ಮಿನಿ ಕ್ಯಾಂಟರ್ ಹಾಗೂ ಓಮ್ನಿ ನಡುವೆ ಡಿಕ್ಕಿ ಸಂಭವಿಸಿ ಓಮ್ನಿ ನಜ್ಜುಗುಜ್ಜಾಗಿ ರಸ್ತೆಯಲ್ಲೇ ಪಲ್ಟಿಯಾಗಿದೆ. ತಕ್ಷಣವೇ ಧಾವಿಸಿದ ಸ್ಥಳೀಯರು ರಕ್ಷಣಾ ಕಾರ್ಯಾಚರಣೆ ನಡೆಸಿ, ಗಾಯಾಳುಗಳನ್ನು ಆಂಬ್ಯುಲೆನ್ಸ್ ಮೂಲಕ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲು ನೆರವಾಗಿದ್ದಾರೆ. ಕ್ಯಾಂಟರ್ ವಾಹನವೂ ಸಹ ಡಿಕ್ಕಿ ಬಳಿಕ ರಸ್ತೆಯಲ್ಲೇ ಪಲ್ಟಿಯಾಗಿತ್ತು. ಸ್ಥಳಕ್ಕೆ ಶಿಡ್ಲಘಟ್ಟ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಕೆಪಿಎಸ್‌ಸಿ ಅಕ್ರಮ: ಭಾಲ್ಕಿಯಲ್ಲಿ ಹಾಲಿನ ಡೇರಿ ಸ್ಥಾಪಿಸಿದ್ದ ಕನ್ನಾಳೆ!

**ಬೀದರ್, ಸೆ. 7:** ಕೆಪಿಎಸ್‌ಸಿ ಪಶು ವೈದ್ಯಾಧಿಕಾರಿ ನೇಮಕಾತಿ ಅಕ್ರಮದ ಪ್ರಮುಖ ಆರೋಪಿ ಬಸವರಾಜ ಕನ್ನಾಳೆ, ಅಕ್ರಮ ಹಣದಿಂದಲೇ ಭಾಲ್ಕಿಯಲ್ಲಿ ಕೋಟ್ಯಂತರ ರೂ ಮೌಲ್ಯದ ಕೃಷಿಭೂಮಿ ಖರೀದಿಸಿ, ಸುಸಜ್ಜಿತ ಹಾಲಿನ ಡೇರಿ ಸ್ಥಾಪಿಸಿರುವುದು ಬೆಳಕಿಗೆ ಬಂದಿದೆ.


ಕೆಲವೇ ವರ್ಷಗಳ ಹಿಂದೆ ಸಾಮಾನ್ಯ ಮಟ್ಟದಲ್ಲಿದ್ದ ಈತ, ಭಾಲ್ಕಿ–ಭಾತಂಬ್ರಾ ಮುಖ್ಯರಸ್ತೆಯ ಬಳಿ ಸುಮಾರು ಐದು ಕೋಟಿ ರೂ ಮೌಲ್ಯದ ಎಂಟು ಎಕರೆಗೂ ಅಧಿಕ ಫಲವತ್ತಾದ ಕೃಷಿ ಜಮೀನು ಖರೀದಿಸಿದ್ದಾನೆ. ಅಕ್ರಮವಾಗಿ ಗಳಿಸಿದ ಹಣವನ್ನು ವೈಟ್ ಮಾಡಿಕೊಳ್ಳುವ ಉದ್ದೇಶದಿಂದಲೇ 'ಭಗವತಿ ಹೈನುಗಾರಿಕೆ' ಹೆಸರಿನಲ್ಲಿ ಆಧುನಿಕ ತಂತ್ರಜ್ಞಾನದ ಬೃಹತ್ ಡೇರಿ ಘಟಕ ಸ್ಥಾಪಿಸಿದ್ದಾನೆ ಎಂಬ ಬಲವಾದ ಶಂಕೆ ವ್ಯಕ್ತವಾಗಿದೆ.

ನೆರೆಯ ಗುಜರಾತ್ ಮತ್ತು ಮಹಾರಾಷ್ಟ್ರಗಳಿಂದ ತಂದ ಮುರ್ರಾ ತಳಿಯ ಎಮ್ಮೆಗಳೊಂದಿಗೆ ಕೋಟ್ಯಂತರ ರೂ ವೆಚ್ಚಮಾಡಿ ಈ ಹೈನುಗಾರಿಕೆ ಘಟಕವನ್ನು ನಿರ್ಮಿಸಲಾಗಿತ್ತು. 2025ರ ಡಿಸೆಂಬರ್ 10ರಂದು ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಹಾಗೂ ಪ್ರಮುಖ ಗಣ್ಯರ ಸಮ್ಮುಖದಲ್ಲಿ ಈ ಡೇರಿಯನ್ನು ಅತ್ಯಂತ ಅದ್ದೂರಿಯಾಗಿ ಉದ್ಘಾಟಿಸಲಾಗಿತ್ತು.

ಪ್ರಸ್ತುತ ಈ ಡೇರಿಯಲ್ಲಿ 25ಕ್ಕೂ ಹೆಚ್ಚು ಮುರ್ರಾ ಎಮ್ಮೆಗಳು, ಒಂದು ಆಕರ್ಷಕ ಕೋಣ, ಎರಡು ದೇಸಿ ಹಸುಗಳು ಹಾಗೂ 10ಕ್ಕೂ ಹೆಚ್ಚು ಕರುಗಳಿವೆ. ಇಲ್ಲಿ ಪ್ರತಿದಿನ 250 ಲೀಟರ್‌ಗೂ ಅಧಿಕ ಹಾಲು ಉತ್ಪಾದನೆಯಾಗುತ್ತಿದ್ದು, ಉತ್ತರ ಪ್ರದೇಶದ ಇಬ್ಬರು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಜಮೀನಿನಲ್ಲಿಯೇ ಹಸಿರು ಮೇವು ಬೆಳೆಯಲಾಗುತ್ತಿದ್ದು, ಈ ಇಡೀ ಡೈರಿಯ ನಿರ್ವಹಣೆಯನ್ನು ಬಸವರಾಜನ ತಂದೆ ನಾಗನಾಥ ನೋಡಿಕೊಳ್ಳುತ್ತಿದ್ದಾರೆ.

ಭಾಲ್ಕಿ ತಾಲೂಕಿನ ಡೋಣಗಾಪುರ ಮೂಲದ ಬಸವರಾಜ ಕನ್ನಾಳೆ ಅವರ ತಂದೆ ಸಮಾಜ ಕಲ್ಯಾಣ ಇಲಾಖೆಯ ನೌಕರರಾಗಿದ್ದರು. ಮನ್ನಾಖೇಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ಔರಾದ್‌ನಲ್ಲಿ ಪ್ರೌಢಶಿಕ್ಷಣ ಮುಗಿಸಿದ ಬಸವರಾಜ, ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಪಿಯುಸಿ ಹಾಗೂ ಪದವಿ ಶಿಕ್ಷಣ ಪೂರ್ಣಗೊಳಿಸಿದ್ದ. ಚಿಕ್ಕಂದಿನಿಂದಲೂ ಓದಿನಲ್ಲಿ ಜಾಣನಾಗಿದ್ದ ಈತ ಬೆಂಗಳೂರಿನಲ್ಲಿ ಕೆಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿದ್ದರೂ ಯಶಸ್ಸು ಸಿಕ್ಕಿರಲಿಲ್ಲ. ಬಳಿಕ ನವದೆಹಲಿಯಲ್ಲಿ ಆರು ತಿಂಗಳು ಐಎಎಸ್ ತರಬೇತಿಯನ್ನೂ ಪಡೆದಿದ್ದ. ನಂತರ ತುಮಕೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿ ಆಯ್ಕೆಯಾದ ಮೇಲೆ ಕುಟುಂಬ ಸಮೇತ ಬೆಂಗಳೂರಿನಲ್ಲಿ ನೆಲೆಸಿದ್ದ. ಅಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳ ಸಂಪರ್ಕ ಬೆಳೆಸಿಕೊಂಡ ಬಸವರಾಜ ತೀವ್ರವಾಗಿ ಬೆಳೆಯುತ್ತಾ ಹೋದ. ಆದರೆ, ಆತನ ಈ ಅಕ್ರಮ ವ್ಯವಹಾರಗಳ ಬಗ್ಗೆ ಕುಟುಂಬಕ್ಕೆ ಯಾವುದೇ ಮಾಹಿತಿ ಇರಲಿಲ್ಲವೆಂದು, ಮಾಧ್ಯಮ ಹಾಗೂ ಟಿವಿ ಸುದ್ದಿಗಳನ್ನು ನೋಡಿದ ಮೇಲೆಯೇ ಆತನ ಅಸಲಿ ವಿಚಾರ ಗೊತ್ತಾಗಿದ್ದಾಗಿ ತಂದೆ ನಾಗನಾಥ ತಿಳಿಸಿದ್ದಾರೆ.

## ಕಾರ್ಯಕರ್ತರೇ ಜೆಡಿಎಸ್ ಜೀವಾಳ, ಪಕ್ಷವನ್ನು ಅಧಿಕಾರಕ್ಕೆ ತರಲು ಶಕ್ತಿ ಮೀರಿ ಶ್ರಮಿಸಬೇಕು: ಮೀನಳ್ಳಿ ತಾಯಣ್ಣ



**ಬಳ್ಳಾರಿ ಸೆ.7:** ಕಾರ್ಯಕರ್ತರೇ ಪಕ್ಷದ ಜೀವಾಳ, ಬರುವ ದಿನಗಳಲ್ಲಿ ಜಿ.ಪಂ.ಹಾಗೂ ತಾ.ಪಂ.ಚುನಾವಣೆ ಬರಲಿದ್ದು, ಪ್ರತಿಯೊಬ್ಬ ಕಾರ್ಯಕರ್ತರು ತಳಮಟ್ಟದಿಂದ ಪಕ್ಷ ಸಂಘಟನೆಗೆ ಮುಂದಾಗಬೇಕು, ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಹೇಳಿದರು.

ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪಕ್ಷಕ್ಕೆ ಸೇರ್ಪಡೆ ಹಾಗೂ ಪದಾಧಿಕಾರಿಗಳ ಸಭೆಗೆ ಚಾಲನೆ ನೀಡಿ ಮಾತನಾಡಿದರು. ಪದಾಧಿಕಾರಿಗಳು ವಿಸಿಟಿಂಗ್ ಕಾರ್ಡ್ ಗೆ ಸೀಮಿತರಾಗದೆ ಪ್ರತಿಯೊಬ್ಬರೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಇರುವದರಿಂದ ಕಾರ್ಯಕರ್ತರಿಗೆ ಒಳ್ಳೆಯ ಅವಕಾಶಗಳು ಹೆಚ್ಚಿವೆ, ಜಿಲ್ಲೆಯ ಸಿರುಗುಪ್ಪ, ಕಂಪ್ಲಿ, ಕುರುಗೋಡು, ಸಂಡೂರು ಹಾಗೂ ಬಳ್ಳಾರಿ ಕ್ಷೇತ್ರಗಳಲ್ಲಿ ಜಿ.ಪಂ.ಹಾಗೂ ತಾ.ಪಂ.ಸದಸ್ಯರು ಅತಿಹೆಚ್ಚು ಗೆಲ್ಲುವ ಮೂಲಕ ನಮ್ಮೆಲ್ಲರ ಶಕ್ತಿ ಹೆಚ್ಚಿಸಬೇಕು. ನಿಮ್ಮೊಂದಿಗೆ ನಾವಿದ್ದೇವೆ, ಅಕ್ರಮ, ಅವ್ಯವಹಾರ ಕಂಡು ಬಂದಲ್ಲಿ ಖಂಡಿಸಿ ಹೋರಾಟಕ್ಕಿಳಿಯಿರಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ಕಾರ್ಯಕರ್ತರಿಗೆ ಶಕ್ತಿ ತುಂಬಿದರು. ಅಂಗನವಾಡಿಗಳಲ್ಲಿ ಮಕ್ಕಳಿಗೆ ಸೇರಬೇಕಾದ ಆಹಾರದ ಪ್ಯಾಕೆಟ್ ಗಳು, ಆಹಾರದ ಕಿಟ್ ಗಳು ಅವಧಿ ಮೀರಿದ್ದು ಎಂದು ಕಂಡು ಬಂದಿದೆ. ಕೂಡಲೇ ಸಂಬಂಧಿಸಿದ ಇಲಾಖೆ ಮೇಲಧಿಕಾರಿಗಳು ಕಠಿಣ ಕ್ರಮಕ್ಕೆ ಮುಂದಾಗಬೇಕು ಎಂದರು.

ಇಂತಹ ಪದಾರ್ಥಗಳು ಮಕ್ಕಳ ಹೊಟ್ಟೆ ಸೇರಿದರೆ ಗತಿಯೇನು ಎಂದು ಪ್ರಶ್ನಿಸಿದರು. ಸರ್ಕಾರ ಮಕ್ಕಳೊಂದಿಗೆ ಚೆಲ್ಲಾಟವಾಡುವುದು ಸರಿಯಲ್ಲ, ಕೂಡಲೇ ಯಾರೇ ನಿರ್ಲಕ್ಷ್ಯ ವಹಿಸಿರಲಿ ಎಲ್ಲರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಸಿರುಗುಪ್ಪ ತಾಲೂಕಿನ ಯುವ ಮುಖಂಡ ಬಿ.ಗಿರೀಶ್ ಅವರು ಪಕ್ಷ ಸೇರ್ಪಡೆಯಾಗಿದ್ದು, ಮತ್ತಷ್ಟು ಶಕ್ತಿ ಬಂದಂತಾಗಿದೆ. ಅವರನ್ನು ಬರುವ ದಿನಗಳಲ್ಲಿ ತಾಲೂಕು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದು. ಕ್ಷೇತ್ರದಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಬಲಿಷ್ಠಗೊಳಿಸಬೇಕು ಎಂದು ಕರೆ ನೀಡಿದರು.

**ಪಕ್ಷ ಸೇರ್ಪಡೆ ಹಾಗೂ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಣೆ:** ಯುವ ಮುಖಂಡ ಗಿರೀಶ್ ಅವರ ನೇತೃತ್ವದಲ್ಲಿ ವಿವಿಧ ಪಕ್ಷಗಳನ್ನು ತೊರೆದು ಸುಮಾರು ಮುಖಂಡರು ಹಾಗೂ ಕಾರ್ಯಕರ್ತರು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರ ನೇತೃತ್ವದಲ್ಲಿ ಸೇರ್ಪಡೆಯಾದರು. ಪಕ್ಷದ ಬಾವುಟ ನೀಡಿ ಗಣ್ಯರು ಶುಭ ಹಾರೈಸಿದರು. ಈ ವೇಳೆ ನೂತನವಾಗಿ ನೇಮಕಗೊಂಡ, ಪದಾಧಿಕಾರಿಗಳಿಗೆ ಮೀನಳ್ಳಿ ತಾಯಣ್ಣ ಅವರು ನೇಮಕಾತಿ ಆದೇಶ ಪತ್ರವನ್ನು ವಿತರಿಸಿದರು. ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷರಾಗಿ ರವಿ ಕುಮಾರ್ ಮೀನಳ್ಳಿ, ಕಂಪ್ಲಿ ತಾಲೂಕು ಪ್ರಧಾನ ಕಾರ್ಯದರ್ಶಿಯಾಗಿ ಜಗದೀಶ್ ಪೂಜಾರ್, ಅದೇ ರೀತಿ ತಾಲೂಕು ಉಪಾಧ್ಯಕ್ಷರಾಗಿ ಕೆರೆಕೇರಿ ದೊಡ್ಡಪ್ಪ ಅವರಿಗೆ ಮೀನಳ್ಳಿ ತಾಯಣ್ಣ ಅವರು ನೇಮಕಾತಿ ಆದೇಶ ಪತ್ರ ವಿತರಿಸಿ ಶುಭ ಹಾರೈಸಿ, ಪ್ರತಿಯೊಬ್ಬರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಅದ್ದಿಗೇರಿ ರಾಮಣ್ಣ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ರೆಡ್ಡಿ, ಮಹಾ ಪ್ರಧಾನ ಕಾರ್ಯದರ್ಶಿ ಯಲ್ಲನಗೌಡ, ಮಹಿಳಾ ಅಧ್ಯಕ್ಷೆ ಪುಷ್ಪಾ, ವೈದ್ಯಕೀಯ ವಿಭಾಗದ ಹೊನ್ನೂರು ವಲಿ, ತಾಲೂಕು ಅಧ್ಯಕ್ಷರಾದ ರಾಜ ಹೊನ್ನಳ್ಳಿ, ಮೇಘರಾಜ, ಜಿಲ್ಲಾ ಉಪಾಧ್ಯಕ್ಷ ರಾಮಾಂಜಿನೇಯಲೂ, ಕಾರ್ಯದರ್ಶಿ ಭಾಷಾ ಸೇರಿದಂತೆ, ಲಕ್ಷ್ಮೀ, ಶಮಿನ್ ಬಾನು, ಸ್ವಾತಿ, ಬೃಂದಾ, ಮಮತಾ, ಇಂದ್ರಾ ಇತರರಿದ್ದರು. ಬಿ.ಗಿರೀಶ್ ಅವರ ನೇತೃತ್ವದಲ್ಲಿ ಸಾದಣ್ಣ, ನರಸಿಂಹಪ್ಪ, ಡಾ. ಇಸ್ಮಾಯಿಲ್, ದುರುಗಪ್ಪ, ಸುರೇಶ್ ಕೆ., ಖಾಸಿಂ, ಉದಯಸಾಗರ, ಕೋಳೂರು ಪಂಪಾಪತಿ ಸರಿದಂತೆ ವಿವಿಧ ಕಾರ್ಯಕರ್ತರು ಪಕ್ಷಕ್ಕೆ ಸೇರ್ಪಡೆಯಾದರು.

---

**ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಖಂಡ್ರೆಗೆ ಮನವಿ**

## ಕಾರಂಜಾ ಜಲಾಶಯದ ರೈತ ಸಂತ್ರಸ್ತರಿಗೆ ಪರಿಹಾರ ನೀಡದಿದ್ದರೆ ಮತ್ತೆ ಹೋರಾಟದ ಎಚ್ಚರಿಕೆ



ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರಿಗೆ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಹಾಗೂ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿ ಪರಿಹಾರಕ್ಕೆ ಆಗ್ರಹಿಸಿ ಮನವಿ ಸಲ್ಲಿಸಿದರು.

**ಬೀದರ್, ಸೆ.7:** ಕಾರಂಜಾ ಜಲಾಶಯದ ಮುಳುಗಡೆ ರೈತ ಸಂತ್ರಸ್ತರಿಗೆ ಕಾಲಮಿತಿಯಲ್ಲಿ ಪರಿಹಾರ ನೀಡದಿದ್ದರೆ ಮತ್ತೆ ಹೋರಾಟ ಆರಂಭಿಸುವುದು ಅನಿವಾರ್ಯವಾಗಲಿದೆ ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಹಾಗೂ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿ ಎಚ್ಚರಿಕೆ ನೀಡಿವೆ. ಎರಡೂ ಸಂಘಟನೆಗಳ ಮುಖಂಡರು ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿಪತ್ರ ಸಲ್ಲಿಸಿ ಒತ್ತಾಯಿಸಿದರು. ಕಾರಂಜಾ ಜಲಾಶಯ ನಿರ್ಮಾಣಕ್ಕಾಗಿ ತಮ್ಮ ಜಮೀನು, ಮನೆ, ಬದುಕಿನ ಆಧಾರ ಕಳೆದುಕೊಂಡು ದಶಕಗಳಿಂದ ನ್ಯಾಯಕ್ಕಾಗಿ ಹೋರಾಡುತ್ತಿರುವ ರೈತ ಸಂತ್ರಸ್ತರ ಪರಿಸ್ಥಿತಿ, ಸರ್ಕಾರ ಈ ಹಿಂದೆ ನೀಡಿರುವ ಭರವಸೆಗಳು ಹಾಗೂ ಪರಿಹಾರಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಿಯೋಗ ಸಚಿವರಿಗೆ ವಿವರಿಸಿದರು.

ಸಂತ್ರಸ್ತರಿಗೆ ಸಮರ್ಪಕ ಪರಿಹಾರ ನೀಡುವ ಕುರಿತು ಸರ್ಕಾರ ಈಗಾಗಲೇ ನೀಡಿರುವ ಭರವಸೆಯನ್ನು ಯಾವುದೇ ಕಾರಣಕ್ಕೂ ವಿಳಂಬಗೊಳಿಸದೆ, ನಿಗದಿತ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕು. ಸರ್ಕಾರದ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳಬೇಕು. ಅನಗತ್ಯ ನನೆಗುದಿಗೆ ಹಾಕಿದರೆ, ಸಂತ್ರಸ್ತ ರೈತರ ಪರವಾಗಿ ಮತ್ತೆ ಹೋರಾಟದ ಹಾದಿ ಹಿಡಿಯುವುದು ಅನಿವಾರ್ಯವಾಗಲಿದೆ ಎಂಬುದನ್ನೂ ಸ್ಪಷ್ಟವಾಗಿ ತಿಳಿಸಿದರು.

ಈಶ್ವರ ಖಂಡ್ರೆ ಪ್ರತಿಕ್ರಿಯಿಸಿ, ಕಾರಂಜಾ ಸಂತ್ರಸ್ತರ ಪ್ರಕರಣವನ್ನು ಕೇವಲ ಮತ್ತೊಂದು ಸಾಮಾನ್ಯ ಪರಿಹಾರ ಪ್ರಕರಣವಾಗಿ ಪರಿಗಣಿಸದೆ, ಮಾನವೀಯ ದೃಷ್ಟಿಕೋನದಿಂದ ವಿಶೇಷ ಪ್ರಕರಣವಾಗಿ ಪರಿಗಣಿಸಲಾಗುತ್ತಿದೆ ಎಂದು ತಿಳಿಸಿದರು.

ದಶಕಗಳಿಂದ ಪರಿಹಾರಕ್ಕಾಗಿ ಕಾಯುತ್ತಿರುವ ಸಂತ್ರಸ್ತರ ನೋವು ಮತ್ತು ಸಮಸ್ಯೆಯ ಗಂಭೀರತೆಯನ್ನು ಸರ್ಕಾರ ಅರ್ಥಮಾಡಿಕೊಂಡಿದ್ದು, ಸಮರ್ಪಕ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ತಾವು ವೈಯಕ್ತಿಕವಾಗಿ ಮುತುವರ್ಜಿ ವಹಿಸುವುದಾಗಿ ಹಾಗೂ ಸಂತ್ರಸ್ತರ ಬೇಡಿಕೆ ಈಡೇರಿಕೆಗೆ ಬದ್ಧರಾಗಿರುವುದಾಗಿ ಭರವಸೆ ನೀಡಿದರು. ಡಿಸಿಸಿ ಬ್ಯಾಂಕಿನ ಬಲವರ್ಧನೆ, ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ವಾಸ್ತವ ಸ್ಥಿತಿಗತಿ, ಬಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳು ಹಾಗೂ ಜಿಲ್ಲೆಯ ರೈತ ಸಮುದಾಯ ಎದುರಿಸುತ್ತಿರುವ ವಿವಿಧ ಸಂಕಷ್ಟಗಳ ಕುರಿತು ಗಮನ ಸೆಳೆದರು.

ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಗೌರವ ಅಧ್ಯಕ್ಷ ಬಸವರಾಜ ದೇಶಮುಖ, ಸ್ಥಾಪಕ ಅಧ್ಯಕ್ಷ ಲಕ್ಷ್ಮಣ ದಸ್ತಿ, ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಪಾಟೀಲ ಹುಚಕನಳ್ಳಿ, ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಬೀದರ್ ಸಂಯೋಜಕ ವಿನಯಕುಮಾರ ಮಾಳಗೆ, ರೋಹನ್ ಕುಮಾರ್ ಉಪಸ್ಥಿತರಿದ್ದರು.

---

## ನಮ್ಮ ಕಲಬುರಗಿ ಸಾರಿಗೆ ಆ್ಯಪ್ ನಿಷ್ಕ್ರಿಯ: ಪ್ರಯಾಣಿಕರ ಪರದಾಟ

**ಕಲಬುರಗಿ, ಸೆ.7:** ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸುಲಭಗೊಳಿಸುವ ಉದ್ದೇಶದಿಂದ ಪರಿಚಯಿಸಲಾಗಿದ್ದ 'ನಮ್ಮ ಕಲಬುರಗಿ ಸಾರಿಗೆ' ಆ್ಯಪ್ ನಿಷ್ಕ್ರಿಯಗೊಂಡಿರುವುದರಿಂದ ಪ್ರಯಾಣಿಕರು ಮತ್ತೆ ಅನಿಶ್ಚಿತತೆಯಲ್ಲೇ ಬಸ್‌ಗಾಗಿ ಪರದಾಡುವಂತೆ ಮಾಡಿದೆ. ನಗರದ ಸಾರ್ವಜನಿಕ ಸಾರಿಗೆಯನ್ನು ಆಧುನಿಕರಿಸಿ, ಪ್ರಯಾಣಿಕರ ಪ್ರಯಾಣ ಸುಗಮಗೊಳಿಸಲು 2024ರ ಮಾರ್ಚ್ 5ರಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು 'ನಮ್ಮ ಕಲಬುರಗಿ ಸಾರಿಗೆ' ಆ್ಯಪ್ ಪರಿಚಯಿಸಿತ್ತು. ಇದರಿಂದ ಪ್ರಯಾಣಿಕರಿಗೆ ಬಸ್ ಸಂಚಾರ ಕುರಿತು ಮಾಹಿತಿ ದೊರೆಯಲು ತುಂಬ ಅನುಕೂಲವಾಗಿತ್ತು.

ಇದಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆಯೂ ಸಿಕ್ಕಿತ್ತು. ಒಟ್ಟು 66,383 ಬಳಕೆದಾರರು ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದರು. ಆದರೆ, ಕಳೆದ ಕೆಲವು ತಿಂಗಳಿಂದ ಈ ಆ್ಯಪ್ ನಿಷ್ಕ್ರಿಯಗೊಂಡಿರುವುದು ಜನರಲ್ಲಿ ನಿರಾಸೆ ಮೂಡಿಸಿದೆ.

ಬಸ್ ಎಲ್ಲಿದೆ, ಯಾವ ಮಾರ್ಗದಲ್ಲಿ ಸಂಚರಿಸುತ್ತಿದೆ, ನಿಲ್ದಾಣಕ್ಕೆ ಇನ್ನೆಷ್ಟು ಸಮಯದಲ್ಲಿ ಬರಲಿದೆ ಎಂಬ ಮಾಹಿತಿ ಹಾಗೂ ಮಾರ್ಗ ಮತ್ತು ವೇಳಾಪಟ್ಟಿಯನ್ನು ಮೊಬೈಲ್‌ನಲ್ಲೇ ಪಡೆಯಲು

ಈ ಆ್ಯಪ್ ಮೂಲಕ ಸುಲಭವಾಗಿಕ ಪ್ರಯಾಣಿಕರಿಗೆ ನೆರವಾಗುತ್ತಿತ್ತು. ಆದರೆ, ಕೆಲವು ದಿನಗಳಿಂದ ಆ್ಯಪ್ ತೆರೆದರೆ 'ಸರ್ವರ್ ಬ್ಯುಸಿ' ಅಥವಾ 'ಸರ್ವರ್‌ನಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ' ಎಂಬ ಸಂದೇಶ ಬರುತ್ತಿದ್ದು, ಜಿಪಿಎಸ್ ಆಧಾರಿತ ಬಸ್‌ಗಳ ಮಾಹಿತಿ ಪ್ರಯಾಣಿಕರಿಗೆ ಲಭ್ಯವಾಗುತ್ತಿಲ್ಲ. ಇದರಿಂದಾಗಿ ಇದನ್ನು ಬಳಸುತ್ತಿದ್ದ ಪ್ರಯಣಿಕರಿಗೆ ತುಂಬ ಅನಾನುಕೂಲವಾಗಿ ಪರದಾಡುವಂತೆ ಮಾಡಿದೆ.

ಆ್ಯಪ್ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಪ್ರಯಾಣಿಕರು ಬಸ್‌ನ ಚಲನವಲನ ಗಮನಿಸಿ, ಸರಿಯಾದ ಸಮಯಕ್ಕೆ ನಿಲ್ದಾಣ ತಲುಪುತ್ತಿದ್ದರು. ಇದೀಗ ಆ ಸೌಲಭ್ಯ ಇಲ್ಲದಿರುವುದರಿಂದ ಬಸ್ ಬರುವ ಸಮಯದ ಖಚಿತ ಮಾಹಿತಿ ಇಲ್ಲದೆ ಮುಂಚಿತವಾಗಿಯೇ ನಿಲ್ದಾಣಕ್ಕೆ ತೆರಳಿ ಕಾಯಬೇಕಾಗಿ ಬಂದಿದೆ. ಕೆಲವರು ತಡವಾಗಿ ಬಂದು ಬಸ್ ತಪ್ಪಿಸಿಕೊಳ್ಳುವ ಪರಿಸ್ಥಿತಿಯೂ ಎದುರಾಗಿದೆ.

ವಿಶೇಷವಾಗಿ ಪ್ರತಿದಿನ ನಗರ ಸಾರಿಗೆ ಬಸ್‌ಗಳನ್ನೇ ಅವಲಂಬಿಸಿರುವ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಹಿರಿಯ ನಾಗರಿಕರಿಗೆ ಇದರಿಂದ ತೀವ್ರ ತೊಂದರೆಯಾಗಿದೆ. ಬಸ್ ತಪ್ಪಿದರೆ ಮುಂದಿನ ಬಸ್ ಯಾವಾಗ ಬರುತ್ತದೆಂಬ ಖಚಿತ ಮಾಹಿತಿ ಕೂಡ ಸುಲಭವಾಗಿ ಸಿಗದಿರುವುದು ಪ್ರಯಾಣಿಕರ ಆತಂಕ ಹೆಚ್ಚಿಸಿದೆ. ನಗರದಲ್ಲಿ 150 ನಗರ ಸಾರಿಗೆ ಬಸ್ ನಿತ್ಯ ಕಾರ್ಯಾಚರಣೆ ಮಾಡುತ್ತಿದ್ದು, ಅಂದಾಜು 60 ಸಾವಿರ ಪ್ರಯಾಣಿಕರು ಸಂಚರಿಸುತ್ತಾರೆ.

ತರಗತಿ, ಕಚೇರಿಗೆ ತಡ: ಆ್ಯಪ್‌ನಲ್ಲಿ ಬಸ್‌ನ ನಿಖರ ಚಲನವಲನ ಕಾಣಿಸುತ್ತಿದ್ದಾಗ ಪ್ರಯಾಣವನ್ನು ಅದಕ್ಕೆ ತಕ್ಕಂತೆ ಯೋಜಿಸಬಹುದಾಗಿತ್ತು. ಈಗ ಬಸ್‌ಗಾಗಿ ಹೆಚ್ಚು ಸಮಯ ಕಾಯಬೇಕಾಗಿರುವುದರಿಂದ ಕಚೇರಿಗೆ ತಡವಾಗುವ ಸಮಸ್ಯೆ ಎದುರಾಗುತ್ತಿದೆ ಎಂದು ಪ್ರಯಾಣಿಕ ಸಂತೋಷ ಚಿಂಚೋಳಿ ಅಸಮಾಧಾನ ವ್ಯಕ್ತಪಡಿಸಿದರು. ನಾವೆಲ್ಲ ಆ್ಯಪ್ ನಂಬಿಕೊಂಡು ಕಾಲೇಜಿಗೆ ಹೊರಡುತ್ತಿದ್ದೆವು. ಈಗ ಬಸ್ ಎಲ್ಲಿದೆ ಎಂಬುದೇ ಗೊತ್ತಾಗುವುದಿಲ್ಲ. ಬಸ್ ತಪ್ಪಿದರೆ ತರಗತಿ ತಪ್ಪುತ್ತದೆ. ಅಲ್ಲದೆ ಗಂಟೆಗಟ್ಟಲೇ ಸಮಯ ವ್ಯರ್ಥವಾಗುತ್ತಿದೆ ಎಂದು ವಿದ್ಯಾರ್ಥಿ ಅಶೋಕ ಅಸಮಾಧಾನ ವ್ಯಕ್ತಪಡಿಸಿದರು.

ಹಲವಾರು ಬಾರಿ ಬಸ್‌ಗಾಗಿ ಕಾದು ಸಾಕಾಗಿ, ಆಟೊದಲ್ಲಿ ಕುಳಿತಾಗ ಬಸ್ ಬರುತ್ತದೆ. ಆಗ ಹಣ ವ್ಯರ್ಥವಾಯಿತು ಎಂದು ಬೇಜಾರಾಗಿದೆ. ಹೀಗಾಗಿ ಈ ಮೊದಲಿನಂತೆ ಆ್ಯಪ್ ಸಕ್ರಿಯಗೊಂಡರೆ ವಿದ್ಯಾರ್ಥಿಗಳ ಹಣ ವ್ಯರ್ಥವಾಗಿ ಪೋಲಾಗುವುದು ನಿಲ್ಲಲಿದೆ ಎನ್ನುತ್ತಾರೆ ಕಾಲೇಜು ವಿದ್ಯಾರ್ಥಿನಿ ಕಾವೇರಿ ಬನಶೆಟ್ಟಿ.

### ಅನುದಾನ ಸ್ಥಗಿತ: ಆ್ಯಪ್ ನಿಷ್ಕ್ರಿಯ

ಜರ್ಮನ್ ಮೂಲದ ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆಯಾದ ಜಿಐಝಡ್, ಐಐಐಟಿ ದೆಹಲಿ ಸಹಯೋಗದೊಂದಿಗೆ 'ನಮ್ಮ ಕಲಬುರಗಿ ಸಾರಿಗೆ' ಆ್ಯಪ್ ಅಭಿವೃದ್ಧಿಪಡಿಸಿ, ಕೆಕೆಆರ್‌ಟಿಸಿ ಸಂಸ್ಥೆಗೆ ಉಚಿತವಾಗಿ ನೀಡಿತ್ತು. ಆದರೆ, ಜಿಐಝಡ್‌ನಿಂದ ಅನುದಾನ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಆ್ಯಪ್ ನಿಷ್ಕ್ರಿಯಗೊಂಡಿದೆ. ಆ್ಯಪ್ ಅನ್ನು ಮತ್ತೆ ಸಕ್ರಿಯಗೊಳಿಸುವಂತೆ ಜಿಐಝಡ್‌ಗೆ ಹಲವು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕೆಕೆಆರ್‌ಟಿಸಿ ಮುಖ್ಯ ತಾಂತ್ರಿಕ ಎಂಜಿನಿಯರ್ ಸಂತೋಷ್ ಗೋಗೇರಿ ತಿಳಿಸಿದರು.

ಹೀಗಾಗಿ ಕೆಕೆಆರ್‌ಟಿಸಿ ವತಿಯಿಂದಲೇ ಹೊಸ ಆ್ಯಪ್ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಈ ಕುರಿತು ಮಾತುಕತೆಗಳು ಪ್ರಾಥಮಿಕ ಹಂತದಲ್ಲಿದ್ದು, ಶೀಘ್ರದಲ್ಲೇ ನೂತನ ಆ್ಯಪ್ ಅನ್ನು ಸಾರ್ವಜನಿಕ ಸೇವೆಗೆ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಸಾರಿಗೆ ಆ್ಯಪ್ ನಿಷ್ಕ್ರಿಯಗೊಂಡಿರುವುದರಿಂದ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆ ಆಗುತ್ತಿದೆ. ಹೀಗಾಗಿ ಕೂಡಲೇ ಸಂಬಂಧಪಟ್ಟವರು ಆ್ಯಪ್ ಸಕ್ರಿಯಗೊಳಿಸಬೇಕು ಎಂದು ಎಬಿವಿಪಿ ಮಹಾನಗರ ಕಾರ್ಯದರ್ಶಿ ಶ್ರವಣ ಝುಳಕಿ ಆಗ್ರಹಿಸಿದ್ದಾರೆ.

---

## ಶಿಕ್ಷಕರಿಗೆ ಗೌರವ ಸಮರ್ಪಣೆ, ಗುರು ಕಾಣಿಕೆ ಸಮರ್ಪಣೆ

### ವಿದ್ಯಾರ್ಥಿಗಳಿಂದ ಶಿಕ್ಷಕರ ದಿನಾಚರಣೆಯ ವಿನೂತನ ಕಾರ್ಯಕ್ರಮ



**ಬೀದರ್, ಸೆ. 7:** ನಗರದ ವಿವಿಧ ಶಾಲಾ–ಕಾಲೇಜುಗಳಲ್ಲಿ ಶಿಕ್ಷಕರ ದಿನಾಚರಣೆ ವಿನೂತನ ರೀತಿಯಲ್ಲಿ ಆಚರಿಸಲಾಯಿತು. ವಿದ್ಯಾರ್ಥಿಗಳು ತಮ್ಮ ಪ್ರೀತಿ ಪಾತ್ರರಾದ ಶಿಕ್ಷಕರಿಗೆ ಗೌರವಿಸಿ, ಗುರು ಕಾಣಿಕೆ ಕೊಟ್ಟು ಸನ್ಮಾನಿಸಿದರು. ಅವರ ಕೊಡುಗೆ ಸ್ಮರಿಸಿದರು. ವಿವಿಧೆಡೆ ನಡೆದ ಕಾರ್ಯಕ್ರಮಗಳು ಜರುಗಿದವು.

ಕಲಬುರಗಿ ಕೃಷಿ ಕಾಲೇಜಿನ ನಿವೃತ್ತ ಡೀನ್ ಸುರೇಶ ಪಾಟೀಲ ಉದ್ಘಾಟಿಸಿ, ಜ್ಞಾನಕ್ಕಿಂತ ಪ್ರಪಂಚದಲ್ಲಿ ಯಾವುದೂ ಇಲ್ಲ. ಕೇವಲ ಪಠ್ಯಕ್ರಮವನ್ನು ಬೋಧಿಸುವವರು ಮಾತ್ರ ಶಿಕ್ಷಕರಲ್ಲ. ಯಾವುದೇ ಒಂದು ವಿಷಯದ ಕುರಿತು ಜ್ಞಾನವನ್ನು ನೀಡಿದವರಿಗೆ ಗುರುಗಳು ಎಂದು ಕರೆಯಲಾಗುತ್ತದೆ. ನಮ್ಮನ್ನು ಹೊತ್ತು ಬೆಳೆಸಿ, ಒಳ್ಳೆಯ ಸಂಸ್ಕಾರ ನೀಡಿ ಒಂದು ಉನ್ನತ ಹುದ್ದೆಗೆ ಹೋಗಲು ಕಾರಣೀಭೂತರಾದ ತಂದೆ–ತಾಯಿಗಳು ನಿಜವಾದ ಗುರುಗಳು. ಶಿಕ್ಷಕರನ್ನು ದೈಹಿಕ ಸಾಮರ್ಥ್ಯದಿಂದ ಅಳೆಯಲಿಕ್ಕೆ ಸಾಧ್ಯವಿಲ್ಲ. ಅವರಲ್ಲಿರುವ ಜ್ಞಾನದಿಂದ ಅಳೆಯಲು ಸಾಧ್ಯ ಎಂದು ಹೇಳಿದರು.

ಬೀದರ್ ತೋಟಗಾರಿಕೆ ಕಾಲೇಜಿನ ಡೀನ್ ಎಸ್. ವಿ. ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಕರು ಎಂದರೆ ಬರೀ ಪಾಠ ಮಾಡುವುದಷ್ಟೇ ಅಲ್ಲ, ವಿದ್ಯಾರ್ಥಿಗಳು ಸಮಾಜದಲ್ಲಿ ಒಳ್ಳೆಯ ಆದರ್ಶ ವ್ಯಕ್ತಿಗಳಾಗಿ ಬದುಕುವಂತೆ ಮಾಡಬೇಕು ಎಂದು ಹೇಳಿದರು.

ಎನ್‌ಎಸ್‌ಎಸ್ ಅಧಿಕಾರಿ ವಿಜಯ ಮಹಾಂತೇಶ, ಪ್ರಾಧ್ಯಾಪಕರಾದ ನಾಗೇಂದ್ರ ಕವಳೆ, ಶ್ರೀನಿವಾಸ ಎನ್., ಅರವಿಂದಕುಮಾರ, ಜಾಹ್ನವಿ ಡಿ.ಆರ್., ಅನುರಾಧಾ, ಉಪ ಗ್ರಂಥಪಾಲಕ ಏಕನಾಥ ನಿಂಗಪ್ಪ, ಪ್ರಿಯಾಂಕಾ ಮುಳಗೆ, ದೀಪಾ ಮುಸ್ಕೆ ಉಪಸ್ಥಿತರಿದ್ದರು. ಹಿರಿಯ ಕ್ಷೇತ್ರ ಸಹಾಯಕ ಉದಯಕುಮಾರ ಭಕ್ತಿಗೀತೆ ಹಾಡಿದರು.

**ಗುರುನಾನಕ್ ಶಾಲೆ:** ನಗರದ ಝೀರಾ ಕನ್ವೆನ್ಷನ್ ಹಾಲ್‌ನಲ್ಲಿ ಸಂಸ್ಥೆ ಅಧ್ಯಕ್ಷ ಎಸ್. ಬಲಬೀರ್ ಸಿಂಗ್ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ, ದೀಪ ಬೆಳಗಿಸಿದರು.

ಸಂಸ್ಥೆಯ ಉಪಾಧ್ಯಕ್ಷೆ ರೇಷ್ಮಾ ಕೌರ್ ಮಾತನಾಡಿ, ಪ್ರತಿಯೊಬ್ಬ ಶಿಕ್ಷಕರು ಸೇವಾ ಮನೋಭಾವನೆಯಿಂದ ಸೇವೆ ಸಲ್ಲಿಸಿ, ವಿದ್ಯಾರ್ಥಿಗಳಲ್ಲಿ ಶಿಸ್ತು, ದೇಶದ ಬಗ್ಗೆ ಗೌರವ ಬೆಳೆಸಬೇಕು ಎಂದು ಹೇಳಿದರು.

ಸಂಸ್ಥೆ ಅಧೀನದ ಶಾಲಾ ಕಾಲೇಜುಗಳ 800 ಸಿಬ್ಬಂದಿ ಪಾಲ್ಗೊಂಡಿದ್ದರು. ಶಿಕ್ಷಕ–ಶಿಕ್ಷಕಿಯರಿಗೆ ವಿವಿಧ ರೀತಿಯ ಸ್ಪರ್ಧೆ ಏರ್ಪಡಿಸಿ, ಬಹುಮಾನ ವಿತರಿಸಲಾಯಿತು. ಸಂಸ್ಥೆಯ ಪ್ರಾಂಶುಪಾಲ ಎಸ್. ಪುನೀತ್ ಸಿಂಗ್, ಎಸ್. ಪವೀತ್ ಸಿಂಗ್, ನೀಶಾ ಕೌರ್, ನಿರ್ದೇಶಕಿ ಜಸ್ಮಿನೀತ್ ಕೌರ್, ಗುರುನಾನಕ್ ಆಸ್ಪತ್ರೆಯ ಸಿಇಒ ಕಾಮೇಶ್ವರ ರಾವ್ ಉಪಸ್ಥಿತರಿದ್ದರು.

**ಬಸವೇಶ್ವರ ಬಿ.ಇಡಿ. ಕಾಲೇಜು:** ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ. ರಜನೀಶ್ ವಾಲಿ ಉದ್ಘಾಟಿಸಿ, ಮಕ್ಕಳ ಉತ್ತಮ ವ್ಯಕ್ತಿತ್ವ ರೂಪಿಸುವವನೇ ನಿಜವಾದ ಶಿಕ್ಷಕ. ಶಿಕ್ಷಕ ಮಕ್ಕಳ ಕನಸುಗಳಿಗೆ ರೆಕ್ಕೆ ನೀಡುತ್ತಾನೆ. ಇಂದು ಜ್ಞಾನ ಪಡೆಯಲು ಅನೇಕ ಮಾರ್ಗಗಳಿದ್ದರೂ, ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ವಿವೇಕ ಬೆಳೆಸಲು ಶಿಕ್ಷಕ ಬೇಕೇಬೇಕು ಎಂದು ತಿಳಿಸಿದರು.

ಶಿಕ್ಷಕರು ಮಕ್ಕಳಿಗೆ ಜ್ಞಾನದ ಜತೆಗೆ ಸಂಸ್ಕಾರವನ್ನೂ ನೀಡುತ್ತಾರೆ' ಎಂದು ವಚನಾಮೃತ ಕನ್ನಡ ಸಂಘದ ಅಧ್ಯಕ್ಷ ಸಿದ್ರಾಮಪ್ಪ ಮಾಸಿಮಾಡೆ ಹೇಳಿದರು. ಪ್ರಾಚಾರ್ಯ ಮಲ್ಲಿಕಾರ್ಜುನ ಕನಕಟ್ಟೆ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕ ಸಂತೋಷಕುಮಾರ ಸಜ್ಜನ್, ಪ್ರಾಧ್ಯಾಪಕರಾದ ವೀಣಾ ಜಲಾದೆ, ಸಿದ್ಧರಾಮ ನೇಂಗಾ, ಶಿಲ್ಪಾ ಹಿಪ್ಪರಗಿ, ರಾಜಕುಮಾರ ಶಿಂಧೆ, ಪಾಂಡುರಂಗ ಕುಂಬಾರ, ಸಿಬ್ಬಂದಿ ಅಶೋಕ ರೇವಣೆ, ಸುವರ್ಣಾ ಪಾಟೀಲ, ಶಶಾಂಕ್ ಬಿರಾದಾರ ಇದ್ದರು. ರಾಧಿಕಾ ಸ್ವಾಗತಿಸಿದರು. ವೈಷ್ಣವಿ, ಉಷಾರಾಣಿ ನಿರೂಪಿಸಿದರು. ರಾಜಕುಮಾರ ವಂದಿಸಿದರು.

---

## ತಿರುಪತಿ ಬಳಿಕ ಮಂತ್ರಾಲಯ ಮಠದ ಮೇಲೆ ಸೈಬರ್ ವಂಚಕರ ಕಣ್ಣು: ಭಕ್ತರಿಗೆ ಖುದ್ದಾಗಿ ಶ್ರೀಗಳಿಂದ ಎಚ್ಚರಿಕೆ, ಕಿವಿಮಾತು



**ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀಗಳು ಮಾಧ್ಯಮಗಳೊಂದಿಗೆ ಮಾತನಾಡಿದರು.**

**ಮಂತ್ರಾಲಯ, ಸೆ.7:** ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನ ಮತ್ತು ಆನ್ ಲೈನ್ ಸೇವೆಯ ಹೆಸರಲ್ಲಿ ಭಕ್ತರಿಗೆ ವಂಚಿಸುವ ಜಾಲವೊಂದು ತಲೆಯೆತ್ತಿದ್ದು, ಈ ಬಗ್ಗೆ ಭಕ್ತರು ಮೋಸ ಹೋಗದೆ ಎಚ್ಚರಿಕೆವಹಿಸುವಂತೆ ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ಭಕ್ತರಿಗೆ ಸಲಹೆ ನೀಡಿದ್ದಾರೆ.

ಮಂತ್ರಾಲಯದ ರಾಯರ ಹೆಸರಲ್ಲಿ ಆನ್‌ಲೈನ್ ಮೂಲಕ ಭಕ್ತರಿಗೆ ವಂಚಿಸುತ್ತಿರುವ ಪ್ರಕರಣಗಳು ಬೆಳಕಿಗೆ ಬಂದ ಬೆನ್ನಲ್ಲೇ ಶ್ರೀಗಳು ಪತ್ರಿಕೇ ಹೇಳಿಕೆ ನೀಡಿದ್ದು, ರಾಯರ ದರ್ಶನ ಹೆಸರಲ್ಲಿ ಆನ್‌ಲೈನ್ ವಂಚನೆ ನಡೆಯುತ್ತಿದೆ. ಕಳೆದೊಂದು ವಾರದಿಂದ ರಾಯರ ಮಠದಲ್ಲಿ ಆರಾಧಾನೆ, ಗುರುವೈಭೋತ್ಸವ ಸೇರಿ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿವೆ. ರಾಯರ ದರ್ಶನ ಪಡೆಯಲು ಕರ್ನಾಟಕ ಸೇರಿ ದೇಶದ ಮೂಲೆಮೂಲೆಗಳಿಂದ ಭಕ್ತರು ಮಂತ್ರಾಲಯಕ್ಕೆ ಆಗಮಿಸುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಸೈಬರ್ ವಂಚಕರು. ಆನ್‌ಲೈನ್ ಮೂಲಕ ಟಿಕೆಟ್ ಬುಕಿಂಗ್, ರಾಯರ ಹೆಸರಿನಲ್ಲಿ ಭಕ್ತರಿಂದ ಆನ್‌ಲೈನ್ ಮೂಲಕ ದೇಣಿಗೆ ಸಂಗ್ರಹ, ವಿಐಪಿ ದರ್ಶನ, ಪರಿಮಳ ಪ್ರಸಾದ ವಿತರಣೆ ಹೆಸರಿನಲ್ಲಿ ಭಕ್ತರಿಗೆ ವಂಚಿಸುತ್ತಿರುವ ಆರೋಪ ಕೇಳಿಬಂದಿದೆ. ಹೀಗಾಗಿ ಖಾಸಗಿ ವೆಬ್‌ಸೈಟ್, ವಾಟ್ಸಪ್ ಗ್ರೂಪ್ ಎಚ್ಚರಿಕೆಯಿಂದ ಇರುವಂತೆ ಖುದ್ದಾಗಿ ಮಂತ್ರಾಲಯ ಶ್ರೀಗಳು ಸಲಹೆ ನೀಡಿದ್ದಾರೆ.

**ಆನ್‌ಲೈನ್ ಸೇವೆ ಇಲ್ಲ: ಶ್ರೀಗಳು ಸ್ಪಷ್ಟನೆ**

ರಾಯರ ಹೆಸರಲ್ಲಿ ದರ್ಶನ, ದೇಣಿಗೆ ಸಂಗ್ರಹದಂತಹ ಯಾವುದೇ ಆನ್‌ಲೈನ್ ಸೇವೆಗಳು ಶ್ರೀಮಠದಿಂದ ಇರುವದಿಲ್ಲ. ಪರಿಮಳ ಪ್ರಸಾದ ಕೂಡ ಆನ್‌ಲೈನ್‌ನಲ್ಲಿ ಒದಗಿಸುವ ವ್ಯವಸ್ಥೆ ಇರುವಲ್ಲ. ದೇಣಿಗೆ ನೀಡಲು ಬಯಸುವ ಭಕ್ತರು ಯಾವುದೇ ಸೇವೆ ಬೇಕಿದ್ದಲ್ಲಿ ರಾಘವೇಂದ್ರ ಸ್ವಾಮಿ ಮಠದ ಕಾರ್ಯಾಲಯದ ಆಡಳಿತ ಮಂಡಳಿಯನ್ನು ನೇರವಾಗಿ ಸಂಪರ್ಕಿಸು ವಂತೆ ಶ್ರೀಗಳು ತಿಳಿಸಿದ್ದಾರೆ. ಇತ್ತೀಚೆಗೆ ಹಿಂದೂಗಳ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ವಿಶ್ವವಿಖ್ಯಾತ ತಿರುಪತಿ ದೇವಸ್ಥಾನದ ಹೆಸರಿನಲ್ಲೂ ಭಕ್ತರಿಗೆ ವಂಚಿಸುತ್ತಿದ್ದ 249 ನಕಲಿ ವೆಬ್‌ಸೈಟ್‌ಗಳು ಪತ್ತೆಯಾಗಿದ್ದವು. ಇದಲ್ಲದೆ ತಿರುಪತಿ ದರ್ಶನ, ಹೋಟೇಲ್ ಬುಕಿಂಗ್, ಪ್ರಸಾದ್ ವಿತರಣೆ ಹೆಸರಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾದ ಬಳಿಕ ಟಿಟಿಡಿ ಇದರ ವಿರುದ್ಧ ಕಠಿಣ ಕ್ರಮ ಕ್ರಮಕ್ಕೆ ಮುಂದಾಗಿ ಪ್ರಕರಣ ದಾಖಲಿಸಿತ್ತು. ತಿರುಪತಿ ದೇವಸ್ಥಾನ ಬಳಿಕ ವಂಚಕರು ಇದೀಗ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲೂ ಭಕ್ತರನ್ನ ಮೋಸಗೊಳಿಸುವ ಸಂಚು ನಡೆಸಿದ್ದಾರೆ. ಹೀಗಾಗಿ ಭಕ್ತರು ಆನ್‌ಲೈನ್ ಅಥವಾ ವಾಟ್ಸಪ್ ಗ್ರೂಪ್‌ಗಳ ಮೂಲಕ ಬರುವ ಯಾವುದೇ ಸಂದೇಶಗಳನ್ನ ನಂಬಿ ಮೋಸ ಹೋಗಬಾರದು ಎಂದು ಶ್ರೀಗಳು ಸಲಹೆ ನೀಡಿದ್ದಾರೆ.

---

## ಸ್ವಾಭಿಮಾನದ ಬದುಕು ಸರ್ಕಾರದ ಧ್ಯೇಯ: ಡಾ.ಶರಣಪ್ರಕಾಶ ಪಾಟೀಲ್



**ಯಾದಗಿರಿ, ಸೆ.7:** ಸಮಾಜದ ಕಟ್ಟಕಡೆಯ ಬಡ ಹಾಗೂ ಸಾಮಾನ್ಯ ಜನರಿಗೆ ಸ್ವಾಭಿಮಾನದ ಬದುಕು ರೂಪಿಸಿಕೊಡಲು ರಾಜ್ಯ ಸರ್ಕಾರ ಸದಾ ಸಿದ್ಧವಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಪ್ರಕಾಶ ಪಾಟೀಲ್ ಹೇಳಿದರು.

ಜಿಲ್ಲೆಯ ತಿಮ್ಮಾಪುರದ ವೀರಶೈವ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ ಪ್ರಜಾಸೇವಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೊಸ ಕಲ್ಪನೆಯ ಪ್ರಜಾಸೇವಾ ಇಲಾಖೆಯನ್ನೇ ಹುಟ್ಟು ಹಾಕಿದ್ದಾರೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದ ಅಭಿಯಾನದಡಿ ನಿರಂತರ ಕೆಲಸ ನಡೆಯಲಿದೆ ಎಂದರು.

ರಾಜ್ಯದ ಎಲ್ಲ ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿ ಮೊದಲ ಮತ್ತು ಮೂರನೇ ಶನಿವಾರ ಸಂಬಧಿತ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಪ್ರಜಾಸೇವಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಜಿಲ್ಲೆಯ ಸಾರ್ವಜನಿಕರು ಸಹ ನಿಗದಿತ ತಾಲೂಕು ಕೇಂದ್ರಗಳಲ್ಲಿ ತಮ್ಮ ಸಮಸ್ಯೆಗಳ ಕುರಿತ ಅರ್ಜಿ ಸಲ್ಲಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದು. ಇತರ ಶನಿವಾರಗಳಂದು ಹೋಬಳಿ ಮಟ್ಟದಲ್ಲೂ ಸಮಸ್ಯೆಗಳಿಗೆ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ರಾಜಾ ವೇಣುಗೋಪಾಲ ನಾಯಕ ಮಾತನಾಡಿ, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಕಾಳಜಿಯಿಂದ ರಾಜ್ಯದಾದ್ಯಂತ ಪ್ರಜಾಸೇವಾ ಇಲಾಖೆ ಮೂಲಕ ಜನರ ಅಹವಾಲುಗಳಿಗೆ ಸ್ಪಂದಿಸಲಾಗುವುದು ಎಂದು ಹೇಳಿದರು.

**ರಾಜ್ಯ ಸರ್ಕಾರ ಜನಸ್ನೇಹಿಯಾಗಿದೆ. ಜನರು ಮತ್ತು ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಮುಖ್ಯ ಉದ್ದೇಶ ಈ ಅಭಿಯಾನ ಹೊಂದಿದೆ. ಚುನಾವಣೆಗೆ ಮುನ್ನ ನೀಡಿದ ಭರಸವಸೆಯಂತೆ ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಲಾಗಿದೆ. ಹಾಲಿ ಸಿಎಂ ಡಿ.ಕೆ. ಶಿವಕುಮಾರ್ ಈ ಹೊಸ ಇಲಾಖೆ ಹುಟ್ಟು ಹಾಕಿ ಅಭಿಯಾನ ಆರಂಭಿಸಿದ್ದು, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶ ಇದರದು.**

**– ಡಾ.ಶರಣಪ್ರಕಾಶ ಪಾಟೀಲ್**
**ಜಿಲ್ಲಾ ಉಸ್ತುವಾರಿ ಸಚಿವ**

---

## ಗ್ಯಾರಂಟಿ ಯೋಜನೆಗಳೇ ಕಾಂಗ್ರೆಸ್‌ಗೆ ಶ್ರೀರಕ್ಷೆ: ಸಚಿವ ಯತೀಂದ್ರ



**ರಾಯಚೂರು, ಸೆ.7:** ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳು ಹಾಗೂ ಕಾರ್ಯಕರ್ತರ ಸಂಘಟನಾ ಶ್ರಮ ಮತ್ತು ನಮ್ಮ ಸರ್ಕರದ ಗ್ಯಾರಂಟಿ ಯೋಜನೆಗಳೇ ಕಾಂಗ್ರೆಸ್ ಸರ್ಕಾರಕ್ಕೆ ಶ್ರೀರಕ್ಷೆಯಾಗಿದ್ದು, ಮುಂದಿನ ದಿನಗಳಲ್ಲಿ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿರುವುದಕ್ಕೆ ಹೆಮ್ಮೆ ಇದೆ. ದೇಶದಲ್ಲಿ ಮೂಲ ಸೌಕರ್ಯಗಳ ಕೊರತೆಯಿದ್ದ ಕಠಿಣ ಕಾಲದಲ್ಲೂ ಕಾಂಗ್ರೆಸ್ ದೃಢ ಸಂಕಲ್ಪದಿಂದ ದೇಶವನ್ನು ಕಟ್ಟಿದೆ. ಸಮಾನತೆಯ ಆಶಯವನ್ನು ಸಾರುವ ಸಂವಿಧಾನವನ್ನು ಜಾರಿಗೆ ತರುವ ಮೂಲಕ ಅಸಮಾನತೆಯ ವ್ಯವಸ್ಥೆಯನ್ನು ಹೋಗಲಾಡಿಸುವಲ್ಲಿ ಪಕ್ಷ ಮಹತ್ವದ ಪಾತ್ರ ವಹಿಸಿದೆ ಎಂದರು.

ಕೇಂದ್ರದ ನರೇಂದ್ರ ಮೋದಿ ಸರ್ಕಾರ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹಾಕಿದೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಆರ್ಥಿಕ ಆಸರೆಯಾಗಿವೆ. ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ಸೇರ್ಪಡೆಗೊಳಿಸಿ ಸಂಘಟನೆಯನ್ನು ಯಶಸ್ವಿಗೊಳಿಸಬೇಕು. ಪಕ್ಷಕ್ಕಾಗಿ ಶ್ರಮಿಸಿ ಕಾಂಗ್ರೆಸ್ ಅನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು. ರಾಹುಲ್ ಗಾಂಧಿ ಅವರು ದೇಶವನ್ನು ಒಗ್ಗೂಡಿಸುವ ಉದ್ದೇಶದಿಂದ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಭಾರತ್ ಜೋಡೋ ಪಾದಯಾತ್ರೆ ನಡೆಸಿ, ಜನರ ಸಮಸ್ಯೆಗಳನ್ನು ಆಲಿಸಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರಂತಹ ದೂರದೃಷ್ಟಿಯ ಯುವ ನಾಯಕ ಕಾಂಗ್ರೆಸ್‌ಗೆ ಸಿಕ್ಕಿರುವುದು ಹೆಮ್ಮೆಯ ಸಂಗತಿ ಎಂದರು.

ಕರ್ನಾಟಕದಲ್ಲಿ ಯುವಕರಲ್ಲಿ ಹೊಸ ಚೈತನ್ಯ ಹಾಗೂ ಸಾಮಾಜಿಕ ಬದ್ಧತೆ ಮೂಡಿಸುವ ಉದ್ದೇಶದಿಂದ 'ಭಾರತ್ ಜೋಡೋ' ಸಂಘಗಳನ್ನು ಸ್ಥಾಪಿಸಿ ಮುನ್ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಶ್ರೀನಿವಾಸ ಮಾತನಾಡಿ, ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ಸಿದ್ಧಾಂತದಡಿ ಕೆಲಸ ಮಾಡಬೇಕು. ಭಿನ್ನಮತ ಬದಿಗೊತ್ತಿ ವ್ಯಕ್ತಿಗಿಂತ ಪಕ್ಷವೇ ಮುಖ್ಯ ಎಂಬ ಮನೋಭಾವದಿಂದ ಸಂಘಟನೆ ಬಲಪಡಿಸಬೇಕು ಎಂದು ಸಲಹೆ ನೀಡಿದರು. ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಪಾಟೀಲ ಇಟಗಿ, ಮಹಮ್ಮದ್ ಶಾಲಂ, ಅಮರೇಗೌಡ ಹಂಚಿನಾಳ, ಗಿರಿಯಪ್ಪ ನೆಲಹಾಳ, ಶ್ರೀದೇವಿ ನಾಯಕ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.


ಹಾರ್ದಿಕ ಅಭಿನಂದನೆಗಳು
ಸತತ ಏಳನೇ ಬಾರಿಗೆ ರಾಜ್ಯ
ಸಹಕಾರ ಮಂಡಲದ ಅಧ್ಯಕ್ಷರಾಗಿ
ಅವಿರೋಧವಾಗಿ ಆಯ್ಕೆಯಾದ, ಮಾಜಿ
ಸಚಿವರು ಹಾಗೂ ಹಾಲಿ ಶಾಸಕರಾದ
ಸನ್ಮಾನ್ಯ ಶ್ರೀ ಜಿ.ಟಿ.ದೇವೇಗೌಡ
ಅವರಿಗೆ ಅಭಿನಂದನೆಗಳು
ಅಭಿನಂದನೆ ಕೋರುವವರು:
ರಾಜ್ಯ ಸಹಕಾರ ಮಹಾಮಂಡಲದ
ಸರ್ವ ಸದಸ್ಯರು ಹಾಗೂ ಆಡಳಿತ ಮಂಡಳಿ ವರ್ಗ